ಗುರುವಾರ, ಜನವರಿ 2, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಾರ್ಥನೆ
ಬೆಂಗಳೂರಿನ ಶಿವಾಜಿನಗರದಲ್ಲಿ ಹೊಸ ವರ್ಷದ ಅಂಗವಾಗಿ ಬಾಲಕಿಯರಿಬ್ಬರು ಚರ್ಚ್‌ನಲ್ಲಿ ಮೇಣದ ಬತ್ತಿ ಬೆಳಗಿ ಪ್ರಾರ್ಥಿಸಿದರು



first circle
BROTHERHOOD IN BUSINESS



ಪರಮಪೂಜ್ಯ ಜಗದ್ಗುರು
ಶ್ರೀಶ್ರೀಶ್ರೀ ಡಾ॥ ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು
ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ

ಉದ್ಯಮಿ ಒಕ್ಕಲಿಗ
UDYAMI VOKKALIGA




FC EXPO 2025
3rd EDITION
3, 4 ಮತ್ತು 5 ಜನವರಿ




ಈ ಬಾರಿಯ ಎಫ್‌ಸಿ ಎಕ್ಸ್‌ಪೋ 2025 ಜನವರಿ ದಿನಾಂಕ 3, 4 ಮತ್ತು 5 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿರುವ ಗಾಯಿತ್ರಿ ಗ್ರಾಂಡ್ ಮತ್ತು ಗಾಯತ್ರಿ ವೃಕ್ಷದ ಸಭಾಂಗಣಗಳಲ್ಲಿ ಉದ್ಯಮಿ ಒಕ್ಕಲಿಗ ಪ್ರದರ್ಶನ–ಸಮ್ಮೇಳನ ಹಾಗೂ ಮೊದಲ ಬಾರಿಗೆ ಉದ್ಯಮಿ ಒಕ್ಕಲಿಗ ಜಿಲ್ಲಾ ಸಮ್ಮೇಳನಗಳು ಜರುಗಲಿವೆ, ಎಲ್ಲರಿಗೂ ಆದರದ ಸುಸ್ವಾಗತ.



ಪರಮಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಡಾ॥ ನಂಜಾವಧೂತ ಮಹಾಸ್ವಾಮೀಜಿಯವರು
ಶ್ರೀ ಸ್ಪಟಿಕಪುರಿ ಮಹಾಸಂಸ್ಥಾನ ಮಠ




ಶ್ರೀ ಹೆಚ್ ಡಿ ದೇವೇಗೌಡ
ಮಾಜಿ ಪ್ರಧಾನ ಮಂತ್ರಿಗಳು, ಭಾರತ ಸರ್ಕಾರ



ಶ್ರೀ ಬಿ ಎನ್ ಬಚ್ಚೇಗೌಡ
ಮಾಜಿ ಸಂಸದರು, ಚಿಕ್ಕಬಳ್ಳಾಪುರ




ಶ್ರೀ ಡಿ ಕೆ ಶಿವಕುಮಾರ್
ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ



ಶ್ರೀ ಹೆಚ್ ಡಿ ಕುಮಾರಸ್ವಾಮಿ
ಉಕ್ಕು ಮತ್ತು ಭಾರೀ ಕೈಗಾರಿಕೆಗಳ ಸಚಿವರು
ಭಾರತ ಸರ್ಕಾರ




ಶ್ರೀಮತಿ ಶೋಭಾ ಕರಂದ್ಲಾಜೆ
ಎಂಎಸ್‌ಎಂಇ, ಕಾರ್ಮಿಕ ಮತ್ತು ಉದ್ಯೋಗ ಸಚಿವರು
ಭಾರತ ಸರ್ಕಾರ



ಶ್ರೀ ಕೃಷ್ಣ ಬೈರೇಗೌಡ
ಕಂದಾಯ ಸಚಿವರು, ಕರ್ನಾಟಕ ಸರ್ಕಾರ



ಶ್ರೀ ಚೆಲುವರಾಯಸ್ವಾಮಿ
ಕೃಷಿ ಸಚಿವರು, ಕರ್ನಾಟಕ ಸರ್ಕಾರ



ಶ್ರೀ ಕೆ ವೆಂಕಟೇಶ್
ಪಶುಸಂಗೋಪನೆ ಮತ್ತು ರೇಷ್ಮೆ ಕೃಷಿ ಸಚಿವರು
ಕರ್ನಾಟಕ ಸರ್ಕಾರ



ಶ್ರೀ ಎಂ ಸಿ ಸುಧಾಕರ್
ಉನ್ನತ ಶಿಕ್ಷಣ ಸಚಿವರು
ಕರ್ನಾಟಕ ಸರ್ಕಾರ



ಶ್ರೀ ಸಿ ಎನ್ ಅಶ್ವತ್ಥನಾರಾಯಣ
ಮಾಜಿ ಉಪಮುಖ್ಯಮಂತ್ರಿ, ಕರ್ನಾಟಕ ಸರ್ಕಾರ



ಶ್ರೀ ಜಿ ಟಿ ದೇವೇಗೌಡ
ಮಾಜಿ ಸಚಿವರು
ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ



ಶ್ರೀ ಗೋಪಾಲಯ್ಯ
ಮಾಜಿ ಸಚಿವರು
ಶಾಸಕರು, ಮಹಾಲಕ್ಷ್ಮಿ ವಿಧಾನಸಭಾ ಕ್ಷೇತ್ರ



ಶ್ರೀ ಬಿ ಎಲ್ ಶಂಕರ್
ಮಾಜಿ ಸಂಸದರು, ಚಿಕ್ಕಮಗಳೂರು



ಶ್ರೀ ಎ ಟಿ ರಾಮಸ್ವಾಮಿ
ಮಾಜಿ ಶಾಸಕರು
ಅರಕಲಗೂಡು ವಿಧಾನಸಭಾ ಕ್ಷೇತ್ರ

ಗುರುವಾರ, ಜನವರಿ 2, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 2 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಪ್ರವಾಹ ಪರಿಸ್ಥಿತಿ ನಿರ್ವಹಣೆಗೆ ಸ್ಪಾಂಜ್ ನಗರ ಪರಿಕಲ್ಪನೆ



ಆಳ-ಅಗಲ
ಚೀನಾ ದುಸ್ಸಾಹಸ ಭಾರತಕ್ಕೆ ಕಂಟಕ?

ಪ್ರಿಯಾಂಕ್ ರಾಜೀನಾಮೆಗೆ ಬಿಜೆಪಿ ಪಟ್ಟು ಬಿಗಿ 6


ಭಲವಾದಿ, ಸಿ.ಟಿ.ರವಿ ವಿರುದ್ಧ ಎಫ್‌ಐಆರ್ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
78,507	23,742	₹80,440 (ಬೆಂಗಳೂರು)	₹91,000 (ಬೆಂಗಳೂರು)	85.64

- ರಾಜ್ಯಕ್ಕೆ ಅತಿ ಕಡಿಮೆ ನೀರು ಹಂಚಿಕೆ
- ಮತ್ತೆ ಮಾತುಕತೆಗೆ ಕೇಂದ್ರ ನಿರ್ಧಾರ

ನದಿ ಜೋಡಣೆಗೆ ಪಂಚ ರಾಜ್ಯಗಳ ಅಸಮ್ಮತಿ

ಗೋದಾವರಿ–ಕಾವೇರಿ ನದಿ ಜೋಡಣೆ ಯೋಜನೆ ಮಾರ್ಗ



• ಮಂಜುನಾಥ ಹೆಬ್ಬಾರ್

ನವದೆಹಲಿ: ಗೋದಾವರಿ–ಕೃಷ್ಣಾ–ಕಾವೇರಿ ನದಿಗಳನ್ನು ಜೋಡಿಸುವ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಗೆ ರಾಜ್ಯ ಸರ್ಕಾರಗಳು ತಣ್ಣೀರು ಎರಚಿವೆ. ನದಿ ಜೋಡಣೆಯ ಕರಡು ಒಪ್ಪಂದಕ್ಕೆ ಕರ್ನಾಟಕ ಸೇರಿ ಐದು ರಾಜ್ಯಗಳು ಸಹಿ ಹಾಕಲು ನಿರಾಕರಿಸಿವೆ. ರಾಜ್ಯಗಳ ಜತೆಗೆ ಇನ್ನೊಂದು ಸುತ್ತಿನ ಮಾತುಕತೆ ನಡೆಸಿ ಮನವೊಲಿಸಲು ಜಲಶಕ್ತಿ ಸಚಿವಾಲಯ ನಿರ್ಧರಿಸಿದೆ.

ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯ ನೇತೃತ್ವದಲ್ಲಿ ನವದೆಹಲಿಯಲ್ಲಿ ಡಿಸೆಂಬರ್‌ನಲ್ಲಿ ನಡೆದ ನದಿ ಜೋಡಣೆ ಸಮಿತಿ ಸಭೆಯು ಒಮ್ಮತಕ್ಕೆ ಬರಲು ವಿಫಲವಾಯಿತು. ನದಿ ಜೋಡಣೆಯ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಿರುವ ಸಂಸ್ಥೆಯು ಕರಡು ಒಪ್ಪಂದಕ್ಕೆ ಸಹಿ ಹಾಕುವಂತೆ ರಾಜ್ಯ ಸರ್ಕಾರಗಳಿಗೆ ಒತ್ತಾಯಿಸಿತು. ಆದರೆ, ಯೋಜನೆಯ ಈಗಿನ ಸ್ವರೂಪಕ್ಕೆ ತಮ್ಮ ಸಹಮತ ಇಲ್ಲ ಎಂದು ರಾಜ್ಯ ಸರ್ಕಾರಗಳು ಸ್ಪಷ್ಟಪಡಿಸಿದವು.

‘ಗೋದಾವರಿ ಮತ್ತು ಕೃಷ್ಣಾ ಕಣಿವೆಗಳ ನ್ಯಾಯಮಂಡಳಿಯ ತೀರ್ಪುಗಳನ್ನು ಗಮನದಲ್ಲಿಟ್ಟುಕೊಂಡು ಗೋದಾವರಿ ನದಿಯ ಹೆಚ್ಚುವರಿ ನೀರಿನ ಹಂಚಿಕೆಯನ್ನು ನಿರ್ಧರಿಸುವುದಾಗಿ ಕೇಂದ್ರ ಸರ್ಕಾರ 2015ರಲ್ಲಿ ಕರ್ನಾಟಕ ಸರ್ಕಾರಕ್ಕೆ ತಿಳಿಸಿತ್ತು. ಆದರೆ, ರಾಜ್ಯಕ್ಕೆ ಕಡಿಮೆ ನೀರು ಹಂಚಿಕೆ ಮಾಡಲಾಗಿದೆ. ಈ ಅನ್ಯಾಯ ಸರಿಪಡಿಸದಿದ್ದರೆ ಒಪ್ಪಂದಕ್ಕೆ ಸಹಿ ಹಾಕುವ ಪ್ರಶ್ನೆಯೇ ಇಲ್ಲ’ ಎಂದು ರಾಜ್ಯ ಸರ್ಕಾರ ಸ್ಪಷ್ಟಪಡಿಸಿತು.

ಗೋದಾವರಿ ನದಿಯ ಹೆಚ್ಚುವರಿ ನೀರನ್ನು ಬೇರೆ ರಾಜ್ಯಗಳಿಗೆ ಬಿಟ್ಟುಕೊಡಲು ಒಡಿಶಾ ಹಾಗೂ ಛತ್ತೀಸಗಢ ಸರ್ಕಾರಗಳು ಒಪ್ಪಲಿಲ್ಲ.‘ಕೃಷ್ಣಾ ಜಲವಿವಾದ ಇನ್ನೂ ಇತ್ಯರ್ಥವಾಗಿಲ್ಲ. ಇಂತಹ ಸನ್ನಿವೇಶದಲ್ಲಿ ಒಪ್ಪಂದ ಮಾಡಿಕೊಳ್ಳಲು ಹೇಗೆ ಸಾಧ್ಯ’ ಎಂಬುದು ತೆಲಂಗಾಣ ಹಾಗೂ ಆಂಧ್ರ ಪ್ರದೇಶ ಸರ್ಕಾರಗಳ ಪ್ರಶ್ನೆ. ಇನ್ನೊಂದೆಡೆ, ಒಪ್ಪಂದಕ್ಕೆ ಸಹಿ ಹಾಕಲು ತಮಿಳುನಾಡು ಸರ್ಕಾರ ಉತ್ಸುಕತೆ ತೋರಿದೆ. ‘ಈ ನದಿ ಜೋಡಣೆಯಿಂದ ಹೆಚ್ಚು ಅನುಕೂಲವಾಗುವುದು ತಮಿಳುನಾಡಿಗೆ. ಕಾವೇರಿ ನದಿಯ ಹೆಚ್ಚುವರಿ ನೀರು ಲಭ್ಯವಾಗಲಿದೆ ಎಂಬ ಕಾರಣಕ್ಕೆ ತಮಿಳುನಾಡು ಸರ್ಕಾರವು ನದಿ ಜೋಡಣೆಗೆ ಒತ್ತಡ ಹೇರುತ್ತಿದೆ’ ಎಂದು ಮೂಲಗಳು ತಿಳಿಸಿವೆ.

‘ನದಿ ಜೋಡಣೆಯಾದ ಬಳಿಕ ದಕ್ಷಿಣದ ರಾಜ್ಯಗಳಿಗೆ 147 ಟಿಎಂಸಿ ಅಡಿ ನೀರು ಲಭ್ಯವಾಗಲಿದೆ. ರಾಜ್ಯಕ್ಕೆ 10.74 ಟಿಎಂಸಿ ಅಡಿ ನೀರು ನಿಗದಿಪಡಿಸಲಾಗಿದೆ. ಇದು ಬಹಳ ಕಡಿಮೆ. ಈ ಯೋಜನೆಯಿಂದ ರಾಜ್ಯಕ್ಕೆ ಭಾರಿ ಪ್ರಯೋಜನವೂ ಆಗುವುದಿಲ್ಲ’ ಎಂದು ಜಲಸಂಪನ್ಮೂಲ ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಬೇಡ್ತಿ ನೀರಿಗೂ ಕನ್ನ

- ಗೋದಾವರಿ–ಕಾವೇರಿ ನದಿಗಳ ಜೋಡಿಸುವ ಯೋಜನೆಯಲ್ಲಿ ಮೂರು ಭಾಗಗಳಿವೆ. ಈ ಯೋಜನೆಯಲ್ಲಿ ಗೋದಾವರಿ–ಕೃಷ್ಣಾ (ನಾಗಾರ್ಜುನಸಾಗರ), ಕೃಷ್ಣಾ–ಪೆನ್ನಾರ್ (ಸೋಮಶಿಲಾ) ಹಾಗೂ ಪೆನ್ನಾರ್–ಕಾವೇರಿ ನದಿಗಳ ಜೋಡಣೆ ಮಾಡಲಾಗುತ್ತದೆ
- ಗೋದಾವರಿ ಕಣಿವೆಯ ಹೆಚ್ಚುವರಿ 7 ಸಾವಿರ ಮಿಲಿಯನ್ ಕ್ಯುಬಿಕ್ ಮೀಟರ್ (ಎಂಸಿಎಂ) ನೀರನ್ನು ಕೃಷ್ಣಾ, ಪೆನ್ನಾರ್ ಹಾಗೂ ಕಾವೇರಿ ಕಣಿವೆಯ ಜಾಗಗಕ್ಕೆ ಹರಿಸಿ 9.44 ಲಕ್ಷ ಹೆಕ್ಟೇರ್ ಭೂಮಿಗೆ ನೀರುಣಿಸಲು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆ ಪ್ರಸ್ತಾವ ಸಿದ್ಧಪಡಿಸಿತ್ತು. ಬಳಿಕ 4 ಸಾವಿರ ಎಂಸಿಎಂಗೆ ಇಳಿಸಲಾಗಿತ್ತು
- ಬೇಡ್ತಿ–ವರದಾ ನದಿ ಜೋಡಣೆಯನ್ನು ಈ ಯೋಜನೆಗೆ ಸೇರ್ಪಡೆ ಮಾಡಲಾಗಿತ್ತು
- ಪರಿಷ್ಕೃತ ಪ್ರಸ್ತಾವದ ಪ್ರಕಾರ, ಗೋದಾವರಿ–ಕಾವೇರಿ ಜೋಡಣೆಯಿಂದ 41,89 ಎಂಸಿಎಂ ನೀರು ಸಿಗಲಿದೆ. ಬೇಡ್ತಿ–ವರದಾ ನದಿ ಜೋಡಣೆಯಿಂದ 524 ಎಂಸಿಎಂ ನೀರು ದೊರಕಲಿದೆ

2017–2022ರ ಅವಧಿ; ಆಟೊದಲ್ಲಿ 18 ಟನ್, ಇಂಡಿಕಾದಲ್ಲಿ 24 ಟನ್ ಅಕ್ಕಿ ಸಾಗಣೆಯ ಲೆಕ್ಕ: ಸಿಎಜಿ

ಪಡಿತರ ಸಾಗಣೆಯಲ್ಲಿ ಭಾರಿ ಅಕ್ರಮ


• ಜಯಸಿಂಹ ಆರ್.

ಬೆಂಗಳೂರು: ಚಾಲಕ ಸೇರಿ ನಾಲ್ವರು ಪ್ರಯಾಣಿಸಬಹುದಾದ ಆಟೊದಲ್ಲಿ ಎಷ್ಟು ಮೂಟೆ ಅಕ್ಕಿ ಸಾಗಿಸಬಹುದು? ಎರಡು ಅಥವಾ ಹೆಚ್ಚೆಂದರೆ ಮೂರು. ಆದರೆ, ಆಹಾರ ಇಲಾಖೆಯ ದಾಖಲೆಗಳ ಪ್ರಕಾರ ಬಜಾಜ್ ಪ್ರಯಾಣಿಕರ ಆಟೊದಲ್ಲಿ ಒಂದೇ ಬಾರಿಗೆ 30 ಟನ್ ಅಕ್ಕಿ ಸಾಗಿಸಲಾಗಿದೆ. ಟಾಟಾ ಇಂಡಿಕಾ ಕಾರಿನಲ್ಲಿ ಒಂದೇ ಟ್ರಿಪ್‌ನಲ್ಲಿ 24.4 ಟನ್ ಅಕ್ಕಿ ಪೂರೈಸಲಾಗಿದೆ.

‘ಅನ್ನಭಾಗ್ಯ’ ಯೋಜನೆಯ ಪಡಿತರದ ಧಾನ್ಯ ವಿತರಣೆಯಲ್ಲಿ, 2017–2022ರ ನಡುವೆ ನಡೆದಿರುವ ಅಕ್ರಮದ ಬಗೆ ಇದು. ಹೀಗೆ ಒಂದೇ ಬಾರಿಗೆ 15–20 ಟನ್ ಅಕ್ಕಿ ಹೊತ್ತ ಆಟೊ–ಕಾರುಗಳ ಪಟ್ಟಿ ದೊಡ್ಡದೇ ಇದೆ. ಈ ಅಕ್ರಮದ ವಿರುದ್ಧ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಮಹಾಲೇಖಪಾಲರು ಶಿಫಾರಸು ಮಾಡಿದ್ದಾರೆ.

‘ಪಡಿತರ ವಿತರಣಾ ವ್ಯವಸ್ಥೆಯ ಸಾಗಣೆ, ನಿರ್ವಹಣೆ’ ಕುರಿತ ಮಹಾಲೇಖಪಾಲರ (ಸಿಎಜಿ) ವರದಿಯಲ್ಲಿ ಈ ಮಾಹಿತಿ ಇದೆ. 2017ರಿಂದ 2022ರವರೆಗೆ ರಾಜ್ಯದ ಎಂಟು ಜಿಲ್ಲೆಗಳಲ್ಲಿ ಪಡಿತರ ಸಾಗಣೆಯ ವಹಿವಾಟುಗಳ ಲೆಕ್ಕಪರಿಶೋಧನೆಯನ್ನು ಸಿಎಜಿ ನಡೆಸಿದೆ. ಇದರಲ್ಲಿ ನಾಲ್ಕು ಗೋದಾಮುಗಳಲ್ಲೇ 401.4 ಟನ್‌ಗಳಷ್ಟು ಅಕ್ರಮ ನಡೆದಿದೆ.

‘ನಿಯಮಗಳ ಪ್ರಕಾರ ಸಾಗಣೆ ಒಪ್ಪಂದದಂತೆ, ಆಹಾರ ಇಲಾಖೆಯಲ್ಲಿ ನೋಂದಾಯಿಸಿದ ಟ್ರಕ್‌ಗಳಲ್ಲಿ ಮಾತ್ರವೇ ಪಡಿತರವನ್ನು ಸಾಗಿಸಬೇಕು. ಇಲಾಖೆ ಬಳಿ ಇರುವ ದಾಖಲೆಗಳನ್ನು ಪರಿಶೀಲಿಸಿದಾಗ, ಸಾಗಣೆಗೆ ನೋಂದಾಯಿಸದೇ ಇರುವ ವಾಹನಗಳಲ್ಲಿ ಅಪಾರ ಪ್ರಮಾಣದ ಪಡಿತರ ಸಾಗಿಸಿರುವುದು ಪತ್ತೆಯಾಯಿತು. ಸಾಗಣೆ ಮಾಡಲಾದ 2,510 ಟ್ರಿಪ್‌ಗಳನ್ನು ಪರಿಶೀಲನೆಗೆ ಆಯ್ಕೆಮಾಡಿಕೊಳ್ಳಲಾಗಿತ್ತು. ಅವುಗಳಲ್ಲಿ 1,725 ಟ್ರಿಪ್‌ಗಳು ಅನಧಿಕೃತ ವಾಹನಗಳ ಮೂಲಕ ನಡೆದಿದ್ದವು’ ಎಂದು ಸಿಎಜಿ ಹೇಳಿದೆ.




ಈ ಬಗ್ಗೆ ವಿವರಣೆ ಕೇಳಿದರೂ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ಉತ್ತರ ಬಂದಿಲ್ಲ. ಈ ವಿಚಾರಕ್ಕೆ ಸಂಬಂಧಿಸಿದಂತೆ ಇಲಾಖೆ ಮೌನವಹಿಸಿದೆ
ಸಿಎಜಿ ವರದಿ



- ಹಿಂದಿನ ಕಾಂಗ್ರೆಸ್, ಜೆಡಿಎಸ್–ಕಾಂಗ್ರೆಸ್, ಬಿಜೆಪಿ ಸರ್ಕಾರದ ಅವಧಿಯಲ್ಲಿ ಅಕ್ರಮ
- ನಾಲ್ಕು ಗೋದಾಮುಗಳಲ್ಲೇ 400ಕ್ಕೂ ಹೆಚ್ಚು ಟನ್ ಸಾಗಣೆ ಲೆಕ್ಕ
- ಪರಿಶೀಲನೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಸಿಎಜಿ ಶಿಫಾರಸು

‘ಪ್ರತಿ ಟ್ರಿಪ್‌ಗೆ ಬಳಸಿಕೊಳ್ಳಲಾದ ಟ್ರಕ್‌ನ ನೋಂದಣಿ ಸಂಖ್ಯೆಯನ್ನು ‘ಟ್ರಕ್ ಚಿಟ್ಸ್’ನಲ್ಲಿ ನಮೂದಿಸಲಾಗಿದೆ. ಆ ನೋಂದಣಿ ಸಂಖ್ಯೆಗಳನ್ನು ‘ವಾಹನ್’ ಪೋರ್ಟಲ್‌ನಲ್ಲಿ ಪರಿಶೀಲಿಸಿದಾಗ ಅವು ಟ್ರಕ್‌ಗಳ ಸಂಖ್ಯೆಗಳಾಗಿರದೆ, ಆಟೊ ಮತ್ತು ಕಾರುಗಳಿಗೆ ಸಂಬಂಧಿಸಿದ್ದಾಗಿದ್ದವು. ಬೆಂಗಳೂರಿನಲ್ಲಿನ ಮೂರು ಮತ್ತು ಹುಮನಾಬಾದ್‌ನ ಒಂದು ಗೋದಾಮುಗಳಿಂದ 17 ಟ್ರಿಪ್‌ಗಳಲ್ಲಿ ಒಟ್ಟು 401.4 ಟನ್ ಪಡಿತರ ಸಾಗಿಸಲಾಗಿದೆ ಎಂದು ದಾಖಲೆಗಳು ಹೇಳುತ್ತವೆ. ಆದರೆ ವಾಸ್ತವದಲ್ಲಿ ಇದು ಸಾಧ್ಯವೇ ಇಲ್ಲ’ ಎಂದು ಸಿಎಜಿ ಹೇಳಿದೆ.

‘ಪಡಿತರದ ಧಾನ್ಯಗಳ ಅಕ್ರಮ ಸಾಗಣೆ ಮತ್ತು ಅನ್ಯ ಬಳಕೆ ನಡೆದಿರುವುದನ್ನು ಈ ಅನಧಿಕೃತ ಮತ್ತು ಶಂಕಾಸ್ಪದ ಟ್ರಿಪ್‌ಗಳು ಸೂಚಿಸುತ್ತವೆ. ಆಟೊ, ಕಾರುಗಳಿಗೂ ಟ್ರಕ್‌ಗಳ ಹೆಸರಿನಲ್ಲಿ ಶುಲ್ಕ ಪಾವತಿ ಮಾಡಲಾಗಿದೆ. ಗೋದಾಮು ನಿರ್ವಹಣಾ ಅಧಿಕಾರಿಗಳ ಮಟ್ಟದಲ್ಲಿ ಭಾರಿ ಲೋಪ ನಡೆದಿದೆ. ರಾಜ್ಯದ ಎಲ್ಲ ಗೋದಾಮುಗಳಲ್ಲಿನ ಸಾಗಣೆ ವಹಿವಾಟನ್ನು ಪರಿಶೀಲಿಸಿದರೆ ಅಕ್ರಮದ ಗಾತ್ರ ಪತ್ತೆಯಾಗಬಹುದು. ರಾಜ್ಯ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು’ ಎಂದು ಶಿಫಾರಸು ಮಾಡಿದೆ.




ಬೆಟ್ಟದಷ್ಟು ಸಂಭ್ರಮ
ಹೊಸ ವರ್ಷಾಚರಣೆ ಪ್ರಯುಕ್ತ ಮೈಸೂರಿನ ಚಾಮುಂಡೇಶ್ವರಿ ದೇಗುಲಕ್ಕೆ ಪೂಜೆ ಸಲ್ಲಿಸಲು ಬುಧವಾರ ಹರಿದು ಬಂದ ಭಕ್ತರು ಚಿತ್ರ/ಅನೂಪ್ ರಾಘ.ಟಿ.

ಸಚಿವ ಸೋಮಣ್ಣ ಹೆಸರಲ್ಲಿ ವಂಚನೆ, ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ತುಮಕೂರು: ಕೇಂದ್ರ ಸಚಿವ ವಿ.ಸೋಮಣ್ಣ ಅವರ ನಕಲಿ ಸಹಿ ಮತ್ತು ಲೆಟರ್‌ಹೆಡ್ ಬಳಸಿ ವಂಚಿಸುತ್ತಿದ್ದ ಮಧುಗಿರಿ ತಾಲ್ಲೂಕಿನ ಮಲ್ಲನಾಯಕನಹಳ್ಳಿಯ ಗೋವರ್ಧನ್ ಎಂಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.


ಗೋವರ್ಧನ್

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೇರಿದಂತೆ ಇತರ ಪ್ರಭಾವಿಗಳ ಹೆಸರಿನಲ್ಲಿ ಆರೋಪಿಯು ಜನರಿಗೆ ವಂಚಿಸಿರುವುದು ವಿಚಾರಣೆ ಸಮಯದಲ್ಲಿ ಗೊತ್ತಾಗಿದೆ.

ಗಂಗಾ ಕಲ್ಯಾಣ ಯೋಜನೆ ಅಡಿ ಕೊಳವೆಬಾವಿ ಕೊರೆಸುವಂತೆ, ಪಂಪ್‌ಸೆಟ್, ಮೋಟರ್ ನೀಡುವಂತೆ ಸಚಿವ ಸೋಮಣ್ಣ ಹೆಸರಿನಲ್ಲಿ ನಕಲಿ ಆದೇಶ ಪತ್ರ ಸೃಷ್ಟಿಸಲಾಗುತ್ತಿದೆ. ಅದೇ ರೀತಿ ಸರ್ಕಾರಿ ಕಚೇರಿಗಳಲ್ಲಿ ಕೆಲಸ ಕೊಡಿಸುವುದಾಗಿ, ವಿವಿಧ ಕಾಲೇಜುಗಳಲ್ಲಿ ಪ್ರವೇಶ ಕೊಡಿಸುವುದಾಗಿ ಹೇಳಿ ಜನರನ್ನು ವಂಚಿಸುತ್ತಿದ್ದಾರೆ’ ಎಂದು ಸಚಿವರ ಆಪ್ತ ಸಹಾಯಕ ಹೊಸ ಬಡಾವಣೆ ಠಾಣೆಯಲ್ಲಿ ದೂರು ನೀಡಿದ್ದರು.

ವಿಶ್ವ ಬ್ಲಿಟ್ಸ್ ಚೆಸ್ ವೈಶಾಲಿಗೆ ಕಂಚು



ನ್ಯೂಯಾರ್ಕ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ವೈಶಾಲಿ ಅವರು ವಿಶ್ವ ಚೆಸ್ ಬ್ಲಿಟ್ಸ್ ಚಾಂಪಿಯನ್‌ಷಿಪ್ ಮಹಿಳಾ ವಿಭಾಗದಲ್ಲಿ ಬುಧವಾರ ಕಂಚಿನ ಪದಕ ಗೆದ್ದುಕೊಂಡರು. 12

ಚಿನಕುರುಳಿ
ಪ್ರಕಾಶ್ ಶೆಟ್ಟಿ



ವಾಣಿಜ್ಯ ಬಳಕೆ ಸಿಲಿಂಡರ್ ದರ ₹ 14.5ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ವಾಣಿಜ್ಯ ಬಳಕೆಯ ಸಿಲಿಂಡರ್ ಹಾಗೂ ವಿಮಾನ ಇಂಧನದ ದರವನ್ನು (ಎಟಿಎಫ್) ಇಳಿಕೆ ಮಾಡಿದ್ದು, ಹೊಸ ದರವು ಬುಧವಾರದಿಂದಲೇ ಜಾರಿಗೆ ಬಂದಿದೆ.

ವಾಣಿಜ್ಯ ಬಳಕೆಯ ಉದ್ದೇಶಕ್ಕಾಗಿ ಬಳಸುವ 19 ಕೆ.ಜಿ ತೂಕದ ಸಿಲಿಂಡರ್ ಬೆಲೆಯಲ್ಲಿ ₹14.5 ಇಳಿಕೆಯಾಗಿದೆ. ದೆಹಲಿಯಲ್ಲಿ ಸಿಲಿಂಡರ್ ದರ ₹1,804 ಆಗಿದ್ದರೆ ಮುಂಬೈನಲ್ಲಿ ₹1,756, ಕೋಲ್ಕತ್ತದಲ್ಲಿ ₹1,911 ಮತ್ತು ಚೆನ್ನೈನಲ್ಲಿ ₹1,966 ಇದೆ. ಗೃಹ ಬಳಕೆಗೆ ಬಳಸುವ 14 ಕೆ.ಜಿ ತೂಕದ ಸಿಲಿಂಡರ್ ದರವು ಯಥಾಸ್ಥಿತಿಯಲ್ಲಿದ್ದು, ₹803 ಇದೆ.



ವಿಮಾನ ಇಂಧನ ಬೆಲೆ ಇಳಿಕೆ: ವಿಮಾನಗಳಲ್ಲಿ ಬಳಸುವ ಇಂಧನ ದರವು ಪ್ರತಿ ಕಿಲೋ ಲೀಟರ್‌ಗೆ (1 ಸಾವಿರ ಲೀಟರ್) ₹1,401 (ಶೇ 1.52) ಕಡಿಮೆಯಾಗಿದೆ. ದೆಹಲಿಯಲ್ಲಿ ₹90,455 ಆಗಿದೆ.

ಶಬರಿಮಲೆ: ಅರಣ್ಯ ಮಾರ್ಗದ ಯಾತ್ರೆಗೆ ವಿಶೇಷ ಪಾಸ್ ಇಲ್ಲ

ಶಬರಿಮಲೆ (ಪಿಟಿಐ): ಅರಣ್ಯ ಮಾರ್ಗವಾಗಿ ಕಾಲ್ನಡಿಗೆಯಲ್ಲಿ ಶಬರಿಮಲೆ ಅಯ್ಯಪ್ಪ ಸ್ವಾಮಿ ದೇಗುಲಕ್ಕೆ ಬರುವ ಭಕ್ತರಿಗೆ ನೀಡಲಾಗುವ ವಿಶೇಷ ಪಾಸ್ ವ್ಯವಸ್ಥೆಯನ್ನು ಸ್ಥಗಿತಗೊಳಿಸಿರುವುದಾಗಿ ತಿರುವಾಂಕೂರು ದೇವಸಂ ಬೋರ್ಡ್ ಹೇಳಿದೆ.



‘ವರ್ಚುವಲ್ ಕ್ಯೂ’ ವ್ಯವಸ್ಥೆ ಮತ್ತು ‘ಸ್ಪಾಟ್ ಬುಕ್ಕಿಂಗ್’ ಮಾಡಿ, ಪಂಬಾ ಮೂಲಕ ಬರುವ ಭಕ್ತರಿಗೆ ದರ್ಶನಕ್ಕೆ ವಿಳಂಬವಾಗುತ್ತಿರುವ ಕಾರಣ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎಂದು ದೇವಸಂ ಬೋರ್ಡ್‌ನ ಸದಸ್ಯ ಎ.ಅಜಯ್‌ಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರಣ್ಯ ಮಾರ್ಗವಾಗಿ ಕಾಲ್ನಡಿಗೆಯಲ್ಲಿ ಬರುವ 5000 ಭಕ್ತರಿಗೆ ವಿಶೇಷ ಪಾಸ್ ನೀಡುವ ವ್ಯವಸ್ಥೆ ಈ ಹಿಂದೆ ಜಾರಿಯಲ್ಲಿತ್ತು. ಆದರೆ ಅರಣ್ಯ ಮಾರ್ಗವಾಗಿ ಬರುವ ಭಕ್ತರ ಸಂಖ್ಯೆ ಈಗ ಐದು ಪಟ್ಟು ಹೆಚ್ಚಾಗಿದೆ. ಈ ಕಾರಣಕ್ಕೆ ಪಾಸ್ ನೀಡುವುದನ್ನು ನಿಲ್ಲಿಸಲಾಗಿದೆ. ಮುಂದಿನ ಸೂಚನೆಯವರೆಗೆ ವಿಶೇಷ ಪಾಸ್ ವಿತರಣೆ ಮಾಡಲಾಗುವುದಿಲ್ಲ ಎಂದು ಮಾಹಿತಿ ನೀಡಿದ್ದಾರೆ.

ಪ್ರಾಧಿಕಾರ ರಚಿಸಿ 10 ವರ್ಷಗಳಾದರೂ ಪೂರ್ಣಗೊಂಡಿಲ್ಲ ಸರ್ವೆ

12,246 ಕೆರೆ ಒತ್ತುವರಿ ಸರ್ವೆ ಬಾಕಿ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ರಾಜ್ಯದಲ್ಲಿ ಕೆರೆ ಸಂರಕ್ಷಣಾ ಪ್ರಾಧಿಕಾರ ರಚನೆಯಾಗಿ 10 ವರ್ಷಗಳಾಗಿವೆ. ಆದರೆ, ಇನ್ನೂ 12,246 ಕೆರೆಗಳ ಒತ್ತುವರಿ ಸರ್ವೆ ಕಾರ್ಯ ಪೂರ್ಣವಾಗಿಲ್ಲ. ಈಗಾಗಲೇ ಸರ್ವೆ ಆದ ಕೆರೆಗಳ ಪೈಕಿ 5,559 ಕೆರೆಗಳ ಒತ್ತುವರಿ ತೆರವು ಆಗಿಲ್ಲ.

ರಾಜ್ಯದಲ್ಲಿ 40,998 ಕೆರೆಗಳಿವೆ. 7.36 ಲಕ್ಷ ಎಕರೆ ವಿಸ್ತೀರ್ಣ ಹೊಂದಿವೆ. ಈವರೆಗೆ 28,752 ಕೆರೆಗಳ ಸರ್ವೆ ಆಗಿದೆ. ಅದರಲ್ಲಿ 11,059 ಕೆರೆಗಳ 34,941 ಎಕರೆ ಜಾಗ ಒತ್ತುವರಿಯಾಗಿದೆ. 16,973 ಎಕರೆ ಜಾಗ ತೆರವು ಆಗಿದೆ.

ಕೆರೆಗಳ ಒತ್ತುವರಿ ಕುರಿತು 2012ರಲ್ಲಿ ಅರ್ಜಿಯೊಂದರ ವಿಚಾರಣೆ ವಿಚಾರಣೆ ನಡೆಸಿದ್ದ ಸುಪ್ರೀಂಕೋರ್ಟ್ ಕೆರೆಗಳ ಸಂರಕ್ಷಣೆಗೆ ಕ್ರಮಕೈಗೊಳ್ಳುವಂತೆ ಸೂಚಿಸಿತ್ತು. ಆ ಸೂಚನೆ ಮೇರೆಗೆ 2014ರಲ್ಲಿ ಕರ್ನಾಟಕ ಕೆರೆ ಸಂರಕ್ಷಣಾ ಪ್ರಾಧಿಕಾರ ರಚಿಸಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳನ್ನೇ ಅಧ್ಯಕ್ಷರನ್ನಾಗಿ ಮಾಡಲಾಗಿದೆ. ರಾಜ್ಯದ 15 ಜಿಲ್ಲೆಗಳಲ್ಲಿ ಸರ್ವೆ ಕಾರ್ಯ ಪೂರ್ಣಗೊಂಡರೂ ತೆರವು ಕಾರ್ಯ ಯಾವ ಜಿಲ್ಲೆಯಲ್ಲೂ ಪೂರ್ಣವಾಗಿಲ್ಲ. ಉಡುಪಿಯಲ್ಲಿ ಕೇವಲ 2 ಎಕರೆ ಮತ್ತು ಯಾದಗಿರಿಯಲ್ಲಿ 3 ಎಕರೆ ತೆರವು ಮಾತ್ರ ಬಾಕಿ ಇದೆ.



ಕೆರೆಗಳ ಒತ್ತುವರಿ ತೆರವಿಗೆ ಸಂಬಂಧಿಸಿದ ಇಲಾಖೆಗಳಿಗೆ ಸೂಚಿಸಲಾಗಿದೆ. ಪೊಲೀಸ್ ಸಿಬ್ಬಂದಿ ನೆರವು ಅವಶ್ಯವಿದ್ದರೆ, ನೀಡಲು ಜಿಲ್ಲಾಡಳಿತ ಸಿದ್ಧವಿದೆ
ಜಾನಕಿ ಕೆ.ಎಂ, ಜಿಲ್ಲಾಧಿಕಾರಿ, ಬಾಗಲಕೋಟೆ

ಸರ್ವೆಯರ್‌ಗಳ ಕೊರತೆ: ಸರ್ವೆಯರ್‌ಗಳ ಕೊರತೆಯಿಂದ ನಿಗದಿತ ಸಮಯದಲ್ಲಿ ಕೆರೆಗಳ ಸರ್ವೆ ಕಾರ್ಯ ಪೂರ್ಣ ಆಗುತ್ತಿಲ್ಲ. ಹೊಲ, ನಿವೇಶನಗಳ ಸರ್ವೆಗೆ ಸಲ್ಲಿಸುವ ಅರ್ಜಿಗಳ ಜೊತೆಗೆ ಇವುಗಳನ್ನೂ ನಿಭಾಯಿಸಬೇಕಿದೆ.

‘ಸರ್ವೆ ಕಾರ್ಯ ಒಂದೆಡೆ ಮಂದಗತಿಯಲ್ಲಿ ನಡೆದರೆ, ಇನ್ನೊಂದೆಡೆ ಕೆರೆಗಳು ಮತ್ತೆ ಒತ್ತುವರಿ ಆಗುತ್ತಿವೆ. ಅದನ್ನು ತಪ್ಪಿಸಲು ಗಡಿ ಕಲ್ಲು ಹಾಕಿ, ಟ್ರೆಂಚ್ ನಿರ್ಮಿಸಲಾಗಿದೆ. ಕೆಲವೆಡೆ ಚೈನ್ ಲಿಂಕ್ ಫೆನ್ಸಿಂಗ್ ಸಹ ಹಾಕಲಾಗುತ್ತಿದೆ’ ಎಂದು ಅಧಿಕಾರಿಗಳು ತಿಳಿಸಿದರು.

‘ಕೆರೆಗಳ ಸಂರಕ್ಷಣೆ ಕುರಿತು ನಿಯಮಿತವಾಗಿ ಸಭೆ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ಎಲ್ಲ ಕೆರೆಗಳ ಸರ್ವೆ ಕಾರ್ಯ ಪೂರ್ಣವಾಗಿದೆ. ಒತ್ತುವರಿ ತೆರವು ಸಹ ಪ್ರಗತಿಯಲ್ಲಿದೆ’ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ತಿಳಿಸಿದರು.

ಸಾವಿರ ಎಕರೆಗಿಂತ ಹೆಚ್ಚು ತೆರವು ಬಾಕಿ ಇರುವ ಜಿಲ್ಲೆಗಳು

ಜಿಲ್ಲೆ	ತೆರವು ಬಾಕಿ (ಎಕರೆಗಳಲ್ಲಿ)
ಬೆಂಗಳೂರು ಗ್ರಾಮಾಂತರ	6,216
ಬೆಂಗಳೂರು ನಗರ	1,870
ಶಿವಮೊಗ್ಗ	1,489
ರಾಮನಗರ	1,489
ಹಾಸನ	1,020

ಬಿಸಿಯೂಟ ತಯಾರಕರಿಗೆ ₹40 ಸಾವಿರ ಇಡುಗಂಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ತಯಾರಿಸುವ ಅಡುಗೆಯವರು ಮತ್ತು ಸಹಾಯಕಿಯರಿಗೆ 60 ವರ್ಷಗಳಾದ ಬಳಿಕ, ₹40 ಸಾವಿರ ಇಡುಗಂಟು ನೀಡಲು ಶಾಲಾ ಶಿಕ್ಷಣ ಇಲಾಖೆ ಸಮ್ಮತಿಸಿದೆ.

ಕನಿಷ್ಠ 15 ವರ್ಷ ಕೆಲಸ ಮಾಡಿ 60 ವರ್ಷಕ್ಕೆ ನಿವೃತ್ತಿ ಹೊಂದುವವರಿಗೆ ₹40 ಸಾವಿರ ನಗದು ದೊರಕಲಿದೆ. ಐದು ವರ್ಷದಿಂದ 15 ವರ್ಷದ ಒಳಗೆ ಕೆಲಸ ಮಾಡಿದ್ದರೆ ಅಂಥವರಿಗೆ ₹30 ಸಾವಿರ ಸಿಗಲಿದೆ.

ರಾಜ್ಯದಲ್ಲಿ 1.19 ಲಕ್ಷಕ್ಕೂ ಹೆಚ್ಚು ಮಹಿಳೆಯರು ಬಿಸಿಯೂಟ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆಹಾರ ತಯಾರಿಸುವುದು, ಮಕ್ಕಳಿಗೆ ಬಡಿಸುವುದು, ಪಾತ್ರೆ ತೊಳೆಯುವುದು, ಸಹಾಯಕರ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಮಾರ್ಚ್ 2022ರಂದು ಅಥವಾ ನಂತರ ನಿವೃತ್ತರಾದವರಿಗೆ ಅನ್ವಯವಾಗುತ್ತದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಸಂಚಾರ ನಿಯಮ ಉಲ್ಲಂಘನೆ: ವಾಹನ ಸವಾರರಿಂದ ₹80.90 ಕೋಟಿ ದಂಡ ಸಂಗ್ರಹ

ನಗರದಲ್ಲಿ ಅಪಘಾತ: ಶೇ 3.97ರಷ್ಟು ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಂಭವಿಸಿದ ಅಪಘಾತಗಳ ಅಂಕಿಅಂಶಗಳ ಪಟ್ಟಿಯನ್ನು ನಗರ ಸಂಚಾರ ವಿಭಾಗದ ಪೊಲೀಸರು ಬಿಡುಗಡೆ ಮಾಡಿದ್ದಾರೆ.

2023ಕ್ಕೆ ಹೋಲಿಸಿದರೆ 2024ರಲ್ಲಿ ಸಂಭವಿಸಿದ ಅಪಘಾತಗಳ ಸಂಖ್ಯೆಯಲ್ಲಿ ಒಟ್ಟಾರೆ ಶೇ 3.97ರಷ್ಟು ಇಳಿಕೆಯಾಗಿದೆ.

ಗಂಭೀರ ಅಪಘಾತಗಳ ಪ್ರಮಾಣವು ಶೇ 1.26ರಷ್ಟು ಇಳಿಕೆ ಕಂಡಿದೆ. ಈ ಅಪಘಾತಗಳಿಂದ ಉಂಟಾಗುವ ಸಾವುಗಳ ಪ್ರಮಾಣ ಶೇ 1.90ರಷ್ಟು ಇಳಿಕೆಯಾಗಿದೆ. ಗಂಭೀರವಲ್ಲದ ಅಪಘಾತಗಳ ಪ್ರಮಾಣವು ಶೇ 4.57ರಷ್ಟು ಇಳಿಕೆ ಕಂಡಿದೆ.

2024ರಲ್ಲಿ ಸ್ವಯಂ ಅಪಘಾತಗಳ ಸಂಖ್ಯೆಯು ಶೇ 3.34ರಷ್ಟು ಆಗಿದ್ದು, ಕಳೆದ ಸಾಲಿಗೆ ಹೋಲಿಸಿದರೆ ಅಲ್ಪಪ್ರಮಾಣದಲ್ಲಿ ಏರಿಕೆ ಆಗಿರುವುದು ಕಂಡು ಬಂದಿದೆ.

ನಗರದಲ್ಲಿ ಪಾದಚಾರಿ ಅಪಘಾತಗಳನ್ನು ತಡೆಗಟ್ಟಲು ಅಪಘಾತ ಕಪ್ಪು ಚುಕ್ಕೆಗಳನ್ನು ಗುರುತಿಸಲು ಹಾಗೂ ದುರಸ್ತಿ ಪಡಿಸಲು ಹಲವು ಕ್ರಮ ಕೈಗೊಳ್ಳಲಾಗಿತ್ತು. ಇದರ ಫಲವಾಗಿ ಕಳೆದ ವರ್ಷ ಪಾದಚಾರಿಗಳ ಸಾವಿನ ಪ್ರಮಾಣದಲ್ಲಿ ಇಳಿಕೆ ಕಂಡುಬಂದಿದೆ. 2023ಕ್ಕೆ ಹೋಲಿಸಿದರೆ ಕಳೆದ ವರ್ಷ ಶೇ 23.17ರಷ್ಟು ಕಡಿಮೆಯಾಗಿದೆ.

ರಸ್ತೆ ಸುರಕ್ಷತೆಯಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಕಳೆದ ವರ್ಷ ಬೆಂಗಳೂರು ನಗರ ಸಂಚಾರ ಪೊಲೀಸ್ ವಿಭಾಗವು ತನ್ನ ಎಲ್ಲ ಪಾಲುದಾರರ ಜತೆಗೆ ನಡೆಸಿದ ಪ್ರಯತ್ನವು ಫಲ ನೀಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಂಚಾರ ನಿಯಮ ಉಲ್ಲಂಘಿಸಿದ ವರಿಂದ ಕಳೆದ ವರ್ಷ ₹80.90 ಕೋಟಿ ದಂಡ ಸಂಗ್ರಹಿಸಲಾಗಿದೆ.

ಸಂಚಾರ ನಿಯಮ ಉಲ್ಲಂಘನೆ

ಸಂಪರ್ಕ ಸಹಿತ ಪ್ರಕರಣಗಳು	ಸಂಪರ್ಕ ರಹಿತ ಪ್ರಕರಣಗಳು	ಒಟ್ಟು ಪ್ರಕರಣಗಳು	ಸಂಗ್ರಹಿಸಿದ ದಂಡದ ಒಟ್ಟು ಮೊತ್ತ
4,79,162	78,07,399	82,86,561	₹80,90,76,100



ಅಪಘಾತಗಳ ವಿವರ

ವರ್ಷ	ಒಟ್ಟು ಅಪಘಾತ	ಗಂಭೀರ ಅಪಘಾತ	ಗಂಭೀರವಲ್ಲದ್ದು	ಮೃತರು	ಗಾಯಾಳುಗಳು
2022	3,822	752	3,070	772	3,189
2023	4,974	882	4,092	910	4,191
2024	4,784	871	3,913	893	4,052

ಸ್ವಯಂ ಅಪಘಾತ

ವರ್ಷ	ಅಪಘಾತ	ಮೃತರು
2022	175	177
2023	203	209
2024	210	212

ಮೃತ ಪಾದಚಾರಿಗಳ ವಿವರ

ವರ್ಷ	ಗಂಭೀರ ಅಪಘಾತಗಳು	ಮೃತರು
2022	248	247
2023	284	287
2024	233	233

ಮದ್ಯಪಾನ ಮಾಡಿ ವಾಹನ ಚಾಲನೆ

ಪ್ರಕರಣ: 2022 – 26,371; 2023 – 7,053; 2024 – 23,574

ಡಿ.ಡಿ ಕೇಸ್‌ಗಳು

12,54,418 ಒಟ್ಟು ಪರಿಶೀಲಿಸಿದ ವಾಹನಗಳು

23,574 ದಾಖಲಿಸಿದ ಪ್ರಕರಣಗಳು

1.87% ಪಾಸಿಟಿವಿಟಿ ಪ್ರಮಾಣ

201: ಶಾಲಾ ಬಸ್‌ಗಳ ಚಾಲಕರ ಮೇಲೆ ದಾಖಲಿಸಿದ ಪ್ರಕರಣಗಳು(ಡಿ.ಡಿ)

83: ಖಾಸಗಿ ಬಸ್‌ಗಳ ಚಾಲಕರ ಮೇಲೆ ದಾಖಲಿಸಿದ ಪ್ರಕರಣಗಳು

67: ನೀರಿನ ಟ್ಯಾಂಕರ್‌ಗಳ ಚಾಲಕರ ಮೇಲೆ ದಾಖಲಿಸಿದ ಪ್ರಕರಣಗಳು

ವ್ಹೀಲಿ ಪ್ರಕರಣಗಳು

ಒಟ್ಟು ಪ್ರಕರಣಗಳು	ವಾಹನ ಜಪ್ತಿ	ಬಂಧನ	ಬಾಲಕರ ವಿರುದ್ಧ ಕ್ರಮ	ಪೋಷಕರ ವಿರುದ್ಧ ಕ್ರಮ	ರದ್ದು ಪಡಿಸಲು ಸಾರಿಗೆ ಇಲಾಖೆಗೆ ಕಳುಹಿಸಿದ ಡಿ.ಎಲ್ ಸಂಖ್ಯೆ	ರದ್ದು ಪಡಿಸಲು ಕಳುಹಿಸಿಕೊಡಲಾದ ಆರ್‌.ಸಿಗಳ ಸಂಖ್ಯೆ
532	520	456	121	79	146	246



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಲಿತ ಚಳವಳಿಯ ಹಿರಿಯ ನಾಯಕ ಲಕ್ಷ್ಮೀನಾರಾಯಣ ನಾಗವಾರ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು

ಸರ್ಕಾರಿ ಗೌರವದೊಂದಿಗೆ ಲಕ್ಷ್ಮೀನಾರಾಯಣ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳವಾರ ನಿಧನರಾದ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಲಕ್ಷ್ಮೀನಾರಾಯಣ ನಾಗವಾರ ಅವರ ಅಂತ್ಯಕ್ರಿಯೆ ಸರ್ಕಾರಿ ಗೌರವದೊಂದಿಗೆ ಬುಧವಾರ ನಾಗವಾರದಲ್ಲಿ ನಡೆಯಿತು.

ಬುಧವಾರ ನಾಗವಾರದ ಆಟದ ಮೈದಾನದಲ್ಲಿ ಸಾರ್ವಜನಿಕರಿಗೆ ಅಂತಿಮ ದರ್ಶನದ ವ್ಯವಸ್ಥೆ ಮಾಡಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅಂತಿಮ ದರ್ಶನ ಪಡೆದರು. ಕುಟುಂಬದವರಿಗೆ ಸಾಂತ್ವನ ಹೇಳಿದರು. ಬಳಿಕ ಲಕ್ಷ್ಮೀನಾರಾಯಣ ಅವರ ಅಂತ್ಯ ಸಂಸ್ಕಾರದ ವೇಳೆ ಪೊಲೀಸ್ ಗೌರವ ಸಲ್ಲಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಸೂಚನೆ ನೀಡಿದರು.

ನಾಗವಾರದ ರುದ್ರಭೂಮಿಯಲ್ಲಿ ಸರ್ಕಾರಿ ಗೌರವದೊಂದಿಗೆ ಅಂತ್ಯ ಸಂಸ್ಕಾರ ನಡೆಯಿತು.

ಚಾಲಕನ ಮೇಲೆ ಹಲ್ಲೆ; ಎಡಿಸಿ ಕಾರು ಜಖಂ

ಪ್ರಜಾವಾಣಿ ವಾರ್ತೆ



ದೇವನಹಳ್ಳಿ: ಇಲ್ಲಿಯ ಪ್ರವಾಸಿ ಮಂದಿರ ಬಳಿ ಮಂಗಳವಾರ ಸಂಜೆ ಬೈಕ್ ಸವಾರರಿಬ್ಬರು ಹೆಚ್ಚುವರಿ ಜಿಲ್ಲಾಧಿಕಾರಿ ಕಾರಿನ ಚಾಲಕನ ಮೇಲೆ ಮೇಲೆ ಹಲ್ಲೆ ನಡೆಸಿ, ಕಾರು ಜಖಂ ಗೊಳಿಸಿದ್ದಾರೆ. ಈ ವೇಳೆ ಕಾರಿನಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಕಾರಿನಲ್ಲಿ ಇರಲಿಲ್ಲ.

ಕಾರಿನ ಚಾಲಕ ದೇವನಹಳ್ಳಿ ಟೌನ್ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದ. ದಾಳಿ ನಡೆಸಿದ ಬೈಕ್ ಸವಾರರಾದ ಆನಂದ, ಶ್ರೀನಿವಾಸ ಎಂಬುವರನ್ನು ಬಂಧಿಸಿದ ಪೊಲೀಸರು ಬುಧವಾರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಇಬ್ಬರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಪಟ್ಟಣದ ಬಿ.ಬಿ ರಸ್ತೆಯಲ್ಲಿ ಪ್ರವಾಸಿ ಮಂದಿರದ ಒಳಗೆ ಕಾರು ತೆರಳುತ್ತಿದ್ದಂತೆಯೇ ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು 'ಬೈಕ್‌ಗೆ ಅಡ್ಡ ಬರುತ್ತೀಯಾ' ಎಂದು ಜಗಳ ತೆಗೆದರು. ಕಾರಿನ ಗಾಜು ಒಡೆದು, ಹೆಲ್ಮೆಟ್‌ನಿಂದ ನನ್ನ ಮೇಲೆ ಹಲ್ಲೆ ನಡೆಸಿದರು. ಬೈಕ್ ಸವಾರರು ನನ್ನನ್ನು ಹಿಗ್ಗಾಮುಗ್ಗ ಥಳಿಸುತ್ತಿದ್ದರೂ ಸ್ಥಳದಲ್ಲಿದ್ದ ಯಾರೂ ಸಹಾಯಕ್ಕೆ ಧಾವಿಸಲಿಲ್ಲ ಎಂದು ಚಾಲಕ ದೇವನಹಳ್ಳಿ ಟೌನ್ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾನೆ.

'ದಲಿತ ಪದ ಬಳಕೆ ಸರಿಯಲ್ಲ'

ಪ್ರಜಾವಾಣಿ ವಾರ್ತೆ



ಬಿ.ಟಿ. ಲಲಿತಾ ನಾಯ್ಕ್

ಬೆಂಗಳೂರು: ದಲಿತ ಎಂದರೆ ತಂದೆ ಇಲ್ಲದೇ ಹುಟ್ಟಿರುವ ಮಕ್ಕಳು ಎಂಬರ್ಥವಿದೆ. ಕೆಟ್ಟ ಅರ್ಥ ಇರುವ ಈ ಪದ ಬಳಕೆ ಸರಿಯಲ್ಲ. ದಮನಿತ ಪದ ಬಳಸಬಹುದು ಎಂದು ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯ್ಕ್ ಸಲಹೆ ನೀಡಿದ್ದಾರೆ.

ಕರ್ನಾಟಕ ಅಹಿಂದ ಹೋರಾಟ ಸಮಿತಿ ಬುಧವಾರ ಹಮ್ಮಿಕೊಂಡಿದ್ದ ಭೀಮಾ ಕೋರೆಗಾಂವ್ ವಿಜಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಸುಬುಗಳಿಂದ ಹಲವು ಸಮುದಾಯಗಳಿಗೆ ಹೆಸರು ಬಂದಿದೆ. ಕ್ಷೌರ ಮಾಡುವವರನ್ನು ಕ್ಷೌರಿಕರು, ಕುಂಬಾರಿಕೆ ಮಾಡುವವರನ್ನು ಕುಂಬಾರರು ಎಂದು ಕರೆಯಲಾಗುತ್ತದೆ. ಆದರೆ, ದಲಿತ ಎನ್ನುವ ಪದ ಕುಲದ ಕಸುಬು ಆಗಿಲ್ಲ. ದಲಿತ, ದಲಿತರ ಕೇರಿ, ದಲಿತರ ಓಣಿ, ದಲಿತ ಮಂತ್ರಿ ಈ ರೀತಿಯ ಹೆಸರುಗಳಲ್ಲಿ ಕರೆಯುವುದು ಹೀನಾಯ ಎಂದರು.

'ಯುವಜನಾಂಗ, ವಿದ್ಯಾವಂತರು ಅಸ್ಪೃಶ್ಯತೆಯಿಂದ ಹೊರ ಬರುವ ಕೆಲಸ ಮಾಡಬೇಕೆ ಹೊರತು, ಮತ್ತೆ ಅದರೊಳಗೆ ಸೇರಿಕೊಳ್ಳುವ ರೀತಿಯಲ್ಲಿ ನಡೆದುಕೊಳ್ಳಬಾರದು. ದೇವಸ್ಥಾನ ಕಟ್ಟಿಸುವುದು, ಪೂಜೆ ಮಾಡಿಸುವುದು ಎಲ್ಲವೂ ನಮ್ಮ ಸಂಸ್ಕೃತಿಯನ್ನು ಮರೆತು ಬ್ರಾಹ್ಮಣೀಕರಕ್ಕೆ ಒಳಗಾಗುವುದೇ ಆಗಿದೆ. ಬ್ರಾಹ್ಮಣ್ಯವು ಬಹುತೇಕ ಮಾನವ ವಿರೋಧಿ, ಪರಿಸರ ವಿರೋಧಿಯಾಗಿರುತ್ತದೆ. ಅದನ್ನು ಒಪ್ಪಿಕೊಂಡು ನಮ್ಮ ಜನರಿಗೆ ಮೋಸ ಮಾಡಬಾರದು. ಸಮುದಾಯಗಳು ಒಗ್ಗಟ್ಟಿನಿಂದ ಇರಬೇಕು' ಎಂದರು.

'ಕೋರೆಗಾಂವ್ ರೀತಿಯ ರಕ್ತಪಾತ ಯುದ್ಧಗಳು ಈಗ ಬೇಕಾಗಿಲ್ಲ. ದೇಶದಲ್ಲಿ ಬೇರೂರಿರುವ ಮೌಢ್ಯ, ಅಸ್ಪೃಶ್ಯತೆಯ ವಿರುದ್ಧದ ಯುದ್ಧಗಳು ಬೇಕಾಗಿವೆ' ಎಂದು ತಿಳಿಸಿದರು.

ಅಹಿಂದ ಹೋರಾಟ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಎಂ. ಮುತ್ತುರಾಜು, ಸಮತಾ ಸೈನಿಕ ದಳ ರಾಜ್ಯ ಘಟಕದ ಅಧ್ಯಕ್ಷ ಎಂ.ವೆಂಕಟಸ್ವಾಮಿ, ನಿವೃತ್ತ ಅಧಿಕಾರಿ ಭೀಮಾ ಶಂಕರ್, ಪತ್ರಕರ್ತ ಜಿ. ಆಂಜಿನಪ್ಪ, ಹೋರಾಟಗಾರ ಎಚ್. ಪ್ರದೀಪ್ ಭಾಗವಹಿಸಿದ್ದರು.

ದನಗಳ ಜಾತ್ರೆ ಮೂರೇ ದಿನಕ್ಕೆ ಮುಕ್ತಾಯ

ದಾಬಸ್ ಪೇಟೆ: ಇತಿಹಾಸ ಪ್ರಸಿದ್ಧ ನೆಲಮಂಗಲ ತಾಲ್ಲೂಕಿನ ಶಿವಗಂಗೆಯ ಗಂಗಾಧರೇಶ್ವರ ದನಗಳ ಜಾತ್ರೆ ಮೂರೇ ದಿನಕ್ಕೆ ಮುಕ್ತಾಯವಾಗಿದೆ.

ಸುಮಾರು ಎರಡರಿಂದ ಮೂರು ಸಾವಿರಕ್ಕೂ ಹೆಚ್ಚು ರಾಸುಗಳು ಸೇರುತ್ತಿದ್ದ ಜಾತ್ರೆಯಲ್ಲಿ ಈ ಬಾರಿ ಕೇವಲ 20 ರಿಂದ 30 ಜೊತೆ ರಾಸುಗಳು ಸೇರಿದ್ದವು.

'ದಶಕಗಳ ಹಿಂದೆ ಸುಮಾರು ಹದಿನೈದು ದಿನಗಳು ನಡೆಯುತ್ತಿದ್ದ ಜಾತ್ರೆಯಲ್ಲಿ ಅಮೃತ್‌ಮಹಲ್, ಹಳ್ಳಿಕಾರ್ ತಳಿಗಳು ಹೆಚ್ಚಾಗಿರುತ್ತಿದ್ದವು. ಲಕ್ಷಾಂತರ ರೂಪಾಯಿ ವಹಿವಾಟು ಸಹ ನಡೆಯುತ್ತಿತ್ತು. ಆದರೆ ಈ ಬಾರಿ 20 ಜೋಡಿ ದನ ಬಂದು ಮೂರೇ ದಿನಕ್ಕೆ ಹೋದವು' ಎಂದು ಶಿವಗಂಗೆಯ ಹಿರಿಯರೊಬ್ಬರು ಹೇಳಿದರು.

ಮಳೆ ಅಭಾವ, ಮೇವಿನ ಕೊರತೆ, ಸಾಕಾಣಿಕೆ ವೆಚ್ಚ ಹೆಚ್ಚಳದಿಂದಾಗಿ ಗ್ರಾಮೀಣ ವಾಸಿಗಳು ವಿಮುಖರಾಗುತ್ತಿದ್ದಾರೆ. ಜಾತ್ರೆ ತನ್ನ ಮೂಲ ವೈಭವವನ್ನು ಈಗ ಕಳೆದುಕೊಂಡಿದೆ ಎಂದರು ಸ್ಥಳೀಯರಾದ ಸಿದ್ದರಾಜು.

6ರಂದು ಸಿದ್ಧಾರೂಢ ಜ್ಯೋತಿಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಬ್ಬಳ್ಳಿಯ ಸಿದ್ಧಾರೂಢ ಮಠ ಹಮ್ಮಿಕೊಂಡಿರುವ ಅರಿವು, ಏಕತೆ, ಶಾಂತಿ ಸಹಬಾಳ್ವೆ ಸಾರುವ ಜ್ಯೋತಿ ರಥಯಾತ್ರೆಯನ್ನು ಜನವರಿ 6ರಂದು ಬೆಳಿಗ್ಗೆ 11ಕ್ಕೆ ಕೆಂಗೇರಿಯಲ್ಲಿ ರಾಮೋಹಳ್ಳಿ ಸಿದ್ಧಾರೂಢ ಮಿಷನ್ ಸ್ವಾಗತಿಸಲಿದೆ.

ಸಿದ್ಧಾರೂಢ ಸ್ವಾಮಿಯವರ 190ನೇ ಜಯಂತಿ, ಗುರುನಾಥರೂಢ ಸ್ವಾಮಿಯವರ 115ನೇ ಜಯಂತಿ ಪ್ರಯುಕ್ತ ಡಿಸೆಂಬರ್ 23ರಂದು ಸಿದ್ಧಾರೂಢರ ಜನ್ಮಸ್ಥಳ ಬೀದರ್ ಜಿಲ್ಲೆಯ ಚಳಕಾಪುರದಿಂದ ಜ್ಯೋತಿ ಹೊರಟಿದ್ದು, ಜ.6ಕ್ಕೆ ಬೆಂಗಳೂರು ತಲುಪಲಿದೆ. ಅಂದು ರಾಮೋಹಳ್ಳಿ ಸಿದ್ಧಾರೂಢ ಮಿಷನ್ ಆಶ್ರಮದಲ್ಲಿ ಸಮಾರಂಭ ನಡೆಯಲಿದೆ. ಜ.7ರಂದು ಕೆಂಗೇರಿಯಿಂದ ಉಲ್ಲಾಳ ಜಂಕ್ಷನ್‌ವರೆಗಿನ ಭಗವಾನ್ ಸಿದ್ಧಾರೂಢ ರಸ್ತೆಯಲ್ಲಿ ಸಂಚರಿಸಿ ಹೌಸಿಂಗ್ ಬೋರ್ಡ್‌ನ ಸಿದ್ಧಾರೂಢ ಉದ್ಯಾನ, ಗೋವಿಂದರಾಜ ನಗರದ ಪರಮಹಂಸ ಸನ್ಯಾಸಾಶ್ರಮ, ವಿಜಯನಗರದ ಆದಿಚುಂಚನಗಿರಿ ಮಠ ತಲುಪಲಿದೆ. ಅಲ್ಲಿಂದ ಮಹಾಲಕ್ಷ್ಮಿಪುರ, ಕುರುಬರ ಹಳ್ಳಿ, ಗಾಯತ್ರಿ ನಗರಗಳ ಸಿದ್ಧಾರೂಢ ಉದ್ಯಾನ, ಗಾಯತ್ರಿನಗರ ಮತ್ತು ಮಲ್ಲೇಶ್ವರದ ಸಿದ್ಧಾಶ್ರಮಗಳನ್ನು ಸಂದರ್ಶಿಸಲಿದೆ.

ಅಲ್ಲಿಂದ ಅಲ್ಲಾಳಸಂದ್ರದ ಯೋಗಿ ದೇವರಾಜರವರ ನಿವಾಸಕ್ಕೆ ತೆರಳಲಿದೆ. ಜ.8ರಂದು ವಿಧಾನಸೌಧ, ಪುರಭವನ, ಮಕ್ಕಳ ಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಮಹಿಳಾ ಸೇವಾ ಸಮಿತಿ, ಸಿದ್ಧಾಶ್ರಮ, ಬಸವನಗುಡಿಯ ರಾಮಕೃಷ್ಣಾಶ್ರಮ, ಗವಿಪುರದ ಗೋಸಾಯಿ ಮಠಗಳ ಮಾರ್ಗವಾಗಿ ಜಯನಗರ ಸಿದ್ಧಾರೂಢಾಶ್ರಮಕ್ಕೆ ತಲುಪಲಿದೆ. ಜ.9ರಂದು ಬನಶಂಕರಿ, ಉತ್ತರಹಳ್ಳಿ, ಕೈಲಾಸಾಶ್ರಮದ ಮಾರ್ಗವಾಗಿ ಮೈಸೂರು ರಸ್ತೆಯ ಸಿದ್ಧಾರೂಢಾಶ್ರಮ ತಲುಪಲಿದೆ. ಜ.10ರಂದು ರಾಜ್‌ಕುಮಾರ್ ಸಮಾಧಿ ರಸ್ತೆ, ತುಮಕೂರು ರಸ್ತೆ ಮೂಲಕ ನೆಲಮಂಗಲ ಬಳಿಯ ಹಂಚಿಪುರದ ಸಿದ್ಧಾರೂಢಮಠಕ್ಕೆ ಸಾಗಲಿದೆ ಎಂದು ಸಿದ್ಧಾರೂಢ ಮಿಷನ್‌ನ ಅಧ್ಯಕ್ಷ ಆರೂಢಭಾರತೀ ಸ್ವಾಮೀಜಿ ತಿಳಿಸಿದ್ದಾರೆ.

30 ವರ್ಷದಿಂದ 'ಶುದ್ಧಕ್ರಯಪತ್ರ ನೀಡಲು ಸಾಧ್ಯವಿಲ್ಲ' ಎಂದು ತಿರಸ್ಕರಿಸಿದ್ದ ಆಯುಕ್ತರು

'ಸಿಎ ನಿವೇಶನ' ಮಾರಿದ ಬಿಡಿಎ

• ಆರ್. ಮಂಜುನಾಥ್

ಬೆಂಗಳೂರು: ನರ್ಸಿಂಗ್ ಹೋಂ ಉದ್ದೇಶಕ್ಕಾಗಿ 51 ವರ್ಷಗಳ ಹಿಂದೆ ನೀಡಿದ್ದ ಸುಮಾರು ₹ 23.20 ಕೋಟಿ ಮೌಲ್ಯವಿರುವ 'ನಾಗರಿಕ ಸೌಲಭ್ಯ' (ಸಿಎ) ನಿವೇಶನವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ತನ್ನದೇ ಹಲವು ಹಿಂಬರಹಗಳನ್ನು ಉಲ್ಲಂಘಿಸಿ ಕೇವಲ ₹2 ಕೋಟಿಗೆ 'ಶುದ್ಧ ಕ್ರಯಪತ್ರ'ದ ಮೂಲಕ ಮಾರಾಟ ಮಾಡಿದೆ.

ಗುತ್ತಿಗೆ ಆಧಾರದಲ್ಲಿ ಹಂಚಿಕೆ ಮಾಡಲಾಗಿರುವ ನಿವೇಶನವನ್ನು ಆಯಾ ಸಂಸ್ಥೆಗಳಿಗೇ ಕ್ರಯಪತ್ರ ಮಾಡಿಕೊಡಬೇಕಾದರೆ, ಸ್ಥಿರಾಸ್ತಿಯ ಈಗಿನ ಮಾರ್ಗಸೂಚಿ ದರಕ್ಕೆ ಸಮನಾದ ಮೊತ್ತವನ್ನು ಪಾವತಿಸಿಕೊಳ್ಳಬೇಕು ಎಂದು 2020ರ ಜುಲೈ 31ರಂದು ಸರ್ಕಾರ ಹೊರಡಿಸಿರುವ ಆದೇಶವನ್ನೂ ಬಿಡಿಎ ಉಲ್ಲಂಘಿಸಿದೆ.

ಜಯನಗರ 8ನೇ ಬ್ಲಾಕ್ 40ನೇ ಅಡ್ಡರಸ್ತೆ, ಒಂದನೇ ಎ ಮುಖ್ಯರಸ್ತೆಯಲ್ಲಿರುವ 27/ಎ ಸಂಖ್ಯೆಯ ಮೂಲೆ ನಿವೇಶನವನ್ನು ನರ್ಸಿಂಗ್ ಹೋಂ ಉದ್ದೇಶಕ್ಕಾಗಿ 'ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್' ವತಿಯಿಂದ 1973ರಲ್ಲಿ 10 ವರ್ಷಗಳ ಅವಧಿಗೆ ಡಾ. ಎಲ್. ಎಸ್. ಬೋರೇಗೌಡ ಅವರಿಗೆ ಗುತ್ತಿಗೆಗೆ ನೀಡಲಾಗಿತ್ತು. ಟ್ರಸ್ಟ್ ಅಧ್ಯಕ್ಷರು 1973ರ ಫೆಬ್ರುವರಿ 5ರಂದು ಸಿ.ಎ. ನಿವೇಶನದ ಹಂಚಿಕೆ ಪತ್ರದಲ್ಲಿ 'ಖಾಸಗಿ ನರ್ಸಿಂಗ್ ಹೋಂ ಮತ್ತು ಆಸ್ಪತ್ರೆಗೆ ಮಾತ್ರ' ಎಂಬ ಷರತ್ತು ವಿಧಿಸಿದ್ದರು. ನಿವೇಶನದ ಒಟ್ಟು ಮೌಲ್ಯ ₹24,004 ಆಗಿದ್ದು, ಅದರಲ್ಲಿ ₹23,883 ಪಾವತಿಸಬೇಕು, ಉಳಿದ ₹120 ಅನ್ನು 10 ವರ್ಷಗಳ ಗುತ್ತಿಗೆ ಅವಧಿಯಲ್ಲಿ ಪ್ರತಿ ವರ್ಷ ₹12ರಂತೆ ಪಾವತಿಸಬೇಕು ಎಂದು ನಮೂದಿಸಲಾಗಿತ್ತು.


ಈ ನಿಯಮಗಳಂತೆ 'ಗುತ್ತಿಗೆ ಒಪ್ಪಂದ' ಮಾಡಿಕೊಡಲಾಗಿದೆ. 10 ವರ್ಷದ ಗುತ್ತಿಗೆ ಅವಧಿ ಮುಗಿದ ಮೇಲೆ 1988ರಿಂದಲೇ ಬೋರೇಗೌಡ ಅವರು 'ಶುದ್ಧ ಕ್ರಯಪತ್ರ' ಮಾಡಿಕೊಡುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಮನವಿ ಪತ್ರ ಸಲ್ಲಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿದ್ದ ಬಿಡಿಎಯ ಅಂದಿನ ಆಯುಕ್ತರು, 1988ರ ಜೂನ್ 28ರಂದು ಬೋರೇಗೌಡರಿಗೆ ಪತ್ರ ಬರೆದು 'ಸಿಎ ನಿವೇಶನಗಳ ನಿಯಮಗಳ ಪ್ರಕಾರ, ಸಿಎ ನಿವೇಶನವನ್ನು ವ್ಯಕ್ತಿಯೊಬ್ಬರಿಗೆ ವರ್ಗಾಯಿಸಲಾಗದು. ನಿಮ್ಮ ಅರ್ಜಿಯನ್ನು ತಿರಸ್ಕರಿಸಲಾಗಿದೆ' ಎಂದು ಸ್ಪಷ್ಟಪಡಿಸಿದ್ದರು.

ಬೋರೇಗೌಡ ಅವರು 2008 ಮತ್ತು 2013ರಲ್ಲೂ ಕ್ರಯಪತ್ರ ಮಾಡಿಕೊಡಲು ಬಿಡಿಎಗೆ ಪತ್ರ ಮನವಿ ಸಲ್ಲಿಸಿದ್ದರು. ಆದರೆ, 2009ರ ಮೇ 14 ಹಾಗೂ 2013ರ ಮೇ 21ರಂದು ಆಯುಕ್ತರು ಬೋರೇಗೌಡರಿಗೆ ಪತ್ರ ಬರೆದು, 'ಕಾನೂನು ಅಧಿಕಾರಿಗಳ ಅಭಿಪ್ರಾಯದ ಮೇರೆಗೆ 'ಸಿಎ ನಿವೇಶನಕ್ಕೆ ಕ್ರಯ ಪತ್ರ ನೀಡಲು ಬರುವುದಿಲ್ಲ' ಎಂದು ತಿಳಿಸಿದ್ದರು.

2015ರಲ್ಲಿ ಪ್ರಾಧಿಕಾರದ ಸಭೆಯಲ್ಲಿ 'ಬೋರೇಗೌಡರು ಹಲವಾರು ಮನವಿ ನೀಡಿ, ನಿವೇಶನದಲ್ಲಿ ನರ್ಸಿಂಗ್ ಹೋಂ ಮತ್ತು ವಾಸದ ಮನೆ ಕಟ್ಟಿರುವುದರಿಂದ ಶುದ್ಧಕ್ರಯ ಪತ್ರ ನೋಂದಾಯಿಸಲು ಕೋರಿರುತ್ತಾರೆ. ಅವರ ಮಕ್ಕಳು ನಿವೇಶನವನ್ನು ಸಾಮಾನ್ಯ ನಿವೇಶನಗಳಾಗಿ ಹಂಚಿಕೆ ಮಾಡಿ, ಶುದ್ಧ ಕ್ರಯ ಪತ್ರ ಮಾಡಲು ಕೋರಿದ್ದಾರೆ. ಇದನ್ನು ಪರಿಶೀಲಿಸಬೇಕು' ಎಂದು ನಿರ್ದೇಶನ ನೀಡಲಾಗಿತ್ತು.

'2018ರಲ್ಲಿ ಪ್ರಾಧಿಕಾರದ ಸಭೆಯಲ್ಲಿ, ಕಾನೂನು ಅಧಿಕಾರಿಗಳ ಅಭಿಪ್ರಾಯ ಹಾಗೂ ನಗರ ಯೋಜನೆ ಅಧಿಕಾರಿಗಳು ಈ ಸ್ವತ್ತು ಸಿಎ ನಿವೇಶನ ಅಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಶುದ್ಧಕ್ರಯಪತ್ರ ಮಾಡಿಕೊಡಲು ನಿರ್ಧರಿಸಲಾಗಿದೆ. ಈ ಪ್ರಸ್ತಾವಕ್ಕೆ ಸಮ್ಮತಿ ನೀಡಬೇಕು' ಎಂದು ಆಯುಕ್ತರು ನಗರಾಭಿವೃದ್ಧಿ ಇಲಾಖೆಗೆ 2019ರ ಏಪ್ರಿಲ್ 2ರಂದು ಪತ್ರ ಬರೆದಿದ್ದರು.

ಬೋರೇಗೌಡರ ಮಕ್ಕಳಾದ ಶ್ರೀಹರಿ ಬೋರೇಗೌಡ, ಶ್ರೀನಿಧಿ ಬೋರೇಗೌಡ, ಶ್ರೀಸಾಯಿ ಗೌಡ, ಶ್ರೀಮಾಯಿ ಸುನಿಲ್ ಅವರಿಗೆ 2024ರ ಜುಲೈ 12ರಂದು ಬಿಡಿಎ ಶುದ್ಧ ಕ್ರಯಪತ್ರ ಮಾಡಿಕೊಟ್ಟಿದೆ. 'ಇದೊಂದು ಅಪವಾದಾತ್ಮಕ (ಎಕ್ಸೆಪ್ಷನಲ್) ಪ್ರಕರಣವೆಂದು ಪರಿಗಣಿಸಿ, ಎರಡೂ ಕಡೆ ರಸ್ತೆ ಇರುವುದರಿಂದ ಚಾಲ್ತಿ ನಿವೇಶನ ದರದ ಶೇ 10ರಷ್ಟು ಮೊತ್ತ ಪಾವತಿಸಿಕೊಂಡು ಶುದ್ಧ ಕ್ರಯಪತ್ರ ನೋಂದಾಯಿಸಲು ತೀರ್ಮಾನಿಸಲಾಗಿದೆ' ಎಂದು ನಮೂದಿಸಲಾಗಿದೆ.



Dr. L. S. Bore Gowda,
No. 42, 27th Cross, IV Block,
Jayanagar, Bangalore 560011.

Sir,

Sub:-Representation dated 29-8-1972 for allotment of a C.A. Site for construction of private Nursing Home and hospital - reg -

Adverting to the above subject, I write to state that the Board at its meeting held on 10-1-1973 has decided to allot the C.A. Site No. 27/A in Block VIII, Jayanagar Extension for construction of a private nursing home and hospital only.

The approximate dimensions of the proposed C.A. Site is 100' x (90+48)/2 and the rate would be at Rs. 27/- per sq.yd.

The correct dimensions and the value of the site etc., will be intimated to you in due course.

Yours faithfully,

1973ರಲ್ಲಿ ಸಿ.ಎ ನಿವೇಶನವನ್ನು ಖಾಸಗಿ ನರ್ಸಿಂಗ್ ಹೋಂಗಾಗಿ ಹಂಚಿಕೆ ಮಾಡಲಾದ ಪತ್ರ

ಮುಖ್ಯಾಂಶಗಳು

- 1973ರಲ್ಲಿ ಸಿಎ ನಿವೇಶನವಾಗಿ ನರ್ಸಿಂಗ್ ಹೋಂ ಉದ್ದೇಶಕ್ಕೆ ಗುತ್ತಿಗೆ
- 1988, 2009, 2013ರಲ್ಲಿ ಶುದ್ಧಕ್ರಯಪತ್ರ ಕೋರಿದ ಮನವಿಗಳ ತಿರಸ್ಕಾರ
- 2024ರ ಜುಲೈನಲ್ಲಿ ₹2 ಕೋಟಿಗೆ ಸಾಮಾನ್ಯ ವಸತಿ ನಿವೇಶನವಾಗಿ ಶುದ್ಧಕ್ರಯ-ಪತ್ರ

₹60 ಕೋಟಿ ಮೌಲ್ಯ!

'ಜಯನಗರ 8ನೇ ಬ್ಲಾಕ್ 40 ಅಡಿ ರಸ್ತೆಯಲ್ಲಿರುವ ಆಸ್ತಿಗಳನ್ನು ವಾಣಿಜ್ಯ ನಿವೇಶನ ಎಂದು ಮುದ್ರಾಂಕ ಮತ್ತು ನೋಂದಣಿ ಇಲಾಖೆ ನಿರ್ಧರಿಸಿ, ಪ್ರತಿ ಚದರ ಮೀಟರ್‌ಗೆ ₹2.9 ಲಕ್ಷ ದರವನ್ನು ನಿಗದಿ ಮಾಡಿದೆ. ಇಲ್ಲಿರುವ, 27/ಎ ಸಂಖ್ಯೆಯ 8,000 ಚದರ ಅಡಿ ವಿಸ್ತೀರ್ಣದ 'ಸಿಎ ನಿವೇಶನವನ್ನು' ₹2 ಕೋಟಿಗೆ ಬಿಡಿಎ ಶುದ್ಧಕ್ರಯಪತ್ರ ಮಾಡಿಕೊಟ್ಟಿದೆ. ಮಾರ್ಗಸೂಚಿ ಮೌಲ್ಯದ ಪ್ರಕಾರ, ಈ ಸ್ವತ್ತಿನ ಮೌಲ್ಯ ₹23.20 ಕೋಟಿಯಾಗಿದೆ. ಮಾರುಕಟ್ಟೆ ದರದಲ್ಲಿ ಇದು ₹60 ಕೋಟಿ ಮೀರುತ್ತದೆ. ಬಿಡಿಎ ಎಲ್ಲ ನಿಯಮಗಳನ್ನು ಉಲ್ಲಂಘಿಸಿ, ಕ್ರಯಪತ್ರ ಮಾಡಿಕೊಟ್ಟಿದೆ' ಎಂದು ಮಾಹಿತಿ ಹಕ್ಕು ಕಾಯ್ದೆಯಡಿ ದಾಖಲೆ ಪಡೆದಿರುವ ಕುಮಾರ್ ದೂರಿದರು.

ಸಿಎ ನಿವೇಶನವಲ್ಲ: ಆಯುಕ್ತ ಜಯರಾಂ

'ನರ್ಸಿಂಗ್ ಹೋಂ ಉದ್ದೇಶಕ್ಕಾಗಿ 'ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್' ನಿವೇಶನ ಹಂಚಿಕೆ ಮಾಡಿರುವುದನ್ನು ನಮ್ಮ ಅಧಿಕಾರಿಗಳು 'ನಾಗರಿಕ ಸೌಲಭ್ಯ' ನಿವೇಶನ ಎಂದು ತಪ್ಪಾಗಿ ಅರ್ಥೈಸಿಕೊಂಡಿದ್ದರು. ಅವರು ಆಗಲೇ ಅಗತ್ಯ ಮೊತ್ತವನ್ನು ನೀಡಿ, ನಿವೇಶನವನ್ನು ಗುತ್ತಿಗೆಗೆ ಪಡೆದಿದ್ದರು. ಮೂಲೆ ನಿವೇಶನವಾಗಿದ್ದರಿಂದ, ಈಗಿನ ದರದ ಶೇ 10ರಷ್ಟನ್ನು ಅಂದರೆ ₹2 ಕೋಟಿ ಪಾವತಿಸಿಕೊಂಡು ಕ್ರಯಪತ್ರ ಮಾಡಿಕೊಡಲಾಗಿದೆ. ಬಡಾವಣೆ ನಕ್ಷೆಯಲ್ಲಿ ಜಯನಗರ 8ನೇ ಬ್ಲಾಕ್‌ನ ನಿವೇಶನ 27–ಎ, ನಾಗರಿಕ ಸೌಲಭ್ಯ ನಿವೇಶನ ಎಂದು ನಮೂದಾಗಿಲ್ಲ. ಹೀಗಾಗಿ, ಬಿಡಿಎ ಅಧಿಕಾರಿಗಳು ತಪ್ಪಾಗಿ ಅರ್ಥೈಸಿಕೊಂಡಿದ್ದನ್ನು ಸರಿಪಡಿಸಿ, ಪ್ರಾಧಿಕಾರದ ಮಂಡಳಿ ಸಭೆಯಲ್ಲಿ ನಿರ್ಣಯ ಮಾಡಿ ನಿವೇಶನವನ್ನು ನೋಂದಣಿ ಮಾಡಿಕೊಡಲಾಗಿದೆ' ಎಂದು ಬಿಡಿಎ ಆಯುಕ್ತ ಎನ್. ಜಯರಾಂ ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಎರಡು ಹೊಸ ಉತ್ಪನ್ನಗಳಿಗೆ ನಗರದ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ

ನಂದಿನಿ ಇಡ್ಲಿ, ದೋಸೆ ಹಿಟ್ಟಿಗೆ 'ಶುಭಾರಂಭ'

ಪ್ರಜಾವಾಣಿ ವಾರ್ತೆ



ಬೆಂಗಳೂರು: ವಾರದ ಹಿಂದೆ ಮಾರುಕಟ್ಟೆಗೆ ಪರಿಚಯಿಸಲಾದ ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ನಂದಿನಿ ಬ್ರ್ಯಾಂಡ್‌ನ 'ಶೇ 5 ವೇ ಪ್ರೋಟೀನ್' ಮಿಶ್ರಣದ ದೋಸೆ ಹಾಗೂ ಇಡ್ಲಿ ಹಿಟ್ಟಿಗೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಸದ್ಯ ಬೆಂಗಳೂರಿನಲ್ಲಿ ಮಾತ್ರ ದೋಸೆ ಮತ್ತು ಇಡ್ಲಿ ಹಿಟ್ಟನ್ನು ಪ್ರಾಯೋಗಿಕವಾಗಿ ಮಾರಾಟ ಮಾಡಲಾಗುತ್ತಿದೆ. ನಂದಿನಿ ಹಾಲಿನ ಬೂತ್‌ಗಳಲ್ಲಿ ಹಿಟ್ಟು ಲಭ್ಯವಿದೆ. ನಿತ್ಯ ಸುಮಾರು ಒಂದು ಟನ್‌ನಷ್ಟು ಮಾರಾಟವಾಗುತ್ತಿದೆ. ಮೂರು– ನಾಲ್ಕು ದಿನಗಳಿಂದ ಸುಮಾರು ಎರಡೂವರೆ ಟನ್ ಹಿಟ್ಟು ಪೂರೈಕೆಯಾಗಿ, ಮಾರಾಟವಾಗಿದೆ. ಬೇಡಿಕೆ ಆಧರಿಸಿ, ನಗರದ ಎಲ್ಲ ಭಾಗಕ್ಕೂ ಹಂತ ಹಂತವಾಗಿ ವಿಸ್ತರಿಸಲು ಕೆಎಂಎಫ್ ಸಿದ್ದತೆ ನಡೆಸಿದೆ.

ಬೆಂಗಳೂರಿನ ಉತ್ತರ ಭಾಗದ ಜಯನಗರ, ಪದ್ಮನಾಭನಗರ ಹಾಗೂ ಕೇಂದ್ರ ಭಾಗದ ಮಲ್ಲೇಶ್ವರ, ಶೇಷಾದ್ರಿಪುರ ಸುತ್ತಮುತ್ತಲಿನ ನಂದಿನಿ ಹಾಲಿನ ಡೀಲರ್‌ಗಳಿಗೆ ದೋಸೆ, ಇಡ್ಲಿ ಹಿಟ್ಟನ್ನು ಪೂರೈಸಲಾಗುತ್ತಿದೆ.

'ಹಿಟ್ಟಿನ ಪೊಟ್ಟಣಗಳನ್ನು ಹಾಲಿನ ವ್ಯಾನ್‌ನಲ್ಲಿ ಕಳುಹಿಸುತ್ತಿಲ್ಲ. ಇದಕ್ಕಾಗಿ ಪ್ರತ್ಯೇಕ ವಾಹನಗಳನ್ನು ನಿಯೋಜಿಸಿದ್ದೇವೆ. ಸದ್ಯ ಐದಾರು ವಾಹನಗಳಲ್ಲಿ ಡೀಲರ್‌ಗಳಿಗೆ ಹಿಟ್ಟಿನ ಪೊಟ್ಟಣಗಳನ್ನು ಪೂರೈಸಲಾಗುತ್ತಿದೆ. ಬೆಂಗಳೂರಿನ ಬೇರೆ ಭಾಗಗಳಿಗೆ ವಿಸ್ತರಣೆ ಮಾಡಿದ ಮೇಲೆ 10ರಿಂದ 12 ವಾಹನ ನಿಯೋಜಿಸಲು ಯೋಜಿಸಿದ್ದೇವೆ' ಎಂದು ಕೆಎಂಎಫ್‌ನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಹಾಲಿನ ಬೂತ್‌ಗೆ ಬರುವ ಗ್ರಾಹಕರು 'ನಂದಿನಿ ದೋಸೆ ಹಿಟ್ಟು ಇದೆಯಾ' ಎಂದು ಕೇಳಿ, ಖರೀದಿಸುತ್ತಿದ್ದಾರೆಂದು ಡೀಲರ್‌ಗಳು ಹೇಳುತ್ತಿದ್ದಾರೆ. ಒಮ್ಮೆ ಖರೀದಿಸಿದವರು, ಪುನಃ ಕೇಳುತ್ತಿದ್ದಾರಂತೆ. ಹೊಸ ಗ್ರಾಹಕರ ಜೊತೆ, ಮತ್ತೆ ಮತ್ತೆ ಖರೀದಿಸುವ ಗ್ರಾಹಕರಿಗೂ ಹಿಟ್ಟು ಲಭ್ಯವಾಗುವಂತೆ ಮಾಡಿ ಎಂದು ಡೀಲರ್‌ಗಳಿಗೆ ಸಲಹೆ ನೀಡಿದ್ದೇವೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ನಂದಿನಿ' ಉತ್ಪನ್ನಗಳಿಗೆ ಯಾವತ್ತೂ ಬೇಡಿಕೆ ಇದೆ. ಈಗ ಇಡ್ಲಿ- ದೋಸೆ ಹಿಟ್ಟನ್ನು ಗ್ರಾಹಕರು ಕೇಳುತ್ತಿದ್ದಾರೆ. ಆದರೆ ಉತ್ಪನ್ನಗಳ ಪ್ಯಾಕಿಂಗ್ ಬಗ್ಗೆ ಸ್ವಲ್ಪ ಗಮನಹರಿಸಿ, ಸರಿಯಾದ ಸಮಯಕ್ಕೆ ಪೂರೈಕೆ ಮಾಡಿದರೆ, ಇನ್ನೂ ವೇಗವಾಗಿ ಗ್ರಾಹಕರನ್ನು ತಲುಪಬಹುದು' ಎಂದು ಡೀಲರ್ ಒಬ್ಬರು ಅಭಿಪ್ರಾಯ ವ್ಯಕ್ತಪಡಿಸಿದರು.

'ರಾಜ್ಯದಾದ್ಯಂತ ವಿಸ್ತರಿಸುವ ಗುರಿ'

'ಈಗ ದಿನವೊಂದಕ್ಕೆ ಒಂದು ಟನ್‌ನಷ್ಟು ದೋಸೆ, ಇಡ್ಲಿ ಹಿಟ್ಟು ಮಾರಾಟ ಆಗುತ್ತಿದೆ. ಬೆಂಗಳೂರಿನ ದಕ್ಷಿಣ ಮತ್ತು ಪಶ್ಚಿಮ ಭಾಗಕ್ಕೆ ಹಿಟ್ಟನ್ನು ಪೂರೈಸುತ್ತಿದ್ದೇವೆ. ಶೀಘ್ರದಲ್ಲೇ ಉಳಿದ ಭಾಗಕ್ಕೂ ವಿಸ್ತರಿಸಿ, ನಿತ್ಯ 5 ಟನ್ ಪೂರೈಕೆಯ ಗುರಿ ಇಟ್ಟುಕೊಂಡಿದ್ದೇವೆ. ಬೇಡಿಕೆ ನೋಡಿಕೊಂಡು, ರಾಜ್ಯದಾದ್ಯಂತ ಮಾರಾಟ ವಿಸ್ತರಿಸುತ್ತೇವೆ' ಎಂದು ಕೆಎಂಎಫ್ ಅಧ್ಯಕ್ಷ ಭೀಮಾ ನಾಯ್ಕ್ ತಿಳಿಸಿದರು.

ಶನಿವಾರ 25 ಕೆ.ಜಿ ಹಿಟ್ಟು ಖರೀದಿಸಿದ್ದೆ. ಅಷ್ಟೂ ಖಾಲಿಯಾಯ್ತು. 'ಹಿಟ್ಟು ಚೆನ್ನಾಗಿದೆ' ಎಂದು ಗ್ರಾಹಕರು ಪ್ರತಿಕ್ರಿಯಿಸಿದ್ದಾರೆ

ಶಿವಣ್ಣ
ನಂದಿನಿ ಬೂತ್ ಮಾಲೀಕರು, ಲಿಂಕ್ ರಸ್ತೆ, ಶೇಷಾದ್ರಿಪುರ, ಬೆಂಗಳೂರು



ಚಂದ್ರಗಿರಿ ಅಪಾರ್ಟ್‌ಮೆಂಟ್ ವೆಲ್ಫೇರ್ ಅಸೋಸಿಯೇಷನ್ ಪದಾಧಿಕಾರಿಗಳು ಶಾಸಕಿ ಮಂಜುಳಾಗೆ ಮನವಿ ಸಲ್ಲಿಸಿದರು

'ಚಂದ್ರಗಿರಿ ಅಪಾರ್ಟ್‌ಮೆಂಟ್‌ಗೆ ಸೌಕರ್ಯ ಕಲ್ಪಿಸಿ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ದೊಡ್ಡಬನಹಳ್ಳಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಿಸಿರುವ ಚಂದ್ರಗಿರಿ ಅಪಾರ್ಟ್‌ಮೆಂಟ್‌ಗೆ ಮೂಲ ಸೌಕರ್ಯಗಳನ್ನು ಒದಗಿಸುವಂತೆ ಅಪಾರ್ಟ್‌ಮೆಂಟ್ ನಿವಾಸಿಗಳು ಶಾಸಕಿ ಮಂಜುಳಾ ಲಿಂಬಾವಳಿ ಅವರಿಗೆ ಮನವಿ ಸಲ್ಲಿಸಿದರು.

ಚಂದ್ರಗಿರಿ ಅಪಾರ್ಟ್‌ಮೆಂಟ್‌ನಲ್ಲಿ 780 ಫ್ಲ್ಯಾಟ್‌ಗಳಿದ್ದು, ಸುಮಾರು ಮೂರು ಸಾವಿರಕ್ಕೂ ಹೆಚ್ಚು ನಿವಾಸಿಗಳಿದ್ದಾರೆ. ಅಪಾರ್ಟ್‌ಮೆಂಟ್‌ಗೆ ಕುಡಿಯುವ ನೀರಿನ ಸಮಸ್ಯೆ, ಬೀದಿ ದೀಪ, ಕೊಳವೆಬಾವಿ ಇನ್ನಿತರ ಸೌಲಭ್ಯಗಳನ್ನು ಕಲ್ಪಿಸುವಂತೆ ನಿವಾಸಿಗಳು ಮನವಿ ಮಾಡಿದರು.

ಬಿಡಿಎ ಚಂದ್ರಗಿರಿ ಅಪಾರ್ಟ್‌ಮೆಂಟ್ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ನಾಸೀರ್ ಮಾತನಾಡಿ, 'ಚಂದ್ರಗಿರಿ ಅಪಾರ್ಟ್‌ಮೆಂಟ್‌ನಲ್ಲಿ ಕುಡಿಯುವ ನೀರಿಗಾಗಿ ಪ್ರತಿ ತಿಂಗಳು ₹7 ಲಕ್ಷಕ್ಕೂ ಹೆಚ್ಚು ಹಣ ವ್ಯಯಿಸಲಾಗುತ್ತದೆ. ಶಾಸಕರ ಅನುದಾನದಲ್ಲಿ ಎರಡು ಕೊಳವೆಬಾವಿ ಕೊರೆಸಿಕೊಡುವಂತೆ ಮನವಿ ಮಾಡಿದರು.

ಮನವಿ ಸ್ವೀಕರಿಸಿದ ಮಂಜುಳಾ ಲಿಂಬಾವಳಿ, ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಿದರು.

ಈ ಸಂಧರ್ಭದಲ್ಲಿ ಬಿಡಿಎ ಚಂದ್ರಗಿರಿ ಅಪಾರ್ಟ್‌ಮೆಂಟ್ ವೆಲ್ಫೇರ್ ಅಸೋಸಿಯೇಷನ್ ಉಪಾಧ್ಯಕ್ಷ ಹರಿನಾಥ್, ಖಜಾಂಚಿ ಬಾಲಾಜಿ, ಸಹ ಖಜಾಂಚಿ ಆದರ್ಶ್, ಮುಖಂಡರಾದ ತಂದೀಪ್, ವಿಂದ್ಯಗಿರಿ, ಶ್ರೀನಿವಾಸ್, ದೇವರಾಜ್, ಮುನಿರಾಜ್ ಹಾಜರಿದ್ದರು.

ಮಡಕೆ ಟೀ ಕುಡಿಯಲು ಹೋಗಿ ಜೀವ ಬಿಟ್ಟರು

ಪ್ರಜಾವಾಣಿ ವಾರ್ತೆ

ಮಾಗಡಿ: ಹೊಸ ವರ್ಷದ ಸಂಭ್ರಮಾಚರಣೆ ಮುಗಿಸಿ ತಡರಾತ್ರಿ ಕುಣಿಗಲ್ ಬಳಿಯ ಜಾನ್ಸನ್ ಹತ್ತಿರ ಮಡಕೆ ಟೀ ಕುಡಿಯಲು ಹೊರಟಿದ್ದ 8 ಮಂದಿ ಸ್ನೇಹಿತರ ಕಾರು ತಾಲ್ಲೂಕಿನ ಹೊಸಪಾಳ್ಯ ಜನತಾ ಕಾಲೊನಿ ಬಳಿ ಪಲ್ಟಿಯಾಗಿ ಕಂದಕಕ್ಕೆ ಬಿದ್ದ ಪರಿಣಾಮ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಗಂಗಪ್ಪನಹಳ್ಳಿ ಮಂಜು (31) ಮತ್ತು ಹೊಸಪಾಳ್ಯದ ಕಿರಣ್ (30) ಮೃತಪಟ್ಟವರು. ಇಬ್ಬರೂ ವಾಹನ ಚಾಲಕರಾಗಿದ್ದರು.

ಗಾಯಗೊಂಡ ನಾಗರಾಜು, ಅನಿಲ್ ಕುಮಾರ್, ಬೈರಪ್ಪ, ಕುಶನ್, ಚರಣ್, ಸಂತೋಷ್ ಅವರನ್ನು ಬೆಂಗಳೂರಿನ ನಿಮ್ಹಾನ್ಸ್ ಹಾಗೂ ಬಿಜಿಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.


ಬೆಂಗಳೂರು-ಮಾಗಡಿ ಮಾರ್ಗದಲ್ಲಿ ಹುಚ್ಚನುಮೇಗೌಡನ ಪಾಳ್ಯದಲ್ಲಿ ರಸ್ತೆ ವಿಸ್ತರಣೆ ಕಾಮಗಾರಿ ನಡೆಯುತ್ತಿತ್ತು. ವೇಗವಾಗಿ ಬಂದ ಕಾರು ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಹಲವು ಬಾರಿ ಪಲ್ಟಿಯಾಗಿ ರಸ್ತೆ ಪಕ್ಕದ ಗುಂಡಿಗೆ ಬಿದ್ದಿದೆ. ಕಾರು ನಜ್ಜುಗುಜ್ಜಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಕೈ’ ಅಭ್ಯರ್ಥಿಯ ಚುನಾವಣಾ ಪ್ರಚಾರಕ್ಕೆ ದೊಡ್ಡ ಮೊತ್ತದ ಹಣ ವಿನಿಯೋಗ?

ಐಶ್ವರ್ಯಾ ಬಳಿ 29 ಕೆ.ಜಿ. ಬೆಳ್ಳಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣ ಪಡೆದು ಹಣ ನೀಡದೇ ವಂಚಿಸಿದ ಆರೋಪ ಎದುರಿಸುತ್ತಿರುವ ರಾಜರಾಜೇಶ್ವರಿ ನಗರ ನಿವಾಸಿ ಐಶ್ವರ್ಯಾ ಗೌಡ ಮತ್ತು ಹರೀಶ್ ದಂಪತಿ ಮನೆಯಲ್ಲಿ 29 ಕೆ.ಜಿ. ಬೆಳ್ಳಿ ಸಾಮಗ್ರಿ ಹಾಗೂ 100 ಗ್ರಾಂ. ಚಿನ್ನಾಭರಣ ಪತ್ತೆಯಾಗಿವೆ.



ಐಶ್ವರ್ಯಾ

ವಂಚನೆ, ಮೋಸ, ನಂಬಿಕೆ ದ್ರೋಹ ಹಾಗೂ ಜೀವ ಬೆದರಿಕೆ ಆರೋಪದಡಿ ಐಶ್ವರ್ಯಾಗೌಡ ಹಾಗೂ ಅವರ ಪತಿ ಹರೀಶ್ ವಿರುದ್ಧ ಚಂದ್ರಾ ಲೇಔಟ್ ಹಾಗೂ ಆರ್‌ಆರ್ ನಗರ ಪೊಲೀಸ್ ಠಾಣೆಗಳಲ್ಲಿ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು, ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

ಐಶ್ವರ್ಯಾಗೌಡ ಅವರ ಮನೆಯ ಮೇಲೆ ಪೊಲೀಸರು ಬುಧವಾರ ಬೆಳಿಗ್ಗೆ 11ರ ಸುಮಾರಿಗೆ ದಾಳಿ ನಡೆಸಿ ಶೋಧಿಸಿದರು. ಸತತ ಆರು ಗಂಟೆ ಶೋಧ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ಮುಖ್ಯಾಂಶಗಳು

- ಸತತ ಆರು ಗಂಟೆ ನಡೆದ ಶೋಧ ಕಾರ್ಯ
- ಉಳಿದ ಚಿನ್ನಾಭರಣಗಳನ್ನು ಬೇರೆಡೆ ಸಾಗಿಸಿರುವ ಸಾಧ್ಯತೆ: ಪೊಲೀಸರ ಮಾಹಿತಿ
- ತನಿಖೆ ಚುರುಕುಗೊಳಿಸಿರುವ ಪೊಲೀಸರು

‘ಸ್ನೇಹ ಬೆಳೆಸಿ ₹3.25 ಕೋಟಿ ನಗದು, 450 ಗ್ರಾಂ. ಚಿನ್ನಾಭರಣ ಪಡೆದು ಐಶ್ವರ್ಯಾಗೌಡ ವಂಚಿಸಿದ್ದಾರೆ’ ಎಂದು ಆರೋಪಿಸಿ, ರಾಜರಾಜೇಶ್ವರಿ ನಗರದ ನಿವಾಸಿ ಶಿಲ್ಪಾಗೌಡ ಅವರು ನೀಡಿದ ದೂರಿನ ಮೇರೆಗೆ ನ್ಯಾಯಾಲಯದಿಂದ ಶೋಧನಾ ವಾರಂಟ್ ಪಡೆದು ಮನೆ ತಪಾಸಣೆ ನಡೆಸಲಾಯಿತು. ಐಶ್ವರ್ಯಾ ಅವರ ಮನೆಯಲ್ಲಿ ಅಂದಾಜು 29 ಕೆ.ಜಿ ಬೆಳ್ಳಿ ಸಾಮಗ್ರಿ, 100 ಗ್ರಾಂ. ಚಿನ್ನ ಪತ್ತೆಯಾಗಿದ್ದು, ಜಪ್ತಿ ಮಾಡಿಕೊಳ್ಳಲಾಗಿದೆ. ಇವುಗಳ ಮೌಲ್ಯ ಅಂದಾಜಿಸಲಾಗುತ್ತಿದೆ. ಕೆಲವು ದಾಖಲೆಗಳನ್ನೂ ವಶಕ್ಕೆ ಪಡೆದುಕೊಳ್ಳ-ಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಉಳಿದ ಚಿನ್ನಾಭರಣಗಳನ್ನು ಬೇರೆಡೆ ಸಾಗಿಸಿರುವ ಸಾಧ್ಯತೆಯಿದ್ದು, ಬೇರೆ ಸ್ಥಳಗಳಲ್ಲೂ ತಪಾಸಣೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ದೂರುದಾರರಾದ ಶಿಲ್ಪಾ ಅವರಿಗೂ ನೋಟಿಸ್ ನೀಡಲಾಗಿದ್ದು, ಪ್ರಕರಣದ ಸಂಬಂಧ ದಾಖಲೆಗಳು ಹಾಗೂ ಇನ್ನಷ್ಟು ಮಾಹಿತಿ ನೀಡುವಂತೆ ಕೋರಲಾಗಿದೆ’ ಎಂದು ಮೂಲಗಳು ಹೇಳಿವೆ.

‘ಸ್ನೇಹಿತರಿಂದ ಹಣ ಪಡೆದು ಸುಮಾರು ₹65 ಲಕ್ಷ ನಗದು ನೀಡಿದ್ದೆ. ಬ್ಯಾಂಕ್ ಖಾತೆಗಳಿಂದ ₹2.60 ಕೋಟಿಯನ್ನು ಸಯೀದಾ ಬಾನು, ಧನು, ಶೀತಲ್, ಚೇತನ್, ಲಕ್ಷ್ಮೀ, ಪ್ರವೀಣ್, ಮಹೇಶ್, ಹರೀಶ್ ಹಾಗೂ ಇತರರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿದ್ದೆ. 2022ರ ಜನವರಿಯಿಂದ ಈವರೆಗೆ ಐಶ್ವರ್ಯಾಗೆ ₹3.25 ಕೋಟಿ ಹಣ ನೀಡಿದ್ದೇನೆ’ ಎಂದು ಶಿಲ್ಪಾಗೌಡ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಖಾತೆದಾರರನ್ನು ಪತ್ತೆ ಹಚ್ಚಲಾಗುತ್ತಿದೆ. ಅವರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು’ ಎಂದು ಪೊಲೀಸರು ತಿಳಿಸಿದರು.

‘ಆಭರಣ ಮಳಿಗೆಗಳ ಮಾಲೀಕರು ಹಾಗೂ ಪರಿಚಯಸ್ಥರಿಗೆ ಕೋಟ್ಯಂತರ ರೂಪಾಯಿ ವಂಚಿಸಿದ ಐಶ್ವರ್ಯಾ ದಂಪತಿ ರಾಜಕೀಯ ಮುಖಂಡರ ಚುನಾವಣೆಗೆ ದೊಡ್ಡ ಮೊತ್ತದ ಹಣ ಖರ್ಚು ಮಾಡಿರುವುದು ತನಿಖೆಯಲ್ಲಿ ಗೊತ್ತಾಗಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯ ಕ್ಷೇತ್ರವೊಂದರ ಕಾಂಗ್ರೆಸ್ ಅಭ್ಯರ್ಥಿ ಪರವಾಗಿ ಪ್ರಚಾರಕ್ಕೆ ದೊಡ್ಡ ಮೊತ್ತದ ಹಣ ವಿನಿಯೋಗ ಮಾಡಿದ್ದಾರೆ ಎಂಬ ಆರೋಪವಿದ್ದು, ಹೆಚ್ಚಿನ ಮಾಹಿತಿ ಸಂಗ್ರಹಿಸಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

ದಂಪತಿ ಬಿಡುಗಡೆ

ವಾರಾಹಿ ವರ್ಲ್ಡ್ ಆಫ್ ಗೋಲ್ಡ್ ಚಿನ್ನದಂಗಡಿ ಮಾಲೀಕರಾದ ವನಿತಾ ಎಸ್.ಐತಾಳ್ ಅವರಿಂದ ₹8.41 ಕೋಟಿ ಸಾಲ ಪಡೆದು ವಂಚಿಸಿದ್ದ ಆರೋಪದ ಅಡಿ ಐಶ್ವರ್ಯಾಗೌಡ ದಂಪತಿಯನ್ನು ಚಂದ್ರಾಲೇಔಟ್ ಠಾಣೆಯ ಪೊಲೀಸರು ಶನಿವಾರ ಬಂಧಿಸಿದ್ದರು.

ನ್ಯಾಯಾಂಗ ಬಂಧನದಲ್ಲಿದ್ದ ಅವರನ್ನು ನ್ಯಾಯಾಲಯದ ಅನುಮತಿ ಪಡೆದು ಹೆಚ್ಚಿನ ವಿಚಾರಣೆಗೆ ಪೊಲೀಸರು ತಮ್ಮ ಕಸ್ಟಡಿಗೆ ಪಡೆದುಕೊಂಡಿದ್ದರು.

ಆರೋಪಿಗಳು ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್ ಏಕಸದಸ್ಯ ಪೀಠ ಮಂಗಳವಾರ ಆರೋಪಿಗಳ ಬಿಡುಗಡೆಗೆ ಆದೇಶಿಸಿತ್ತು. ಪೊಲೀಸ್ ಕಸ್ಟಡಿಯಿಂದ ಆರೋಪಿಗಳು ಬುಧವಾರ ಬೆಳಿಗ್ಗೆ ಬಿಡುಗಡೆ ಆಗಿದ್ದಾರೆ.

ಅಪರಾಧ ಸುದ್ದಿ

ಸುದ್ದಿ 2 ನಿಮಿಷ

ಕೆಎಸ್‌ಆರ್‌ಟಿಸಿಗೆ 9 ಪ್ರಶಸ್ತಿ

ಬೆಂಗಳೂರು: ರಾಷ್ಟ್ರ ಮಟ್ಟದ 9 ಪ್ರಶಸ್ತಿಗಳಿಗೆ ಕೆಎಸ್‌ಆರ್‌ಟಿಸಿ ಭಾಜನವಾಗಿದೆ.

ಅಶ್ವಮೇಧ ಕ್ಲಾಸಿಕ್ ಬಸ್ಸುಗಳ ಪರಿಚಯಕ್ಕೆ ಪರಿಣಾಮಕಾರಿ ಸಾರ್ವಜನಿಕ ಸಂಪರ್ಕ ಉಪಕ್ರಮ ಪ್ರಶಸ್ತಿ, ಅತ್ಯುತ್ತಮ ಕಾರ್ಪೊರೇಟ್ ಸಂವಹನ ಹಾಗೂ ನಿರ್ವಹಣೆ ಪ್ರಶಸ್ತಿ, ವರ್ಷದ ಅತ್ಯುತ್ತಮ ಬ್ರ್ಯಾಂಡ್ ಪ್ರಶಸ್ತಿ, ಅಂಬಾರಿ ಉತ್ಸವಕ್ಕೆ ಅತ್ಯುತ್ತಮ ಬ್ರ್ಯಾಂಡ್ ಅನುಭವ ಪ್ರಶಸ್ತಿ, ಪಲ್ಲಕ್ಕಿ ಬಸ್‌ಗೆ ಅತ್ಯುತ್ತಮ ಗ್ರಾಹಕ ಸ್ವೀಕೃತಿ ಪ್ರಶಸ್ತಿ, ಪ್ರತಿಷ್ಠಿತ ಬಸ್‌ಗಳ ಸೇವೆಗಳ ಬ್ರ್ಯಾಂಡಿಂಗ್‌ಗೆ ಅತ್ಯುತ್ತಮ ಸಾರ್ವಜನಿಕ ಸಂಪರ್ಕ ಪ್ರಶಸ್ತಿಗಳು ಲಭಿಸಿವೆ.

ನಿಗಮವು ಅತ್ಯುತ್ತಮ ಪರಿಸರ ನಿರ್ವಹಣೆ ಹಾಗೂ ವಿನೂತನ ಮಾನವ ಸಂಪನ್ಮೂಲ ಯೋಜನೆಗಳ ಅನುಷ್ಠಾನಕ್ಕಾಗಿ ಗ್ರೋ ಕೇರ್ ಇಂಡಿಯಾ ಪ್ರಶಸ್ತಿಯನ್ನು 2 ವಿಭಾಗದಲ್ಲಿ ಪಡೆದಿದೆ.

ದೆಹಲಿಯಲ್ಲಿ ಆ್ಯಡ್‌ವರ್ಲ್ಡ್ ಪ್ರಶಸ್ತಿಗಳನ್ನು, ಗೋವಾದಲ್ಲಿ ಗ್ರೋ ಕೇರ್ ಇಂಡಿಯಾ ಪ್ರಶಸ್ತಿ ಹಾಗೂ ರಾಯಪುರದಲ್ಲಿ ಪಿಆರ್‌ಎಸ್‌ಐ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬಿಎಂಟಿಸಿ: ವಿಮಾ ಪರಿಹಾರ ವಿತರಣೆ



ಬೆಂಗಳೂರು: ಅನಾರೋಗ್ಯ ಸಹಿತ ವಿವಿಧ ಕಾರಣದಿಂದ ಮೃತಪಟ್ಟ ಬಿಎಂಟಿಸಿಯ 17 ನೌಕರರ ಅವಲಂಬಿತರಿಗೆ ತಲಾ ₹ 10 ಲಕ್ಷ ವಿಮಾ ಪರಿಹಾರವನ್ನು ವಿತರಿಸಲಾಯಿತು.

ಪರಿಹಾರದ ಚೆಕ್ ವಿತರಿಸಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, ‘ಅಪಘಾತ ಹೊರತುಪಡಿಸಿ ಬೇರೆ ಕಾರಣದಿಂದ ಮೃತಪಟ್ಟ ನೌಕರರಿಗೆ ಹಿಂದೆ ₹3 ಲಕ್ಷ ವಿಮಾ ಪರಿಹಾರ ನೀಡಲಾಗುತ್ತಿತ್ತು. ಗುಂಪು ವಿಮಾ ಯೋಜನೆಯ ಈ ಮೊತ್ತವನ್ನು ₹10 ಲಕ್ಷಕ್ಕೆ ಹೆಚ್ಚಿಸಲಾಗಿದೆ’ ಎಂದು ಮಾಹಿತಿ ನೀಡಿದರು.

ಹಬ್ಬದ ದಿನಗಳಲ್ಲಿ ಬಸ್‌ಗಳ ಸಂಚಾರಕ್ಕೆ ಅತ್ಯುತ್ತಮವಾಗಿ ವ್ಯವಸ್ಥೆ ಮಾಡಿ ಸಂಸ್ಥೆಗೆ ಹೆಚ್ಚಿನ ಆದಾಯ ತಂದ ಘಟಕಗಳ ವ್ಯವಸ್ಥಾಪಕರಿಗೆ ಇದೇ ಸಂದರ್ಭದಲ್ಲಿ ಪ್ರಶಂಸನಾ ಪತ್ರ ಮತ್ತು ನಗದು ಬಹುಮಾನ ನೀಡಿ ಗೌರವಿಸಲಾಯಿತು. ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್., ನಿರ್ದೇಶಕ (ಭದ್ರತಾ ಮತ್ತು ಜಾಗೃತೆ) ಅಬ್ದುಲ್ ಅಹದ್ ಉಪಸ್ಥಿತರಿದ್ದರು.

ಸಾಕು ನಾಯಿ ಸಾವು ನೊಂದ ಮಾಲೀಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ರಾಜಶೇಖರ್

ನೆಲಮಂಗಲ: ಸಾಕು ನಾಯಿಯ ಸಾವಿನಿಂದ ಮನನೊಂದ ಮಾಲೀಕರೊಬ್ಬರು ಬೆಂಗಳೂರು ಉತ್ತರ ತಾಲ್ಲೂಕಿನ ಹೆಗ್ಗಡದೇವನಪುರದಲ್ಲಿ ಬುಧವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗ್ರಾಮದ ರಾಜಶೇಖರ್ (33) ಆತ್ಮಹತ್ಯೆ ಮಾಡಿಕೊಂಡವರು. ರಾಜಶೇಖರ್ ಅವರ ಬಳಿಯಿದ್ದ ಜರ್ಮನ್ ಶೆಫರ್ಡ್ ತಳಿಯ ಸಾಕುನಾಯಿ ‘ಬೌನ್ಸಿ’ ಮಂಗಳವಾರ ಮೃತಪಟ್ಟಿತ್ತು.

ರಾಜಶೇಖರ್ ಅವರು ಒಂಬತ್ತು ವರ್ಷಗಳ ಹಿಂದೆ ನಾಯಿ ಖರೀದಿಸಿ ತಂದು ಪ್ರೀತಿಯಿಂದ ಸಾಕುತ್ತಿದ್ದರು. ಕೆಲವು ದಿನಗಳಿಂದ ಅದು ಅನಾರೋಗ್ಯದಿಂದ ಬಳಲುತ್ತಿತ್ತು.

ತಮ್ಮ ಜಮೀನಿನಲ್ಲಿ ನಾಯಿಯ ಅಂತ್ಯಸಂಸ್ಕಾರ ನೆರವೇರಿಸಿ ಮನೆಗೆ ಬಂದಿದ್ದ ರಾಜಶೇಖರ್ ಅವರು ಬುಧವಾರ ಬೆಳಿಗ್ಗೆ ನಾಯಿಯ ಚೈನ್ ಕೊರಳಿಗೆ ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಸ್ಥಿತಿಯಲ್ಲಿ ಪತ್ತೆ ಆಗಿದ್ದಾರೆ.

ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ.



ಹೊಸ ವರ್ಷಕ್ಕೆ ಪೂಜೆ ಹೊಸ ವರ್ಷದ ಅಂಗವಾಗಿ ಬನಶಂಕರಿ ದೇವಸ್ಥಾನದಲ್ಲಿ ಜನರು ಬನಶಂಕರಿ ದೇವಿಯ ದರ್ಶನ ಪಡೆದರು –ಪ್ರಜಾವಾಣಿ ಚಿತ್ರ

ಗುಂಪುಗಳ ನಡುವೆ ಗಲಾಟೆ: ಆಟೊ ಚಾಲಕನಿಗೆ ಇರಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಪಿ. ಅಗ್ರಹಾರ ಪೊಲೀಸ್ ಠಾಣಾ ವ್ಯಾಪ್ತಿಯ ಚಿಕ್ಕಸೇತುವೆ ಬಳಿ ಬುಧವಾರ ನಸುಕಿನ ವೇಳೆ ನಡೆದ ಗಲಾಟೆಯಲ್ಲಿ ಆಟೊ ಚಾಲಕನಿಗೆ ಚಾಕುವಿನಿಂದ ಇರಿದು, ಆರೋಪಿಗಳು ಪರಾರಿ ಆಗಿದ್ದಾರೆ.

ಕುಶಾಲ್(25) ಹಲ್ಲೆಗೆ ಒಳಗಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕುಶಾಲ್ ಅವರ ತಾಯಿ ನೀಡಿದ ದೂರು ಆಧರಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಹೊಸ ವರ್ಷಾಚರಣೆ ನಿಮಿತ್ತ ಸ್ನೇಹಿತರೆಲ್ಲರೂ ಪಾರ್ಟಿ ನಡೆಸಿದ್ದರು. ಆಗ ಮತ್ತೊಂದು ಗುಂಪಿನವರು ಕುಶಾಲ್ ಮೇಲೆ ಹಲ್ಲೆ ನಡೆಸಿ ಚಾಕುವಿನಿಂದ ಇರಿದು ಪರಾರಿ ಆಗಿದ್ದಾರೆ ಎಂಬ ಅನುಮಾನ ವ್ಯಕ್ತವಾಗಿದೆ. ಕೃತ್ಯ ನಡೆದ ಅಕ್ಕಪಕ್ಕದ ಸ್ಥಳಗಳಲ್ಲಿರುವ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿರುವ ದೃಶ್ಯಾ-ವಳಿಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.


ಗಲಾಟೆ ನಡೆದು ಆರೋಪಿಗಳು ಚಾಕುವಿನಿಂದ ಇರಿದು ಪರಾರಿ ಆಗಿದ್ದಾರೆ. ಕುಶಾಲ್ ಸ್ಥಳದಲ್ಲೇ ಕುಸಿದು ರಕ್ತದ ಮಡುವಿನಲ್ಲಿ ಬಿದ್ದಿದ್ದರು. ನಸುಕಿನ ವೇಳೆ ಕೃತ್ಯ ನಡೆದ ಕಾರಣ ಯಾರೂ ಗಮನಿಸಿರಲಿಲ್ಲ. ಬೆಳಿಗ್ಗೆ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು ಕುಶಾಲ್ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ.

ನಗರದಲ್ಲಿ ಇಂದು

2024ರಲ್ಲಿ ನಿವೃತ್ತರಾದ ಎಂಜಿನಿಯರ್‌ಗಳಿಗೆ ಸನ್ಮಾನ: ಅತಿಥಿ: ಗಂಗಾವತಿ ಪ್ರಾಣೇಶ್, ಅಧ್ಯಕ್ಷತೆ: ರಾಮ್‌ಪ್ರಸಾತ್ ಮನೋಹರ್ ವಿ., ಆಯೋಜನೆ: ಬೆಂಗಳೂರು ಜಲಮಂಡಳಿ ಅಭಿಯಂತರರ ಸಂಘ, ಸ್ಥಳ: ಜಲಮಂಡಳಿಯ ಸಭಾಂಗಣ, 4ನೇ ಮಹಡಿ, ಬೆಂಗಳೂರು ಜಲಮಂಡಳಿ ಕಾವೇರಿ ಭವನ, ಕೆ.ಜಿ. ರಸ್ತೆ, ಮಧ್ಯಾಹ್ನ 3

‘ಲೋಕ ಜಾನಪದ’ ತ್ರೈಮಾಸಿಕ ಸಂಚಿಕೆ ಬಿಡುಗಡೆ: ಧರಣಿದೇವಿ ಮಾಲಗತ್ತಿ, ಅಧ್ಯಕ್ಷತೆ: ಗೊಲ್ಲಹಳ್ಳಿ ಶಿವಪ್ರಸಾದ್, ಅತಿಥಿ: ಹಿ.ಚಿ. ಬೋರಲಿಂಗಯ್ಯ, ಪ್ರಾಸ್ತಾವಿಕ ನುಡಿ: ಮಲ್ಲಿಕಾರ್ಜುನ ಕಲಮರಹಳ್ಳಿ, ಆಯೋಜನೆ: ಕರ್ನಾಟಕ ಜಾನಪದ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3.30

ವಾರ್ಷಿಕೋತ್ಸವ: ಶ್ರೀರಾಮಕೃಷ್ಣ ದಿವಸ, ‘ಶ್ರೀರಾಮಕೃಷ್ಣ–ಪುರಾತನ–ನಿತ್ಯನೂತನ’ ಉಪನ್ಯಾಸ: ಸರಗೂರು ರಮೇಶ್, ‘ಶ್ರೀರಾಮಕೃಷ್ಣ–ಧರ್ಮದ ಪರಿಪೂರ್ಣ ರೂಪ’ ಉಪನ್ಯಾಸ: ಸ್ವಾಮಿ ಮಂಗಲನಾಥನಂದಜಿ ಮಹಾರಾಜ್, ಆಯೋಜನೆ ಮತ್ತು ಸ್ಥಳ: ರಾಮಕೃಷ್ಣ ಮಠ, ಬಸವನಗುಡಿ, ಸಂಜೆ 5.30ರಿಂದ



‘ನಿರಂತರಂ’ ರಾಷ್ಟ್ರೀಯ ಸಂಗೀತ ಮತ್ತು ನೃತ್ಯೋತ್ಸವ: ಅತಿಥಿಗಳು: ಬಿ.ಕೆ. ಶಿವರಾಮ್, ಶುಭಾ ಧನಂಜಯ್, ಗಾಯನ: ಅಂಜಲಿ ಶ್ರೀರಾಮ್, ನೃತ್ಯ ಪ್ರವೇಶಂ: ನಾಟ್ಯಾಲಯ ಸ್ಕೂಲ್ ಆಫ್ ಡಾನ್ಸ್, ಭರತನಾಟ್ಯ ಪ್ರದರ್ಶನ: ವಿ. ಯೋಗೇಶ್ ಕುಮಾರ್, ವಿ. ಸ್ನೇಹಾ ನಾರಾಯಣ್, ಆಯೋಜನೆ: ಸಂಗೀತ ಸಂಭ್ರಮ ಸಂಸ್ಥೆ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5ರಿಂದ

ಅಪಘಾತ: ಇಬ್ಬರು ನೌಕರರ ಸಾವು

ಕನಕಪುರ: ಸಾತನೂರು ಸರ್ಕಲ್‌ನಲ್ಲಿ ಮಂಗಳವಾರ ರಾತ್ರಿ ಸಂಭವಿಸಿದ ಅಪಘಾತದಲ್ಲಿ ಬೆಂಗಳೂರು ಕಂಪನಿಯೊಂದರ ನೌಕರರಿಬ್ಬರು ಸ್ಥಳದಲ್ಲಿ ಸಾವಿಗೀಡಾಗಿದ್ದಾರೆ. ಇನ್ನಿಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ.

ಅಪಘಾತದಲ್ಲಿ ನಿರಂಜನ್ (38) ಮತ್ತು ವಿಶ್ವನಾಥ್ (59) ಎಂಬುವರು ಮೃತಪಟ್ಟಿದ್ದು, ಸಾಗರ್ ಮತ್ತು ಕಿರಣ್ ಕುಮಾರ್ ಎಂಬುವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕೆಲಸಕ್ಕಾಗಿ ನಾಲ್ವರು ಮಂಗಳವಾರ ಬೆಳಿಗ್ಗೆ ಕಾರಿನಲ್ಲಿ ಚಾಮರಾಜನಗರದಲ್ಲಿರುವ ಕಚೇರಿಗೆ ತೆರಳಿದ್ದರು. ಕೆಲಸ ಮುಗಿಸಿಕೊಂಡು ರಾತ್ರಿ ಬೆಂಗಳೂರಿಗೆ ಮರಳುವಾಗ ಸಾತನೂರು ಸರ್ಕಲ್ ಬಳಿ ಮುಂದೆ ಹೊರಟಿದ್ದ ಕ್ಯಾಂಟರ್‌ಗೆ ಕಾರು ಡಿಕ್ಕಿ ಹೊಡೆದಿದೆ.

ಮದ್ಯ ಸೇವಿಸಿ ವಾಹನ ಚಾಲನೆ 513 ಮಂದಿ ವಿರುದ್ಧ ಎಫ್‌ಐಆರ್



ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷಾಚರಣೆಯ ಪಾರ್ಟಿಯಲ್ಲಿ ಮದ್ಯ ಸೇವಿಸಿ ವಾಹನ ಚಾಲನೆ ಮಾಡಿಕೊಂಡು ತೆರಳುತ್ತಿದ್ದ ದ್ವಿಚಕ್ರ ವಾಹನ ಸವಾರರು ಹಾಗೂ ವಾಹನ ಚಾಲಕರ ವಿರುದ್ಧ ಕಾರ್ಯಾಚರಣೆ ನಡೆಸಿದ ಸಂಚಾರ ಪೊಲೀಸರು 513 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಮಂಗಳವಾರ ದಿನವಿಡೀ ವಿಶೇಷ ಕಾರ್ಯಾಚರಣೆ ನಡೆಸಲಾಯಿತು. 28,127ಕ್ಕೂ ಹೆಚ್ಚು ವಾಹನಗಳನ್ನು ತಪಾಸಣೆ ನಡೆಸಲಾಯಿತು. ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಯಿತು ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಪಾರ್ಟಿ: ಅಸಭ್ಯ ವರ್ತನೆ

ಹೊಸ ವರ್ಷಾಚರಣೆಯ ಪಾರ್ಟಿಗೆಂದು ಸ್ನೇಹಿತನ ಜತೆಗೆ ಪಬ್‌ಗೆ ತೆರಳಿದ್ದ ಯುವತಿ ಜತೆಗೆ ಯುವಕನೊಬ್ಬ ಅಸಭ್ಯವಾಗಿ ವರ್ತಿಸಿದ್ದು ಈ ಸಂಬಂಧ ಮಾರತ್‌ಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಂಗಳವಾರ ತಡರಾತ್ರಿ ಕಾಡುಬೀಸನಹಳ್ಳಿಯ ಪಬ್‌ನಲ್ಲಿ ಘಟನೆ ನಡೆದಿದೆ.

ಪಾರ್ಟಿ ನಡೆಯುತ್ತಿದ್ದ ಸಂದರ್ಭದಲ್ಲಿ ಯುವಕನೊಬ್ಬ ಅಸಭ್ಯವಾಗಿ ಸ್ಪರ್ಶಿಸಿದ್ದಾನೆ. ಆಗ ಯುವತಿ ಕಿರುಚಿಕೊಂಡಿದ್ದಾರೆ. ಪಬ್ ಸಿಬ್ಬಂದಿ ಸ್ಥಳಕ್ಕೆ ಬರುವಷ್ಟರಲ್ಲಿ ಆರೋಪಿ ಪರಾರಿ ಆಗಿದ್ದ. ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಹೊಸ ವರ್ಷಾಚರಣೆ: ಎಂ.ಜಿ. ರಸ್ತೆ ಸುತ್ತಮುತ್ತ 15 ಟನ್ ತ್ಯಾಜ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷಾಚರಣೆ ಸಂದರ್ಭದಲ್ಲಿ ನಗರದ ಎಂ.ಜಿ. ರಸ್ತೆ ಹಾಗೂ ಸುತ್ತಮುತ್ತಲಿನ ರಸ್ತೆಗಳಲ್ಲಿ 15 ಟನ್ ತ್ಯಾಜ್ಯವನ್ನು ಬಿಬಿಎಂಪಿ ಸಿಬ್ಬಂದಿ ಸಂಗ್ರಹಿಸಿ, ವಿಲೇವಾರಿ ಮಾಡಿದ್ದಾರೆ.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳ ಮೇಲ್ವಿಚಾರಣೆ-ಯಲ್ಲಿ, ನಗರದ ಸಿಬಿಡಿ ರಸ್ತೆಗಳಲ್ಲಿ ಬಿದ್ದಿದ್ದ ತ್ಯಾಜ್ಯವನ್ನು ತೆರವುಗೊಳಿಸಿದ್ದಾರೆ.

ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ರೆಸಿಡೆನ್ಸಿ ರಸ್ತೆ, ರಿಚ್ಮಂಡ್ ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ, ಕಸ್ತೂರ ಬಾ ರಸ್ತೆಗಳಲ್ಲಿ ಬುಧವಾರ ಮುಂಜಾನೆ 3ರಿಂದ ಬೆಳಿಗ್ಗೆ 7ರವರೆಗೆ ಸ್ವಚ್ಛತಾ ಕಾರ್ಯ ನಡೆಸಲಾಯಿತು. 15 ಟನ್ ತ್ಯಾಜ್ಯವನ್ನು ಬೀದಿಗಳಿಂದ ತೆರವುಗೊಳಿಸಲಾಗಿದೆ ಎಂದು ಬಿಎಸ್‌ಡಬ್ಲ್ಯುಎಂಎಲ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಬಸವರಾಜ್ ಕಬಾಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಂತಿನಗರ ಘನತ್ಯಾಜ್ಯ ವಿಭಾಗದಿಂದ ಸ್ವಚ್ಛತಾ ಕಾರ್ಯ ಮಾಡಲಾಗಿದ್ದು, 25 ಆಟೊ ಟಿಪ್ಪರ್‌ಗಳು, ಮೂರು ಕಾಂಪ್ಯಾಕ್ಟರ್‌ಗಳೊಂದಿಗೆ 70ಕ್ಕೂ ಹೆಚ್ಚು ಪೌರಕಾರ್ಮಿಕರು, ಕಿರಿಯ ಆರೋಗ್ಯ ಅಧಿಕಾರಿಗಳು, ಮಾರ್ಷಲ್‌ಗಳು ಕಾರ್ಯನಿರ್ವಹಿಸಿದರು.

ಸಿಬಿಡಿ ರಸ್ತೆಗಳು ಹಾಗೂ ಪಾದಚಾರಿ ಮಾರ್ಗಗಳಲ್ಲಿದ್ದ ಪ್ಲಾಸ್ಟಿಕ್ ಚೀಲಗಳು, ಪ್ಲಾಸ್ಟಿಕ್ ತ್ಯಾಜ್ಯ, ಚಪ್ಪಲಿಗಳು, ಮದ್ಯದ ಬಾಟಲಿಗಳು ಸೇರಿದಂತೆ ಅನುಪಯುಕ್ತ ವಸ್ತುಗಳನ್ನು ಬೇರ್ಪಡಿಸಿ ಸಂಗ್ರಹಿಸಲಾಗಿದೆ. ಪುನರ್ ಬಳಕೆಯ ಸುಮಾರು ಮೂರು ಟನ್ ತ್ಯಾಜ್ಯವನ್ನು ಒಣ ತ್ಯಾಜ್ಯ ಸಂಗ್ರಹಣಾ ಘಟಕಕ್ಕೆ ಕಳುಹಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಎಂ.ಜಿ. ರಸ್ತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಸ್ವಚ್ಛತೆ-ಯನ್ನು ಸ್ಥಳೀಯರಾದ ಸುಮಾರು 25 ವಾಯುವಿಹಾರಿಗಳು ಖಾತರಿಪಡಿಸಿದ್ದಾರೆ ಎಂದಿದ್ದಾರೆ.

ಮಕ್ಕಳೊಂದಿಗೆ ಕೇಕ್ ಕತ್ತರಿಸಿ ಸಂಭ್ರಮಿಸಿದ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ

ವೃದ್ಧಾಶ್ರಮಗಳಲ್ಲಿ ಪೊಲೀಸರ ಹೊಸ ವರ್ಷಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ವಿಭಾಗಗಳ ಪೊಲೀಸರು ಈ ಬಾರಿಯೂ ಹೊಸ ವರ್ಷವನ್ನು ವಿಭಿನ್ನವಾಗಿ ಆಚರಣೆ ಮಾಡಿದರು. ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಬುಧವಾರ ಮಕ್ಕಳೊಂದಿಗೆ ಕೇಕ್ ಕತ್ತರಿಸಿ ಹೊಸವರ್ಷವನ್ನು ಸ್ವಾಗತಿಸಿದರು.

ಆಯಾ ವಿಭಾಗದ ಡಿಸಿಪಿಗಳು, ಎಸಿಪಿಗಳು, ಇನ್‌ಸ್ಪೆಕ್ಟರ್‌ಗಳು, ಪಿಎಸ್‌ಐಗಳು ತಮ್ಮ ವ್ಯಾಪ್ತಿಯ ಬಾಲಮಂದಿರ, ಅನಾಥಾಶ್ರಮ, ವೃದ್ಧಾಶ್ರಮಗಳಿಗೆ ತೆರಳಿ ಹೊಸ ವರ್ಷವನ್ನು ಆಚರಣೆ ಮಾಡಿದರು. ಅಲ್ಲದೇ ಹೊಸ ಬಟ್ಟೆ ವಿತರಣೆ ಮಾಡಿದರು. ಊಟದ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಅಗತ್ಯ ಪರಿಕರಗಳನ್ನೂ ವಿತರಣೆ ಮಾಡಲಾಯಿತು.

ಮಾತೃಶ್ರೀ ವೃದ್ಧಾಶ್ರಮದಲ್ಲಿ ಬೇಗೂರು ಠಾಣೆ ಪೊಲೀಸರು ಹೊಸ ವರ್ಷ ಆಚರಣೆ ಮಾಡಿದರು. ಇದೇ ವೇಳೆ ವೃದ್ಧರಿಗೆ ಹಣ್ಣು ವಿತರಿಸಿದರು. ಯಾವುದೇ ಸಮಸ್ಯೆ ಬಂದರೂ ಪೊಲೀಸರನ್ನು ಸಂಪರ್ಕಿಸುವಂತೆ ಮನವಿ ಮಾಡಿದರು.




ಹುಳಿಮಾವು ಠಾಣೆ ವ್ಯಾಪ್ತಿಯ ಆಲ್ಬರ್ನ್ ಭವನ ವೃದ್ಧಾಶ್ರಮದಲ್ಲಿ ಬುಧವಾರ ಪೊಲೀಸರು ಹೊಸ ವರ್ಷ ಆಚರಣೆ ಮಾಡಿದರು

ಪೂರ್ವ ವಿಭಾಗದ ಸಂಚಾರ ಪೊಲೀಸರು, ಕ್ರಿಸ್ತು ಸೇವಾ ಸಮಾಜ ಅನಾಥಾಶ್ರಮ/ ವೃದ್ಧಾಶ್ರಮಕ್ಕೆ ಭೇಟಿ ನೀಡಿ ಅಲ್ಲಿನ ಹಿರಿಯ ನಾಗರಿಕರ ಯೋಗಕ್ಷೇಮ ವಿಚಾರಿಸಿದರು. ಮನೋಸ್ಥೈರ್ಯ ತುಂಬಿ ಎಲ್ಲರಿಗೂ ಶುಭಾಶಯ ಕೋರಿ ಸಿಹಿಹಂಚಿ ಅವರೊಂದಿಗೆ ಸಮಯ ಕಳೆದರು. ಇದು ನಿವಾಸಿಗಳಲ್ಲಿ ನವೋಲ್ಲಾಸ ತರಿಸಿತು.

ಕೆ.ಆರ್. ಪುರ ಸಂಚಾರ ಠಾಣೆ ಪೊಲೀಸರು, ಶಿಶು ಮಂದಿರದ ಮಕ್ಕಳೊಂದಿಗೆ ಹೊಸ ವರ್ಷದ ಉತ್ಸಾಹವನ್ನು ಹಂಚಿಕೊಂಡರು. ಮಕ್ಕಳಿಗೆ ಸಿಹಿ ವಿತರಿಸಿ ಶುಭಾಶಯ ಕೋರಿದರು. ರಾಜಾಜಿನಗರ ಸಂಚಾರ ಠಾಣೆ ಪೊಲೀಸರು ಶ್ರೀ ವೃದ್ಧಾಶ್ರಮಕ್ಕೆ ಭೇಟಿ ನೀಡಿ ನಿವಾಸಿಗಳಿಗೆ ದಿನಬಳಕೆ ವಸ್ತು ವಿತರಿಸಿದರು.

ಪಶ್ಚಿಮ ವಿಭಾಗದ ಪೊಲೀಸರು, ಮಾಗಡಿ ರಸ್ತೆ ಪೊಲೀಸ್ ಕಾಲೊನಿಯ ಪೊಲೀಸ್ ಸಿಬ್ಬಂದಿ ಮತ್ತು ಅವರ ಕುಟುಂಬದವರೊಂದಿಗೆ ವಿನೂತನವಾಗಿ ಹೊಸ ವರ್ಷವನ್ನು ಬರಮಾಡಿಕೊಂಡರು.

ಎಲೆಕ್ಟ್ರಾನಿಕ್ ಸಿಟಿ ಎಸಿಪಿ ಎಲೆಕ್ಟ್ರಾನಿಕ್ ಸಿಟಿ ಉಪ ವಿಭಾಗದ ವ್ಯಾಪ್ತಿಯ ಹುಳಿಮಾವು, ಬೇಗೂರು ಹಾಗೂ ಪರಪ್ಪನ ಅಗ್ರಹಾರದ ವ್ಯಾಪ್ತಿಯ ವೃದ್ಧಾಶ್ರಮಗಳಿಗೆ ಭೇಟಿ ನೀಡಿ, ಶುಭ ಕೋರಿದರು. ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು, ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಭೇಟಿ ನೀಡಿದರು. ಈಶಾನ್ಯ ವಿಭಾಗದ ಪೊಲೀಸರು, ಅಂಗವಿಕಲ ಮಕ್ಕಳಿಗೆ ಶುಭ ಕೋರಿ ಸಿಹಿ ಹಂಚಿದರು.



ಕಮಿಷನರ್ ಬಿ.ದಯಾನಂದ ಅವರು ಹೊಸ ವರ್ಷಾಚರಣೆಗೆ ಶುಭ ಕೋರಲು ಹೂಗುಚ್ಛ, ಸಿಹಿ ತಿನಿಸುಗಳನ್ನು ತರದಂತೆ ಸೂಚಿಸಿದ್ದರು.

ಅದೇ ಹಣದಲ್ಲಿ ತಮ್ಮ ವ್ಯಾಪ್ತಿಯ ಅನಾಥಾಶ್ರಮಗಳಿಗೆ ದಿನಸಿ, ಸಿಹಿ ತಿನಿಸು ಅಥವಾ ಊಟದ ವ್ಯವಸ್ಥೆ ಮಾಡುವಂತೆ ಸೂಚಿಸಿದ್ದರು. ಅವರ ಸೂಚನೆಯಂತೆ ವಿವಿಧ ವಿಭಾಗಗಳ ಪೊಲೀಸರು ವಿಭಿನ್ನವಾಗಿ ಹೊಸ ವರ್ಷ ಆಚರಣೆ ಮಾಡಿದರು.

ಮೆಟ್ರೊ 3ನೇ ಹಂತದಲ್ಲಿ ಎತ್ತರಿಸಿದ ರಸ್ತೆ ನಿರ್ಮಾಣಕ್ಕೆ ₹5,358 ಕೋಟಿ ಅಂದಾಜು ವೆಚ್ಚ

ದಟ್ಟಣೆ ತಗ್ಗಿಸಲಿರುವ ಡಬಲ್ ಡೆಕರ್

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಗರದಲ್ಲಿ ಸದ್ಯ 3.36 ಕಿ.ಮೀ. ಮಾತ್ರ ಡಬಲ್ ಡೆಕರ್ ಇದ್ದು, ನಮ್ಮ ಮೆಟ್ರೊ ಮೂರನೇ ಹಂತ ಪೂರ್ಣ ಡಬಲ್ ಡೆಕರ್ ಆಗಲಿದೆ. ಇದರಿಂದ 44.65 ಕಿ.ಮೀ. ಸೇರ್ಪಡೆ ಗೊಳ್ಳಲಿದ್ದು, ಹೆಬ್ಬಾಳ, ಕಾಮಾಕ್ಯ ಜಂಕ್ಷನ್, ಜೆ.ಪಿ.ನಗರ ಮತ್ತಿತರ ಪ್ರಮುಖ ಜಂಕ್ಷನ್‌ಗಳಲ್ಲಿ ವಾಹನ ದಟ್ಟಣೆಯನ್ನು ಕಡಿಮೆ ಮಾಡಲಿದೆ.

ಮೂರನೇ ಹಂತದ (ಕಿತ್ತಳೆ ಮಾರ್ಗ) ಯೋಜನೆಯಲ್ಲಿ ಮೊದಲು ಡಬಲ್ ಡೆಕರ್ ಸೇರಿರಲಿಲ್ಲ. ಮುಂದೆ ನಗರದಲ್ಲಿ ಮೆಟ್ರೊ ಎತ್ತರಿಸಿದ ಮಾರ್ಗ ಎಲ್ಲೆಲ್ಲಿ ಬರುತ್ತದೋ ಅಲ್ಲೆಲ್ಲ ಡಬಲ್ ಡೆಕರ್ ನಿರ್ಮಿಸಬೇಕು ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವರು ಸೂಚಿಸಿದ್ದರಿಂದ ಕಿತ್ತಳೆ ಮಾರ್ಗದಲ್ಲಿ ಡಬಲ್ ಡೆಕರ್ ಸೇರ್ಪಡೆ ಮಾಡಲಾಗಿದೆ.

ಕಿತ್ತಳೆ ಮಾರ್ಗದ ಕಾರಿಡಾರ್ 1 ಕೆಂಪಾಪುರದಿಂದ ಹೆಬ್ಬಾಳ, ಪೀಣ್ಯ, ಸುಮನಹಳ್ಳಿ ಕ್ರಾಸ್, ಮೈಸೂರು ರಸ್ತೆ, ಕಾಮಾಕ್ಯ ಜಂಕ್ಷನ್‌ಗಳ ಮೂಲಕ ಜೆ.ಪಿ. ನಗರ 4ನೇ ಹಂತದವರೆಗೆ 32.15 ಕಿಲೋ ಮೀಟರ್ ಹಾಗೂ ಕಾರಿಡಾರ್-2 ಹೊಸಹಳ್ಳಿಯಿಂದ ಕಡಬಗೆರೆವರೆಗೆ 12.5 ಕಿ.ಮೀ. ನಿರ್ಮಾಣಗೊಳ್ಳಲಿದೆ. ಈ ಯೋಜನೆಗೆ ಕೇಂದ್ರ ಸರ್ಕಾರ ಒಪ್ಪಿಗೆಯನ್ನು ಕೂಡ ನೀಡಿದ್ದು ಭೂಸ್ವಾಧೀನ ಪ್ರಕ್ರಿಯೆ ಆರಂಭವಾಗಿದೆ.

ಈ ಮೆಟ್ರೊ ಮಾರ್ಗದಲ್ಲಿ ಡಬಲ್ ಡೆಕರ್ ರಸ್ತೆ ನಿರ್ಮಿಸಲು ಪ್ರತಿ ಕಿ.ಮೀ.ಗೆ ₹ 120 ಕೋಟಿ ವೆಚ್ಚವಾಗಲಿದೆ. ಕೇಂದ್ರ ಸರ್ಕಾರವು ಮೆಟ್ರೊ ಯೋಜನೆಗಷ್ಟೇ ರಾಜ್ಯ ಸರ್ಕಾರದೊಂದಿಗೆ ವೆಚ್ಚ ಹಂಚಿಕೊಳ್ಳಲಿದೆ. ಡಬಲ್ ಡೆಕರ್ ರಸ್ತೆ ನಿರ್ಮಾಣ ವೆಚ್ಚವನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರ ಅಥವಾ ಬಿಬಿಎಂಪಿ ಭರಿಸಬೇಕಿದೆ.

‘ನೆಲ ಮಟ್ಟದಲ್ಲಿ ಈಗಿರುವ ರಸ್ತೆಗಳು ಹಾಗೆಯೇ ಮುಂದುವರಿಯುತ್ತವೆ. ಅದರ ಮೇಲೆ ಎತ್ತರಿಸಿದ ರಸ್ತೆ, ಅದಕ್ಕಿಂತ ಮೇಲೆ ಮೆಟ್ರೊ ಮಾರ್ಗ ನಿರ್ಮಾಣವಾಗಲಿದೆ. ಇದರಿಂದಾಗಿ ಡಬಲ್ ಡೆಕರ್ ರಸ್ತೆಯಲ್ಲಿ ಎಲ್ಲಿಯೂ ‘ಟ್ರಾಫಿಕ್ ಸಿಗ್ನಲ್’ಗಳು ಇರುವುದಿಲ್ಲ. ಹೋಗುವ ಮತ್ತು ಬರುವ ರಸ್ತೆಗಳು ಪ್ರತ್ಯೇಕವಾಗಿ ಇರುವುದರಿಂದ ಎಲ್ಲಿಯೂ ಮುಖಾಮುಖಿ ಆಗುವುದಿಲ್ಲ. ವೇಗವಾಗಿ ಸಾಗುವ ವಾಹನಗಳು ಯಾವುದೇ ತೊಡ-ಕುಗಳಿಲ್ಲದೇ ಸಾಗಬಹುದು’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

‘ಸರ್ವೀಸ್ ರಸ್ತೆಯಿಂದ ಡಬಲ್ ಡೆಕರ್ ರಸ್ತೆಗೆ ಹೋಗುವವರಿಗೆ ಹಾಗೂ ಸರ್ವೀಸ್ ರಸ್ತೆಗೆ ಇಳಿಯುವವರಿಗೆ ಅನುಕೂಲ ಆಗಲು ಕೆಲವೇ ಕಡೆಗಳಲ್ಲಿ ಎತ್ತರಿಸಿದ ಮಾರ್ಗಕ್ಕೆ ಸಂಪರ್ಕಗಳಿರುತ್ತವೆ. ಇದರಿಂದ ಸರ್ವೀಸ್ ರಸ್ತೆಯಲ್ಲಿ ಕೂಡ ದಟ್ಟಣೆ ಕಡಿಮೆಯಾಗಲಿದೆ. ವರ್ಷದಿಂದ ವರ್ಷಕ್ಕೆ ವಾಹನಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಡಬಲ್ ಡೆಕರ್ ರಸ್ತೆಗಳು ಅನಿವಾರ್ಯ’ ಎಂದು ತಿಳಿಸಿದರು.

ತಾಂತ್ರಿಕ ಒಪ್ಪಿಗೆ

‘ಕಿತ್ತಳೆ ಮಾರ್ಗದಲ್ಲಿ ಕೆಲವೇ ಜಂಕ್ಷನ್‌ಗಳಲ್ಲಿ ಡಬಲ್ ಡೆಕರ್ ನಿರ್ಮಿಸುವ ಬದಲು ಮಾರ್ಗಪೂರ್ತಿ ಡಬಲ್ ಡೆಕರ್ ರಸ್ತೆ ನಿರ್ಮಿಸುವಂತೆ ನಮಗೆ ನಿರ್ದೇಶನ ಬಂದಿದೆ. ಅದರಂತೆ ಯೋಜನೆ ರೂಪಿಸಲಾಗುತ್ತಿದೆ’ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ತಾಂತ್ರಿಕವಾಗಿ ರಾಜ್ಯ ಸರ್ಕಾರದ ಅನುಮೋದನೆ ಸಿಕ್ಕಿದೆ. ಸ್ಥಳೀಯಾಡಳಿತ ಇಲ್ಲವೇ ರಾಜ್ಯ ಸರ್ಕಾರ ಅನುದಾನ ಒದಗಿಸಲಿದೆ’ ಎಂದು ಅವರು ಮಾಹಿತಿ ನೀಡಿದರು.

ಆರ್.ವಿ. ರಸ್ತೆ- ಬೊಮ್ಮಸಂದ್ರ ಮೆಟ್ರೊ ಮಾರ್ಗದಲ್ಲಿ ರಾಗಿಗುಡ್ಡ-ಕೇಂದ್ರ ರೇಷ್ಮೆ ಮಂಡಳಿ ಮಧ್ಯೆ 3.36 ಕಿ.ಮೀ. ಮಾತ್ರ ಡಬಲ್ ಡೆಕರ್ ರಸ್ತೆ ಇದೆ. ಅದರಲ್ಲಿ ರಾಗಿಗುಡ್ಡದಿಂದ ರೇಷ್ಮೆ ಮಂಡಳಿ ಕಡೆಗೆ ವಾಹನ ಸಂಚಾರಕ್ಕೆ ರಸ್ತೆ ತೆರೆದಿದೆ. ರೇಷ್ಮೆ ಮಂಡಳಿಯಿಂದ ರಾಗಿಗುಡ್ಡ ಕಡೆಗೆ ಕೆಲವೇ ತಿಂಗಳಲ್ಲಿ ಸಂಚಾರ ಆರಂಭವಾಗಲಿದೆ ಎಂದು ಹೇಳಿದರು.

ಅಂಕಿ ಅಂಶಗಳು

₹15,611 ಕೋಟಿ ನಮ್ಮ ಮೆಟ್ರೊ 3ನೇ ಹಂತ ನಿರ್ಮಾಣ ಅಂದಾಜು ವೆಚ್ಚ

₹5,358 ಕೋಟಿ ಡಬಲ್ ಡೆಕರ್ ರಸ್ತೆ ನಿರ್ಮಾಣದ ಅಂದಾಜು ವೆಚ್ಚ

₹120 ಕೋಟಿ ಪ್ರತಿ ಕಿ.ಮೀ. ಡಬಲ್ ಡೆಕರ್ ರಸ್ತೆ ನಿರ್ಮಾಣಕ್ಕೆ ತಗಲುವ ವೆಚ್ಚ





ನಮ್ಮ ಮೆಟ್ರೊ ಮೂರನೇ ಹಂತದ (ಕಿತ್ತಳೆ ಮಾರ್ಗ) ಎರಡು ಕಾರಿಡಾರ್‌ಗಳು

ಆರೋಪಿಗೆ ಮತ್ತದೇ ಹುದ್ದೆ: ಶೆಟ್ಟರ್ ಕಿಡಿ

ಬೆಳಗಾವಿ: ‘ತಹಶೀಲ್ದಾರ್ ಕಚೇರಿಯಲ್ಲೇ ಎಸ್‌ಡಿಎ ಆತ್ಮಹತ್ಯೆಗೆ ಕಾರಣರಾದ ತಹಶೀಲ್ದಾರ್ ಬಸವರಾಜ ನಾಗರಾಳ ಅವರನ್ನು ಮತ್ತೆ ಅದೇ ಸ್ಥಾನಕ್ಕೆ ರಾಜ್ಯ ಸರ್ಕಾರ ನಿಯೋಜಿಸಿದ್ದು ಅಕ್ಷಮ್ಯ’ ಎಂದು ಸಂಸದ ಜಗದೀಶ ಶೆಟ್ಟರ್ ಕಿಡಿ ಕಾರಿದರು.

ನಗರದಲ್ಲಿ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಎಸ್‌ಡಿಎ ರುದ್ರಣ್ಣ ಯಡವಣ್ಣವರ ಅವರು ನ.5ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ತನ್ನ ಸಾವಿಗೆ ತಹಶೀಲ್ದಾರ್ ನಾಗರಾಳ, ಅಶೋಕ ಕಬ್ಬಲಿಗೇರ ಹಾಗೂ ಸೋಮು ದೊಡವಾಡ ಎಂಬ ವ್ಯಕ್ತಿಗಳೇ ಕಾರಣ ಎಂದು ಮರಣಪತ್ರ ಬರೆದಿದ್ದರು. ಇದರಲ್ಲಿ ತಹಶೀಲ್ದಾರ್ ಪ್ರಮುಖ (ಎ1) ಆರೋಪಿ. ಆರೋಪಿಯನ್ನು ಅದೇ ಕಚೇರಿಯ ಅದೇ ಸ್ಥಾನದಲ್ಲಿ ನೇಮಕ ಮಾಡಿದ್ದರ ಹಿಂದಿನ ‘ಮರ್ಮ’ವೇನು’ ಎಂದು ಅವರು ಪ್ರಶ್ನಿಸಿದರು.



ಪ್ರಯಾಣಿಕರಿಗಿಲ್ಲ ಬಸ್ ನಿಲ್ದಾಣ...

ಒಳಚರಂಡಿ ಕಾಮಗಾರಿಗಾಗಿ ನಗರದ ಕೆ.ಆರ್. ವೃತ್ತದ ಬಳಿಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು (ಯುವಿಸಿಇ) ಎದುರಿನ ಬಸ್ ನಿಲ್ದಾಣವನ್ನೇ ಅಗೆದು ಹಾಕಿರುವುದರಿಂದ ಪ್ರಯಾಣಿಕರು ಸಮಸ್ಯೆ ಎದುರಿಸುವಂತಾಗಿದೆ
ಪ್ರಜಾವಾಣಿ ಚಿತ್ರ: ರಂಜು ಪಿ.

ಒಬಿಸಿ ರೈಲ್ವೆ ನೌಕರರ ಸಂಘ: ಗೋವರ್ಧನ್ ಪುನರಾಯ್ಕೆ



ಬೆಂಗಳೂರು: ಅಖಿಲ ಭಾರತ ಹಿಂದುಳಿದ ವರ್ಗಗಳ (ಒಬಿಸಿ) ರೈಲ್ವೆ ನೌಕರರ ಸಂಘದ ನೈರುತ್ಯ ರೈಲ್ವೆ ವಲಯದ ಪ್ರಧಾನ ಕಾರ್ಯದರ್ಶಿಯಾಗಿ ಗೋವರ್ಧನ್ ವೈ. ಪುನರಾಯ್ಕೆ ಆಗಿದ್ದಾರೆ. ಸಂಘಕ್ಕೆ ನಡೆದ ಚುನಾವಣೆಯಲ್ಲಿ ಅವರು ಆಯ್ಕೆಯಾದರು ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಎ.6ರಿಂದ ರಾಮನವಮಿ ಸಂಗೀತೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಏಪ್ರಿಲ್ 6ರಿಂದ ಮೇ 2ರ ವರೆಗೆ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ ‘87ನೇ ಶ್ರೀ ರಾಮನವಮಿ ಸಂಗೀತೋತ್ಸವ’ ಹಮ್ಮಿಕೊಂಡಿದೆ.

ತಿಂಗಳು ಪೂರ್ತಿ ನಡೆಯುವ ಈ ಸಂಗೀತೋತ್ಸವದಲ್ಲಿ ಹಿಂದೂಸ್ತಾನಿ, ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕರು, ವೀಣೆ, ಪಿಟೀಲು, ಕೊಳಲು ಸೇರಿ ವಿವಿಧ ವಾದ್ಯಗಳ ವಾದಕರು ಸಂಗೀತ ಕಛೇರಿ ನಡೆಸಿಕೊಡಲಿದ್ದಾರೆ. ಏ.6ರ ಬೆಳಿಗ್ಗೆ 8.30ರಿಂದ ರಾಮನವಮಿ ಮಹಾ ಅಭಿಷೇಕ ನಡೆಯಲಿದೆ. ಮಲ್ಲಾಡಿ ಸಹೋದರರು ವಿಶೇಷ ಸಂಗೀತ ಸೇವೆ ಸಲ್ಲಿಸಲಿದ್ದಾರೆ. ಸಂಜೆ 5.45ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದೆ.

ಒಂದು ತಿಂಗಳ ಸಂಗೀತೋತ್ಸವದಲ್ಲಿ ಜಯತೀರ್ಥ ಮೇವುಂಡಿ, ತ್ರಿಚೂರ್ ಸಹೋದರರು, ವಿದ್ಯಾಭೂಷಣ, ರಂಜನಿ ಮತ್ತು ಗಾಯತ್ರಿ, ಪ್ರವೀಣ್ ಗೋಡ್ಖಿಂಡಿ, ಅಭಿಷೇಕ್ ರಘುರಾಂ, ವೆಂಕಟೇಶ್ ಕುಮಾರ್, ಶಾಹಿದ್ ಪರ್ವಿಜ್, ಸುಮಾ ಸುಧೀಂದ್ರ, ಎಸ್. ಸಾಕೇತರಾಮನ್, ಮೈಸೂರು ನಾಗರಾಜ್ ಮತ್ತು ಮೈಸೂರು ಮಂಜುನಾಥ್ ಸೇರಿ ಸಂಗೀತ ಕ್ಷೇತ್ರದ ಪ್ರಮುಖ ಗಾಯಕರು ಹಾಗೂ ಕಲಾವಿದರು ಕಛೇರಿ ನಡೆಸಿಕೊಡಲಿದ್ದಾರೆ. www.ramanavamitickets.com ವೆಬ್‌ಸೈಟ್ ಮೂಲಕ ಟಿಕೆಟ್‌ಗಳನ್ನು ಕಾಯ್ದಿರಿಸಬಹುದು. ವಿವರಕ್ಕೆ 9448079079 ಅಥವಾ 9483518012ಕ್ಕೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಅಮಿತೇಶ್ ಕುಮಾರ್ ಸಿನ್ಹಾ ವಿಭಾಗೀಯ ರೈಲ್ವೆ ವ್ಯವಸ್ಥಾಪಕ

ಬೆಂಗಳೂರು: ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾಗಿ ಅಮಿತೇಶ್ ಕುಮಾರ್ ಸಿನ್ಹಾ ಬುಧವಾರ ಅಧಿಕಾರ ವಹಿಸಿಕೊಂಡರು.



1996 ಬ್ಯಾಚ್‌ನ ಭಾರತೀಯ ರೈಲ್ವೆ ಸೇವೆಯ (ಐಆರ್‌ಎಸ್‌ಇ) ಅಧಿಕಾರಿಯಾಗಿರುವ ಅವರು ರೈಲ್ವೆ ಮಂಡಳಿಯಲ್ಲಿ ಹಣಕಾಸು ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕ ರಾಗಿದ್ದರು. ಅಲ್ಲಿ ಸಂಪನ್ಮೂಲ ಕ್ರೋಢೀಕರಣ ಮತ್ತು ಸಾರ್ವಜನಿಕ-ಖಾಸಗಿ ಸಹಭಾಗಿತ್ವದ (ಪಿಪಿಪಿ) ಯೋಜನೆಗಳನ್ನು ನಿರ್ವಹಿಸುತ್ತಿದ್ದರು.

ಭಾರತ ಸರ್ಕಾರದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದಲ್ಲಿ ಜಂಟಿ ಕಾರ್ಯದರ್ಶಿ, ಇಂಡಿಯಾ ಸೆಮಿಕಂಡಕ್ಟರ್ ಮಿಷನ್‌ನ ಸಿಇಒ, ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದಲ್ಲಿ ಜಂಟಿ ಕಾರ್ಯದರ್ಶಿಯಾಗಿ, ಸಕಾರಾತ್ಮಕ ಸಂಪುಟ ಸಚಿವಾಲಯದ ನಿರ್ದೇಶಕರಾಗಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ.

ನಿಧನ ವಾರ್ತೆ

ಎಲ್.ಜಿ. ಸುಮಿತ್ರಾ

ಬೆಂಗಳೂರು: ಆಕಾಶವಾಣಿಯ ನಿವೃತ್ತ ಅಧಿಕಾರಿ ಮತ್ತು ಲೇಖಕಿ ಎಲ್.ಜಿ. ಸುಮಿತ್ರಾ (90) ಬುಧವಾರ ನಿಧನರಾದರು. ಅವರಿಗೆ ಮೂವರು ಸಹೋದರಿಯರು ಹಾಗೂ ಸಹೋದರ ಇದ್ದಾರೆ.



ಸುಮಿತ್ರಾ ಅವರು ಕನ್ನಡದ ವಿದ್ವಾಂಸ ಎಲ್. ಗುಂಡಪ್ಪ ಅವರ ಪ್ರಥಮ ಪುತ್ರಿ. ಅವರು ದೆಹಲಿಯಲ್ಲಿ ವಾರ್ತಾ ವಿಭಾಗ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ನಂತರ ದೆಹಲಿಯ ಎನ್‌ಸಿಇಆರ್‌ಟಿ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದ್ದರು.

ಮಲ್ಲಿಕಾ

ಬೆಂಗಳೂರು: ಹಣ್ಣೂರಿನ ಚಿಕ್ಕಣ್ಣ ಬಡಾವಣೆಯ ನಿವಾಸಿ ಮಲ್ಲಿಕಾ (64) ಬುಧವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರರು, ಪುತ್ರಿ ಇದ್ದಾರೆ.



ಕಾರ್ಪೊರೇಷನ್ ಜೀವನಜ್ಯೋತಿ ಕಲ್ಪಲ್ಲಿ ರುದ್ರಭೂಮಿಯಲ್ಲಿ ಬುಧವಾರ ಮಲ್ಲಿಕಾ ಅವರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ನ್ಯಾಯಮೂರ್ತಿಗಳ ಖಾಸಗಿ ಜೀವನವೇ ಮೊಟಕು: ಹೈಕೋರ್ಟ್ ಕಳವಳ

‘ಒತ್ತಡದ ಭಾರದಲ್ಲಿ ನ್ಯಾಯಮೂರ್ತಿಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೈಕೋರ್ಟ್ ನ್ಯಾಯಮೂರ್ತಿಗಳು ಭಾರಿ ಆರಾಮಾಗಿ ರುತ್ತಾರೆ. ಅವರಿಗೆ ರಜಾ ದಿನಗಳು ಹೆಚ್ಚು ಎಂಬ ತಪ್ಪು ಕಲ್ಪನೆ ಸಲ್ಲದು. ತಡೆಯಲಾರದ ಕೆಲಸದ ಒತ್ತಡವೇ ಇತ್ತೀಚಿನ ಕೆಲವು ನ್ಯಾಯಮೂರ್ತಿಗಳ ಸಾವುಗಳಿಗೆ ಮತ್ತೂ ಕೆಲವರ ಗುಣಪಡಿಸಲಾಗದ ಅನಾರೋಗ್ಯಕ್ಕೆ ಕಾರಣವಾಗುತ್ತಿದೆ’ ಎಂದು ಹೈಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿದೆ.

ಪ್ರಕರಣವೊಂದರ ವಿಚಾರಣೆ ವೇಳೆ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಮೌಖಿಕ ಆತಂಕವನ್ನು ಹೊರಹಾಕಿದ್ದು, ‘ವಾಸ್ತವದಲ್ಲಿ ನ್ಯಾಯಮೂರ್ತಿಗಳು ಅತೀವ ಒತ್ತಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.



‘ಇದಕ್ಕೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಮೋಹನ ಎಂ. ಶಾಂತನ ಗೌಡರ್ ಅವರ ಇತ್ತೀಚಿನ ಸಾವು ಜ್ವಲಂತ ಉದಾಹರಣೆ’ ಎಂದಿದೆ.

‘ನ್ಯಾಯಮೂರ್ತಿಗಳ ಖಾಸಗಿ ಜೀವನವೇ ಮೊಟಕಾಗಿರುತ್ತದೆ. ರಜಾ ದಿನಗಳಲ್ಲಿ ಅರ್ಜಿಗಳ ಪರಿಶೀಲನೆ, ಉಕ್ತಲೇಖನ, ಓದು ಇತ್ಯಾದಿಗಳ ಹೊರೆ ಹೆಚ್ಚಿರುತ್ತದೆ. ಆದರೆ, ಇದೆಲ್ಲಾ ಪರಿಗಣಿಸದೆ ರಜಾ ದಿನಗಳನ್ನು ಅವರು ಆರಾಮಾಗಿ ಅನುಭವಿಸುತ್ತಾರೆ ಎಂಬ ತಪ್ಪು ಕಲ್ಪನೆಯಿಂದ ಯಾರೇ ಆಗಲಿ ಬೇಕಾಬಿಟ್ಟಿ ಮಾತನಾಡಿಕೊಳ್ಳುವುದು ಸಲ್ಲದು’ ಎಂದು ನ್ಯಾಯಮೂರ್ತಿ ಹೇಳಿದರು. ಪ್ರಕರಣದಲ್ಲಿ ವಾದ ಮಂಡಿಸುತ್ತಿದ್ದ ಪದಾಂತಕ ಹಿರಿಯ ವಕೀಲ ಉದಯ ಹೊಳ್ಳ ಅವರಿಗೆ ಈ ಕುರಿತಂತೆ ನೋವಿನಿಂದ ವಿವರಿಸಿದ ನ್ಯಾಯಮೂರ್ತಿಗಳು, ‘ವಕೀಲ ವೃಂದವು ನ್ಯಾಯಪೀಠಕ್ಕೆ ಸಹಕರಿಸುವಂತೆ ಕಾರ್ಯ ನಿರ್ವಹಿಸಬೇಕು. ನ್ಯಾಯಮೂರ್ತಿಗಳ ಕಷ್ಟವನ್ನು ವಕೀಲರು ತಮ್ಮ ಕಕ್ಷಿದಾರರಿಗೆ ಮನವರಿಕೆ ಮಾಡಿಕೊಡಬೇಕು. ಈ ವಿಚಾರದಲ್ಲಿ ಪದಾಂತಕ ಮತ್ತು ಹಿರಿಯ ವಕೀಲರು ಮುಂದಾಗಬೇಕು’ ಎಂದು ಮನವಿ ಮಾಡಿದರು.

ಬೆಂಗಳೂರು ವಕೀಲರ ಸಂಘದ ಪದಾಧಿಕಾರಿಗಳ ಚುನಾವಣೆ

ಮಹಿಳಾ ಮೀಸಲು ಕೋರಿಕೆ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸದ್ಯದಲ್ಲೇ ನಡೆಯಬೇಕಿರುವ ಬೆಂಗಳೂರು ವಕೀಲರ ಸಂಘದ (ಎಎಬಿ) ಪದಾಧಿಕಾರಿಗಳ ಚುನಾವಣೆಯಲ್ಲಿ ಮಹಿಳಾ ಅಭ್ಯರ್ಥಿಗಳಿಗೆ ಶೇ 33ರಷ್ಟು ಮೀಸಲು ಕಲ್ಪಿಸಲು ನಿರ್ದೇಶಿಸಬೇಕು’ ಎಂದು ಕೋರಲಾದ ರಿಟ್ ಅರ್ಜಿ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ವಕೀಲರ ಸಂಘಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಹೈಕೋರ್ಟ್ ವಕೀಲೆ ದೀಕ್ಷಾ ಎನ್.ಅಮೃತೇಶ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರಿದ್ದ ರಜಾಕಾಲದ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರ ಪರ ಪದಾಂತಕ ಹಿರಿಯ ವಕೀಲ ಲಕ್ಷ್ಮಿ ಅಯ್ಯಂಗಾರ್ ಅವರ ವಾದ ಆಲಿಸಿದ ನ್ಯಾಯಪೀಠ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ರಾಜ್ಯ ವಕೀಲರ ಪರಿಷತ್ ಮತ್ತು ಬೆಂಗಳೂರು ವಕೀಲರ ಸಂಘ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಇದೇ 6ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: ‘ಬೆಂಗಳೂರು ವಕೀಲರ ಸಂಘದ ಹಾಲಿ ಪದಾಧಿಕಾರಿಗಳ ಅಧಿಕಾರಾವಧಿ 2024ರ ಡಿಸೆಂಬರ್ 19ರಂದು ಕೊನೆಗೊಂಡಿದೆ. 2025ರ ಜನವರಿ ಅಥವಾ ಫೆಬ್ರುವರಿಯಲ್ಲಿ ಚುನಾವಣೆ ನಡೆಸಲು ಉದ್ದೇಶಿಸಲಾಗಿದೆ. ಈ ಕಾರಣದಿಂದ ಮಹಿಳೆಯರಿಗೆ ಶೇ 33ರಷ್ಟು ಮೀಸಲು ನಿಗದಿಪಡಿಸುವಂತೆ ಬೆಂಗಳೂರು ವಕೀಲರ ಸಂಘ ಸೇರಿದಂತೆ ಅರ್ಜಿಯಲ್ಲಿ ಕಾಣಿಸಲಾಗಿರುವ ಇತರ ಪ್ರತಿವಾದಿಗಳಿಗೆ ನಾವು 2024ರ ಡಿಸೆಂಬರ್ 23ರಂದು ಮನವಿ ಸಲ್ಲಿಸಿದ್ದೇವೆ’ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

‘ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಮುಂಬರುವ ಬೆಂಗಳೂರು ವಕೀಲರ ಸಂಘದ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಆಯ್ಕೆಯ ಚುನಾವಣೆಯಲ್ಲಿ ಮಹಿಳಾ ಅಭ್ಯರ್ಥಿಗಳಿಗೆ ಶೇ 33ರಷ್ಟು ಮೀಸಲು ಕಲ್ಪಿಸಬೇಕು ಎಂಬ ನಮ್ಮ ಮನವಿಗೆ ಪೂರಕವಾಗಿ ಪ್ರತಿವಾದಿಗಳು ಈತನಕ ಯಾವುದೇ ಕ್ರಮ ಕೈಗೊಂಡಿಲ್ಲ. ಹಾಗಾಗಿ, ಈ ನಿಟ್ಟಿನಲ್ಲಿ ಸಂಘದ ಬೈ-ಲಾಗೆ ತಿದ್ದುಪಡಿ ಮಾಡುವ ಮೂಲಕ ನಮ್ಮ ಮನವಿ ಪತ್ರ ಪರಿಗಣಿಸಿ ಮಹಿಳೆಯರಿಗೆ ಶೇ 33ರಷ್ಟು ಸೀಟುಗಳ ಮೀಸಲು ಕಲ್ಪಿಸಲು ಪ್ರತಿವಾದಿಗಳಿಗೆ ಆದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಫಾರ್ಮ್ ಹೌಸ್‌ನಲ್ಲಿ ರೇವ್ ಪಾರ್ಟಿ ನಡೆಸಿದ ಪ್ರಕರಣ

ಹೇಮಾ ವಿರುದ್ಧದ ವಿಚಾರಣೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಗೋಡಿ ಸಮೀಪದ ಸಿಂಗೇನ ಅಗ್ರಹಾರದಲ್ಲಿನ ಜಿ.ಆರ್. ಫಾರ್ಮ್ ಹೌಸ್‌ನಲ್ಲಿ ರೇವ್ ಪಾರ್ಟಿ ನಡೆಸಿದ್ದ ಆರೋಪಕ್ಕೆ ಸಂಬಂಧಿಸಿದಂತೆ ತೆಲುಗು ನಟಿ ಕೊಲ್ಲ ಹೇಮಾ ವಿರುದ್ಧ ವಿಚಾರಣಾ ನ್ಯಾಯಾಲಯದಲ್ಲಿ ನಡೆಯುತ್ತಿರುವ ನ್ಯಾಯಿಕ ಪ್ರಕ್ರಿಯೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ಹೈದರಾಬಾದ್‌ನ ಕೊಲ್ಲ ಹೇಮಾ (52) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಹೇಮಾ ಪರ ವಕೀಲರು, ‘ಈ ಪ್ರಕರಣದಲ್ಲಿ ಸಹ ಆರೋಪಿಗಳ ಹೇಳಿಕೆ ಆಧರಿಸಿ ಹೇಮಾ ವಿರುದ್ಧ ಮಾದಕ ದ್ರವ್ಯ ನಿಗ್ರಹ ಕಾಯ್ದೆ-1985ರ (ಎನ್‌ಡಿಪಿಎಸ್) ಕಲಂ 27 (ಬಿ) ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. ಆದರೆ, ಅವರು ಮಾದಕ ವಸ್ತು ಸೇವಿಸಿದ್ದಾರೆ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ. ಹಾಗಾಗಿ, ಪ್ರಕರಣಕ್ಕೆ ತಡೆ ನೀಡಬೇಕು’ ಎಂದು ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ. ಅಂತೆಯೇ, ಮುಂದಿನ ವಿಚಾರಣೆ ತನಕ ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಗೆ ಮಧ್ಯಂತರ ತಡೆ ನೀಡಿ ಆದೇಶಿಸಿತು.

ಪ್ರಕರಣವೇನು?

ಹೆಬ್ಬಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯ ಜಿ.ಆರ್.ಫಾರ್ಮ್ ಹೌಸ್ ಮೇಲೆ 2024ರ ಮೇ 19ರಂದು ದಾಳಿ ನಡೆಸಿದ್ದ ಪೊಲೀಸರು, ‘ಇಲ್ಲಿ ಬರ್ತ್‌ಡೇ ಪಾರ್ಟಿ ಹೆಸರಿನಲ್ಲಿ ಮದ್ಯ ಹಾಗೂ ಮಾದಕ ದ್ರವ್ಯ ಸೇವಿಸುವ ರೇವ್ ಪಾರ್ಟಿ ನಡೆಯುತ್ತಿರುವುದು ಕಂಡು ಬಂದಿದೆ. ಈ ರೇವ್ ಪಾರ್ಟಿಯಲ್ಲಿ ಹೇಮಾ ಭಾಗಿಯಾಗಿದ್ದರು’ ಎಂದು ಆರೋಪಿಸಿದ್ದರು. ಅಂತೆಯೇ, ಅವರನ್ನು ವಶಕ್ಕೆ ಪಡೆದಿದ್ದರು. ಕೋರ್ಟ್ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತ್ತು. ಏತನ್ಮಧ್ಯೆ ಹೇಮಾ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿದ್ದರು.

ಪ್ರಕರಣದ ತನಿಖೆ ನಡೆಸಿದ್ದ ಪೊಲೀಸರು, ಬೆಂಗಳೂರು ಗ್ರಾಮಾಂತರ, 8ನೇ ಹೆಚ್ಚುವರಿ ಸೆಷನ್ಸ್ ವಿಶೇಷ ನ್ಯಾಯಾಲಯಕ್ಕೆ 1,086 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ‘ರೇವ್ ಪಾರ್ಟಿಯಲ್ಲಿ ನಟಿ ಹೇಮಾ ಸೇರಿದಂತೆ 88 ಜನರು ಭಾಗವಹಿಸಿದ್ದರು. ಇವರಲ್ಲಿ ಹಲವರು ಡ್ರಗ್ಸ್ ಸೇವನೆ ಮಾಡಿದ್ದರು’ ಎಂದು ದೋಷಾರೋಪ ಪಟ್ಟಿಯಲ್ಲಿ ವಿವರಿಸಲಾಗಿತ್ತು.

ಏನಿದು ಸ್ಪಾಂಜ್ ನಗರಗಳು?

ಜನಸಂಖ್ಯೆ ಹೆಚ್ಚಾದಂತೆ ನಗರಗಳು ವಿಸ್ತಾರಗೊಳ್ಳುತ್ತಿವೆ. ಮುಂದಿನ ವರ್ಷಗಳಲ್ಲಿ ಎದುರಾಗುವ ಪ್ರವಾಹದ ಪರಿಸ್ಥಿತಿಯನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಬೇಕಾದರೆ 'ಸ್ಪಾಂಜ್ ನಗರ' ಪರಿಕಲ್ಪನೆಯ ಅಗತ್ಯವಿದೆ

ಗುರುಶಂಕರ್ ಕೆ.ಪಿ.

ಕಳೆದ ಮೂರು ವರ್ಷಗಳಿಂದ ಭಾರತದ ವಿವಿಧ ಪ್ರದೇಶಗಳಲ್ಲಿ ಮಳೆಯ ಪ್ರಮಾಣ ಹೆಚ್ಚಾದ ಕಾರಣದಿಂದ ಹಲವು ಬಗೆಯ ನಷ್ಟಗಳನ್ನು ಎದುರಿಸಬೇಕಾಯಿತು. ನಗರ ಪ್ರದೇಶಗಳಲ್ಲಿ ಈ ಸಮಸ್ಯೆ ಬಿಗಡಾಯಿಸಿತು. ಮುಂದಿನ ದಿನಗಳಲ್ಲಿ ಜಾಗತಿಕ ತಾಪಮಾನ ಮತ್ತು ಹವಾಮಾನ ಬದಲಾವಣೆಗಳಿಂದಾಗಿ ಮಳೆಯ ಪ್ರಮಾಣ ಹೆಚ್ಚಾಗುವ ಸಾಧ್ಯತೆ ಹೆಚ್ಚು. ಇದನ್ನು ಗಮನದಲ್ಲಿಟ್ಟುಕೊಂಡು 'ಸ್ಪಾಂಜ್ ನಗರ' ಅಭಿಯಾನ ಕೈಗೊಳ್ಳುವ ಬಗ್ಗೆ ಚಿಂತಿಸಲಾಗುತ್ತಿದೆ.

ಮಳೆ ನೀರಿನ ತೇವಾಂಶವನ್ನು ಹೀರಿಕೊಳ್ಳುವ ಸಾಮರ್ಥ್ಯವಿರುವ ರಸ್ತೆಗಳನ್ನು ನಿರ್ಮಿಸುವುದು, ತಾರಸಿ ತೋಟ, ಸೂಕ್ತ ರೀತಿಯಲ್ಲಿ ಮಳೆ ನೀರಿನ ಸಂಗ್ರಹ, ನಗರ ಪ್ರದೇಶಗಳಲ್ಲಿ ಉದ್ಯಾನ ನಿರ್ಮಾಣ ಹಾಗೂ ಕೆರೆಗಳನ್ನು ಅಭಿವೃದ್ಧಿಪಡಿಸುವುದು ಸ್ಪಾಂಜ್ ನಗರ ಪರಿಕಲ್ಪನೆಯ ರೂಪುರೇಷೆ.

ಪ್ರಸ್ತುತ ಅವೈಜ್ಞಾನಿಕ ನಗರ ಯೋಜನೆಗಳಿಂದಾಗಿ ಭಾರತದ ಮಹಾನಗರ ಪಾಲಿಕೆಗಳಲ್ಲಿ ಪ್ರವಾಹದ ಪರಿಸ್ಥಿತಿ ಗಣನೀಯವಾಗಿ ಹೆಚ್ಚಳವಾಗಿದ್ದು, ಸಾಕಷ್ಟು ಆಸ್ತಿಪಾಸ್ತಿ ಹಾನಿಗೆ ಒಳಗಾಗಿದೆ. ಪ್ರವಾಹದ ಕಾರಣದಿಂದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ. ವಿಶ್ವ ಹವಾಮಾನ ಸಂಘಟನೆ ಈಗಾಗಲೇ ನಗರ ಪ್ರದೇಶದ ಪ್ರವಾಹ ಪರಿಸ್ಥಿತಿಯನ್ನು ನಿಭಾಯಿಸಲು ಸೂಕ್ತ ಭೂನೀತಿಯನ್ನು ಜಾರಿಗೆ ತರಬೇಕು. ಜತೆಗೆ ಸಾಧ್ಯವಾದಷ್ಟು ಸ್ಪಾಂಜ್ ನಗರಗಳ ಅನುಷ್ಠಾನಕ್ಕೆ ಸರ್ಕಾರಗಳು ಮುಂದಾಗಬೇಕು ಎಂದು ಪ್ರತಿಪಾದಿಸಿದೆ. ನಗರ ಪ್ರದೇಶಗಳಲ್ಲಿ ಸೂಕ್ತ ಒಳ ಚರಂಡಿ ವ್ಯವಸ್ಥೆ ಇಲ್ಲದ ಕಾರಣದಿಂದ ಪ್ರತಿ ವರ್ಷ ಶುದ್ಧ ಮಳೆ ನೀರು ಯಾವುದೇ ರೀತಿಯ ಉಪಯೋಗಕ್ಕೆ ಬಾರದೆ ಪೋಲಾಗುತ್ತಿದೆ. ಅತ್ಯಂತ ಮೌಲ್ಯವರ್ಧಿತ ನೈಸರ್ಗಿಕ ಸಂಪನ್ಮೂಲವನ್ನು ಸೂಕ್ತವಾಗಿ ಬಳಸಿಕೊಳ್ಳಲು ಸಾಧ್ಯವಾಗದ ಕಾರಣದಿಂದ ಸ್ಪಾಂಜ್ ನಗರಗಳ ಅವಶ್ಯಕತೆ ಎದುರಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ಸಾಕಷ್ಟು ಕೆರೆಗಳನ್ನು ಮತ್ತು ಸರೋವರಗಳನ್ನು ಮುಚ್ಚಲಾಗಿದೆ. ನೈಸರ್ಗಿಕವಾಗಿ ಮಳೆ ನೀರು ಸಂಗ್ರಹಗೊಳ್ಳುತ್ತಿದ್ದ ಪ್ರದೇಶಗಳಲ್ಲಿ ಬೃಹದಾಕಾರದ ಕಟ್ಟಡಗಳು ನಿರ್ಮಾಣವಾಗಿದೆ. ಎಲ್ಲಾ ಸರೋವರಗಳನ್ನು ಮತ್ತು ಕೆರೆಗಳನ್ನು ಪುನಶ್ಚೇತನಗೊಳಿಸುವ ಕಾರ್ಯವನ್ನು ಅಗತ್ಯವಾಗಿ ಮಾಡಬೇಕಿದೆ. ಜನಸಂಖ್ಯೆ ಹೆಚ್ಚಾದಂತೆ ನಗರಗಳು ವಿಸ್ತಾರಗೊಳ್ಳುತ್ತಿವೆ. ಮುಂದಿನ ವರ್ಷಗಳಲ್ಲಿ ಬರುವ ಪ್ರವಾಹದ ಪರಿಸ್ಥಿತಿಯನ್ನು ಸರಿಯಾದ ರೀತಿಯಲ್ಲಿ ಎದುರಿಸಬೇಕಾದರೆ 'ಸ್ಪಾಂಜ್ ನಗರ'ಪರಿಕಲ್ಪನೆಯ ಅಗತ್ಯವಿದೆ ಎಂದು ಪರಿಸರತಜ್ಞರು ಪ್ರತಿಪಾದಿಸಿದ್ದಾರೆ. ❖


ಅಭಿಯಾನದ ಉದ್ದೇಶಗಳು

ಸ್ಪಾಂಜ್ ನಗರದ ಅಭಿಯಾನವನ್ನು ಹಮ್ಮಿಕೊಂಡರೆ ನಗರ ಪ್ರದೇಶದ ನೀರಿನ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಿಗಬಹುದು. ಅಂತರರಾಜ್ಯ ನದಿ ನೀರಿನ ವಿವಾದಗಳನ್ನು ಸಾಧ್ಯವಾದಷ್ಟು ಕಡಿಮೆ ಮಾಡಬಹುದು.

ಅಂತರ್ಜಲದ ಮಟ್ಟ ಹೆಚ್ಚಳವಾಗಿ ಸ್ಥಳೀಯ ಜಲ ಸಂಪನ್ಮೂಲಗಳನ್ನೇ ನಗರವಾಸಿಗಳು ಬಳಸಿಕೊಳ್ಳಲು ಸಾಧ್ಯವಾಗುತ್ತದೆ.

ಇಂಗಾಲದ ಡೈಆಕ್ಸೈಡ್ ಹೊರಸುವಿಕೆಯನ್ನು ತಗ್ಗಿಸುತ್ತದೆ. ನೈಸರ್ಗಿಕವಾಗಿ ಹವಾಮಾನ ಬದಲಾವಣೆ ಮತ್ತು ಜಾಗತಿಕ ತಾಪಮಾನದಂತಹ ಸಮಸ್ಯೆಗಳು ತಗ್ಗಬಹುದು.

ಸ್ಪಾಂಜ್ ನಗರಗಳು ಅಭಿವೃದ್ಧಿಯಾದರೆ ವಾಯು ಗುಣಮಟ್ಟ ವೃದ್ಧಿಯಾಗುತ್ತದೆ. ಪರಿಸರ ವ್ಯವಸ್ಥೆಯನ್ನು ಸಂರಕ್ಷಿಸಬಹುದು.



ಬಹುಆಯ್ಕೆಯ ಪ್ರಶ್ನೋತ್ತರಗಳು

1. ಪ್ರಜಾಪ್ರಭುತ್ವಕ್ಕಾಗಿ ಶೃಂಗಸಭೆ ಎನ್ನುವ ಪ್ರಸ್ತಾಪವನ್ನು ಕೆಳಗಿನ ಯಾವ ರಾಷ್ಟ್ರದ ಮುಖ್ಯಸ್ಥರು ನೀಡಿದರು?
ಎ. ಅಮೆರಿಕದ ಅಧ್ಯಕ್ಷರು.
ಬಿ. ಭಾರತದ ಪ್ರಧಾನಮಂತ್ರಿ.
ಸಿ. ಭಾರತದ ರಾಷ್ಟ್ರಪತಿ.
ಡಿ. ಬ್ರಿಟನ್ನಿನ ಪ್ರಧಾನಮಂತ್ರಿ.
ಉತ್ತರ : ಎ

2. ಸ್ಟಾರ್ಟ್ ಅಪ್ ಮಹಾ ಕುಂಭವನ್ನು ಕೆಳಗಿನ ಯಾವ ಸ್ಥಳದಲ್ಲಿ ಆಯೋಜಿಸಲಾಗಿತ್ತು?
ಎ. ದೆಹಲಿಯ ಭಾರತ್ ಮಂಟಪಂ.
ಬಿ. ಕೋಲ್ಕತ್ತದ ಈಡೇನ್ ಗಾರ್ಡನ್ಸ್.
ಸಿ. ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣ.
ಡಿ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ.
ಉತ್ತರ : ಎ

3. ಕ್ಷಯರೋಗಕ್ಕೆ ಸಂಬಂಧಿಸಿದ ಸರಿಯಾದ ಹೇಳಿಕೆಗಳನ್ನು ಗುರುತಿಸಿ?
1. ಪ್ರತಿ ವರ್ಷ ಮಾರ್ಚ್ 24ರಂದು ವಿಶ್ವ ಕ್ಷಯರೋಗ ದಿನಾಚರಣೆಯನ್ನು ಆಚರಿಸಲಾಗುತ್ತದೆ.
2. ಕ್ಷಯರೋಗಕ್ಕೆ ಕಾರಣವಾದ ಬ್ಯಾಕ್ಟೀರಿಯಾವನ್ನು ರಾಬರ್ಟ್ ಕೋಚ್ ಆವಿಷ್ಕರಿಸಿದರು.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.
ಉತ್ತರ : ಸಿ

4. ವಿಶ್ವ ಜಲ ದಿನಾಚರಣೆಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?
1. ವಿಶ್ವ ಜಲ ದಿನಾಚರಣೆಯನ್ನು ಆಚರಿಸಲು 1992ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆ ನಿರ್ಣಯವನ್ನು ಅಂಗೀಕರಿಸಿತು.
2. ಮೊಟ್ಟಮೊದಲ ವಿಶ್ವ ಜಲ ದಿನಾಚರಣೆಯನ್ನು 1993ರಲ್ಲಿ ಪ್ರಾರಂಭಿಸಲಾಯಿತು.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿದೆ.
ಉತ್ತರ : ಸಿ

5. ಸಲಿಂಗ ವಿವಾಹವನ್ನು ಕೆಳಗಿನ ಯಾವ ಏಷ್ಯಾದ ರಾಷ್ಟ್ರಗಳಲ್ಲಿ ಕಾನೂನಾತ್ಮಕಗೊಳಿಸಲಾಗಿದೆ?
1. ನೇಪಾಳ
2. ತೈವಾನ್
3. ಚೀನಾ
4. ವಿಯೆಟ್ನಾಂ
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮತ್ತು 2 ಬಿ. 2 ಮತ್ತು 3
ಸಿ. 3 ಮತ್ತು 4 ಡಿ. 2 ಮಾತ್ರ
ಉತ್ತರ : ಎ

6. ಕೆಳಗಿನ ಯಾವ ವಿಚಾರಕ್ಕೆ ಸಂಬಂಧಿಸಿದಂತೆ ವಿಶ್ವ ಸಂಸ್ಥೆ ಮೊಟ್ಟಮೊದಲ ಜಾಗತಿಕ ನಿರ್ಣಯವನ್ನು ಅಂಗೀಕರಿಸಿದೆ?
ಎ. ಬ್ಲಾಕ್ ಚೈನ್ ತಂತ್ರಜ್ಞಾನ.
ಬಿ. ಕೃತಕ ಬುದ್ಧಿಮತ್ತೆ.
ಸಿ. ಇಂಟರ್‌ನೆಟ್ ಆಫ್ ಥಿಂಗ್ಸ್.
ಡಿ. ರೋಬೋಟಿಕ್ ತಂತ್ರಜ್ಞಾನ.
ಉತ್ತರ : ಬಿ

7. ಕೇಂದ್ರ ಸರ್ಕಾರ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆಯನ್ನು ಕೆಳಗಿನ ಯಾವ ರಾಜ್ಯಗಳಲ್ಲಿ ಆರು ತಿಂಗಳ ಅವಧಿಗೆ ವಿಸ್ತರಿಸಿದೆ?
1. ನಾಗಾಲ್ಯಾಂಡ್.
2. ಅರುಣಾಚಲ ಪ್ರದೇಶ.
3. ಅಸ್ಸಾಂ.
4. ಮೇಘಾಲಯ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮತ್ತು 2 ಬಿ. 3 ಮತ್ತು 4
ಸಿ. 2 ಮತ್ತು 3 ಡಿ. 2 ಮಾತ್ರ
ಉತ್ತರ : ಎ

8. ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆಯನ್ನು ಕೆಳಗಿನ ಯಾವ ಕೇಂದ್ರ ಸರ್ಕಾರದ ಸಚಿವಾಲಯ ವಿಸ್ತರಿಸುವ ಅಧಿಕಾರ ಹೊಂದಿದೆ?
ಎ. ವಿದೇಶಾಂಗ ವ್ಯವಹಾರಗಳ ಸಚಿವಾಲಯ.
ಬಿ. ಆಂತರಿಕ ಭದ್ರತಾ ಸಚಿವಾಲಯ.
ಸಿ. ಸಾರ್ವಜನಿಕ ಭದ್ರತೆ ಸಚಿವಾಲಯ.
ಡಿ. ಗೃಹ ಸಚಿವಾಲಯ.
ಉತ್ತರ : ಡಿ

9. 'ಭಾಷಾ ಅಟ್ಲಾಸ್' ಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?
1. ಭಾಷಾ ಅಟ್ಲಾಸ್ ಸಿದ್ಧಪಡಿಸಲು ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ ಪ್ರಸ್ತಾಪವನ್ನು ಸಲ್ಲಿಸಿದೆ.
2. ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ ಸಮಾಜ ಕಲ್ಯಾಣ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ.
3. ಭಾರತದಲ್ಲಿ ಪ್ರಸ್ತುತ 13 ವಿವಿಧ ಲಿಪಿಗಳು ಅಸ್ತಿತ್ವದಲ್ಲಿದೆ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮತ್ತು 3 ಬಿ. 2 ಮತ್ತು 3
ಸಿ. 1 ಮತ್ತು 2 ಡಿ. 3 ಮಾತ್ರ
ಉತ್ತರ : ಎ

10. ಸಂಗೀತ ಕಲಾನಿಧಿ ಪ್ರಶಸ್ತಿಯನ್ನು ಕೆಳಗಿನ ಯಾವ ಸಂಸ್ಥೆ ನೀಡುತ್ತದೆ?
ಎ. ತಮಿಳುನಾಡು ಮ್ಯೂಸಿಕ್ ಅಕಾಡೆಮಿ.
ಬಿ. ಚೆನ್ನೈ ಮ್ಯೂಸಿಕ್ ಅಕಾಡೆಮಿ.
ಸಿ. ತಿರುವನಂತಪುರಂ ಮ್ಯೂಸಿಕ್ ಅಕಾಡೆಮಿ.
ಡಿ. ಮದ್ರಾಸ್ ಮ್ಯೂಸಿಕ್ ಅಕಾಡೆಮಿ.
ಉತ್ತರ : ಡಿ

11. ಅರಾವಳಿ ಪರ್ವತ ಶ್ರೇಣಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ.
1. ಅರಾವಳಿ ಪರ್ವತ ಶ್ರೇಣಿಯನ್ನು ಮಡಿಕೆ ಪರ್ವತಗಳು ಎಂದು ಪರಿಗಣಿಸಬಹುದು.
2. ಅರಾವಳಿ ಪರ್ವತ ಶ್ರೇಣಿ ಭಾರತದ ನಾಲ್ಕು ರಾಜ್ಯಗಳಲ್ಲಿ ಹಾದು ಹೋಗುತ್ತದೆ.
3. ಅರಾವಳಿ ಪರ್ವತ ಶ್ರೇಣಿಯ ಸರಾಸರಿ ಎತ್ತರ 600 ರಿಂದ 900 ಮೀಟರ್‌ನಷ್ಟು ಎಂದು ಪರಿಗಣಿಸಬಹುದು.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1, 2 ಮತ್ತು 3 ಡಿ. 1 ಮತ್ತು 3
ಉತ್ತರ : ಸಿ

12. ಬಿಲ್ ಬುಡಕಟ್ಟು ಸಮುದಾಯಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?
1. ಬಿಲ್ ಬುಡಕಟ್ಟು ಸಮುದಾಯದವರನ್ನು ದಕ್ಷಿಣ ಏಷ್ಯಾದ ಅತಿದೊಡ್ಡ ಬುಡಕಟ್ಟು ಎಂದು ಪರಿಗಣಿಸಲಾಗುತ್ತದೆ.
2. ಬಿಲ್ ಬುಡಕಟ್ಟು ಸಮುದಾಯದ ಜನರನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಬಹುದಾಗಿದೆ.
3. ಈ ಬುಡಕಟ್ಟಿಗೆ ಬಿಲ್ ಎನ್ನುವ ಪದ, ದ್ರಾವಿಡ ಭಾಷೆಯ ಬಿಲ್ಲು ಎನ್ನುವ ಪದದಿಂದ ಉಗಮವಾಗಿದೆ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮತ್ತು 3 ಬಿ. 2 ಮತ್ತು 3
ಸಿ. 1 ಮತ್ತು 2 ಡಿ. 3 ಮಾತ್ರ
ಉತ್ತರ : ಎ

13. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರದ ಹಂತದಲ್ಲಿ ಜವಾಹರ್ ಲಾಲ್ ನೆಹರೂ ಅವರು ಯಾರ ಸಲಹೆ ಮೇರೆಗೆ ಬುಡಕಟ್ಟು ಪಂಚಶೀಲ ಯೋಜನೆಯನ್ನು ಜಾರಿಗೆ ತಂದರು?
ಎ. ಬ್ರಿಟಿಷ್ ಮಾನವಶಾಸ್ತ್ರಜ್ಞ ವೆರಿಯರ್ ಎಲ್ವಿನ್.
ಬಿ. ಭಾರತೀಯ ಮಾನವಶಾಸ್ತ್ರಜ್ಞ ಎಂ.ಎನ್. ಶ್ರೀನಿವಾಸ್.
ಸಿ. ಯೋಗೇಂದ್ರ ಸಿಂಗ್.
ಡಿ. ಪ್ರೀತಮ್ ಭಡ್ವಾ.
ಉತ್ತರ : ಎ

14. ಕೆಳಗಿನ ಯಾವ ಅಂಶಗಳನ್ನು ಬುಡಕಟ್ಟು ಪಂಚಶೀಲ ಯೋಜನೆಯ ಅಂಶಗಳೆಂದು ಪರಿಗಣಿಸಬಹುದು?
1. ಬುಡಕಟ್ಟು ಸಮುದಾಯಗಳ ಸಾಂಪ್ರದಾಯಿಕ ಕಲೆ ಮತ್ತು ಸಂಸ್ಕೃತಿ ಆಧಾರದ ಮೇಲೆ ಬುಡಕಟ್ಟು ಸಮುದಾಯಗಳನ್ನು ಅಭಿವೃದ್ಧಿಪಡಿಸುವುದು.
2. ಬುಡಕಟ್ಟು ಸಮುದಾಯಗಳ ಭೂಮಿಯ ಮೇಲಿನ ಹಕ್ಕುಗಳನ್ನು ಮತ್ತು ಅರಣ್ಯ ಹಕ್ಕುಗಳನ್ನು ಗೌರವಿಸುವುದು.
3. ಆಡಳಿತಾತ್ಮಕ ಯಂತ್ರವನ್ನು ನಿರ್ವಹಿಸಲು ಬುಡಕಟ್ಟು ಸಮುದಾಯದ ಜನರಿಗೆ ತರಬೇತಿಯನ್ನು ಕಲ್ಪಿಸುವುದು.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. 1, 2 ಮತ್ತು 3
ಉತ್ತರ : ಡಿ

15. ಇತ್ತೀಚೆಗೆ ಚೀನಾದ ಯಾವ ಬಹುರಾಷ್ಟ್ರೀಯ ಕಂಪನಿ ವಿದ್ಯುತ್ ಚಾಲಿತ ವಾಹನ ಮಾರುಕಟ್ಟೆಯನ್ನು ಪ್ರವೇಶಿಸಿದೆ?
ಎ. Xiaomi ಬಹುರಾಷ್ಟ್ರೀಯ ಕಂಪನಿ.
ಬಿ. ವಿವೋ ಬಹುರಾಷ್ಟ್ರೀಯ ಕಂಪನಿ.
ಸಿ. ಒಪ್ಪೋ ಬಹುರಾಷ್ಟ್ರೀಯ ಕಂಪನಿ.
ಡಿ. ಲಿಪಿಂಗ್ ಬಹುರಾಷ್ಟ್ರೀಯ ಕಂಪನಿ.
ಉತ್ತರ : ಎ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

I. Four alternatives are given for each of the following questions/incomplete statements. Only one of them is correct or most appropriate. Choose the correct alternative and write the complete answer along with its letter of alphabet.

1) Choose the appropriate question tag and fill in the blank :
She never comes to school late, ...
(A) doesn't she ? (B) didn't she ?
(C) does she ? (D) did she ?
Ans. :(C) does she ?

2) Read the given convers choose the language function underlined sentence:
Sanjay : Good morning madam, ***Can I go home an hour early today***?
Teacher: Why? What happned?
Sanjay: My Sister is not well. I've to take her to the hospital.
Teacher: Okay, you can go
a) Asking,
b) Asking permission.
c) Making suggestion.
d) Offering help.
Ans: (b) Asking permission.

3) Read the conversation and fill in the blank with correct 'If clause' choosing from the given alternatives :
Vandana : You are still here ! did you miss the bus?
Aishwarya: Yes. by the time I reached the bus stop it was already 7:40 !
Vandana: Oh! if you had started early, you .... missed the bus.
a) would have b) wouldn't have
c) should have d) shouldn't have
Ans:-(b) wouldn't have

4) Read the conversation and choose the correct infinitive :
Meghana : Hi Arati, will you come with me to the market? I want to buy vegetables.
Arati : Sure. Shall we go by bus?
Meghana : No. Let's take an auto.
a) take b) come
c) to buy d) go
Ans:- (c) to buy

II. Do as directed:

5. Fill in the blank with appropriate tense forms of the verbs given in brackets:
Prajwal ……………(be+study) in a government high school.
Ans:- is studying

6. Fill in the blank with appropriate 'preposition':
Raghav is a teacher. He works hard …………the welfare of his students.
Ans:- for

7. Fill in the blank using suitable linker:
…………..he was ill, Kiran completed his work.
Ans:- Though

8. Fill in the blanks choosing the appropriate words given in the brackets:
The ………….. (whether, weather) looked so unpredictable that we did not know ………(weather, whether) to carry the umbrella or not.
Ans:- The **weather** (whether, weather) looked so unpredictable that we did not know **whether** (weather, whether) to carry the umbrella or not.

9. Combine the word in column 'A' with its collective word in column 'B' :

A	B
…………..Street	(road, Park, light, avenue)

Ans:- Park

10. Give one word answer:
A great performer, especially a musician …………
Ans:- Maestro.

11. Which one of the following words has two syllables?
Continent, age, people, direction.
Ans:- people

12. Write the correct form of the word given in the brackets:
There is no ……….(compare) between them.
Ans:- comparison

13. Frame a question to get the underlined word as answer:
Raghu went to Mysore yesterday.
Ans:- When did Raghu go to Mysore?

14. Read the following conversation and change the underlined sentence into passive voice:
Sharath Hello Madhu, what did you buy yesterday?
Madhu : I bought a new dress.
Ans:- A new dress was bought by Madhu. [me]

15. Change the following sentence into comparative degree:
Ravish is the most intelligent boy in the class.
Ans:- Ravish is **more intelligent** than any other boys in the class.

16. Use the word 'conduct' as verb in a sentence of your own.
Ans:- Sureshaji conducted the singing programme in his home.

(Contd……..)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC -BIOLOGY

REVISION : MODEL QUESTIONS

12. Significance of Insertional inactivation method in Recombinant DNA technology is to
a) Introduce the recombinants
b) Isolate gene of Interest
c) Select the recombinants
d) Select the gene of interest
Ans:-(c) Select the recombinants

13. Which of the following organisms are studied by Cornell's in his elegant field experiments to study competition
a) Warbler species
b) Chathamalus and Balanus
c) Cucko and Crow
d) Cattle egret and grazing cattle
Ans:- (b) Chathamalus and Balanus

14. The correct sequence in the process of decomposition is
a) Humification----Leaching----Catabolism----Mineralisation ----Fragmentation
b) Catabolism----Leaching----Fragmentation----Humification---- Mineralisation
c) Leaching----Fragmentation ----Catabolism----Humification---- Mineralisation
d) Fragmentation ----Leaching----Catabolism-----Humification----Mineralisation
Ans:- (d) Fragmentation----Leaching----Catabolism--Humification----Mineralisation

15. Western Ghats have a greater diversity of
a) Amphibians b) Reptiles
c) Aves d) Mammals
Ans:- (a) Amphibians

II. Fill in the blanks by choosing the appropriate word/Words from those given below: (Commensalism, Alveoli, Ammensalism, Panspermia, Codominance, Perisperm)

16. The residual, persistent nucellus is called------
Ans:- **Perisperm**

17. The cells of -----------secrete milk in the mammary glands.
Ans:- **Alveoli,**

18. AB blood group inheritance is an example for -------------
Ans:- **Codominance**

19. --------- is the theory that proposes that units of life called spores were transferred to different planets including earth
Ans:- **Panspermia**

20. A population interaction in which one species is harmed and the other species is unaffected is ---------
Ans:- **Ammensalism**

PART - B

Answer any FIVE of the following questions in 3 – 5 sentences wherever applicable

21. List any four complications a person suffers from untreated sexually transmitted infections?
Ans:- Complications a person suffers from untreated sexually transmitted infections
1) Pelvic pain.
2) Pregnancy complications.
3) Eye inflammation.
4) Arthritis.
5) Pelvic inflammatory disease.
6) Infertility.
7) Heart disease.
8) Certain cancers, such as HPV -associated cervical and rectal cancers.

22. Write about Medical termination of pregnancy act 2017.
Ans:- The Medical Termination of Pregnancy (Amendment) Act, 2017 was enacted by the government of India with the intension of reducing the incidence of illegal abortion and consequent maternal mortality and morbidity. According to this Act, a pregnancy may be terminated on certain considered grounds within the first 12 weeks of pregnancy on the opinion of one registered medical practitioner. If the pregnancy has lasted more than 12 weeks, but fewer than 24 weeks, two registered medical practitioners must be of the opinion, formed in good faith, that the required ground exist.

The grounds for such termination of pregnancies are: (i) The continuation of the pregnancy would involve a risk to the life of the pregnant woman or of grave injury physical or mental health; or (ii) There is a substantial risk to the child if it were born, it would suffer from such physical or mental abnormalities as to be seriously handicapped

23. What's the difference between convergent and divergent evolution?
Ans:- Differences Between Convergent and Divergent Evolution

Convergent evolution shows how species have evolved separately but have similar (analogous) structures. Divergent evolution demonstrates how species can have common (homologous) anatomical structures which have evolved for different purposes.

24. What are primary lymphoid organs? *(Contd)*

ರಿಮ್ಸ್ ಆಸ್ಪತ್ರೆಯಲ್ಲಿ ನವಜಾತ ಶಿಶು, ಬಾಣಂತಿ ಸಾವು

ಪ್ರಜಾವಾಣಿ ವಾರ್ತೆ



ರಾಯಚೂರು: ಇಲ್ಲಿಯ ರಿಮ್ಸ್ ಆಸ್ಪತ್ರೆಯಲ್ಲಿ ಬಾಣಂತಿ ಹಾಗೂ ನವಜಾತ ಶಿಶು ಬುಧವಾರ ಬೆಳಗಿನ ಜಾವ ಮೃತಪಟ್ಟಿದ್ದಾರೆ.

ಶಿವಲಿಂಗಮ್ಮ

ದೇವದುರ್ಗ ತಾಲ್ಲೂಕಿನ ಮಸೀದಾಪುರ ಗ್ರಾಮದ ಶಿವಲಿಂಗಮ್ಮ (21) ಮೃತ ಬಾಣಂತಿ.

‘ಡಿ.27ರಂದು ಶಿವಲಿಂಗಮ್ಮ ಅವರಿಗೆ ಶಸ್ತ್ರಚಿಕಿತ್ಸೆ ಮೂಲಕ ರಿಮ್ಸ್ ಆಸ್ಪತ್ರೆಯಲ್ಲಿ ಹೆರಿಗೆಯಾಗಿತ್ತು. ಹೆರಿಗೆ ಬಳಿಕ ರಕ್ತದೊತ್ತಡ ಹೆಚ್ಚಾಗಿದ್ದರಿಂದ, ನಾಲ್ಕು ದಿನ ಐಸಿಯುನಲ್ಲಿಟ್ಟು ಚಿಕಿತ್ಸೆ ನೀಡಲಾಗಿತ್ತು. ಬುಧವಾರ ಬೆಳಗಿನ ಜಾವ ಶಿಶು, ನಂತರ ತಾಯಿಯೂ ಮೃತಪಟ್ಟಿದ್ದಾರೆ’ ಎಂದು ರಿಮ್ಸ್‌ನ ವೈದ್ಯಕೀಯ ಅಧೀಕ್ಷಕ ಡಾ.ಭಾಸ್ಕರ್ ತಿಳಿಸಿದ್ದಾರೆ.

‘ವೈದ್ಯರ ನಿರ್ಲಕ್ಷ್ಯದಿಂದಲೇ ಶಿವಲಿಂಗಮ್ಮ ಮೃತಪಟ್ಟಿದ್ದಾಳೆ’ ಎಂದು ಮೃತರ ಸಂಬಂಧಿ ಶಾಂತಕುಮಾರ ಆರೋಪಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಗೊ.ರು.ಚನ್ನಬಸಪ್ಪಗೆ ‘ಸಿದ್ಧಗಂಗಾ ಶ್ರೀ’ ಪ್ರಶಸ್ತಿ



ತುಮಕೂರು: ಸಿದ್ಧಗಂಗಾ ಮಠದ ಹಳೆಯ ವಿದ್ಯಾರ್ಥಿಗಳ ಹಾಗೂ ಹಿತೈಷಿಗಳ ಸಂಘ ಕೊಡಮಾಡುವ 2024ನೇ ಸಾಲಿನ ‘ಸಿದ್ಧಗಂಗಾ ಶ್ರೀ’ ಪ್ರಶಸ್ತಿಗೆ ಹಿರಿಯ ವಿದ್ವಾಂಸ ಗೊ.ರು.ಚನ್ನಬಸಪ್ಪ ಆಯ್ಕೆ ಆಗಿದ್ದಾರೆ.

ಪ್ರಶಸ್ತಿಯು ₹1 ಲಕ್ಷ ನಗದು, ಅಭಿನಂದನಾ ಪತ್ರ ಹಾಗೂ ಸ್ಮರಣಿಕೆ ಒಳಗೊಂಡಿದೆ. ಸಿದ್ಧಗಂಗಾ ಮಠದಲ್ಲಿ ಜನವರಿ 21ರಂದು ನಡೆಯುವ ಶಿವಕುಮಾರ ಸ್ವಾಮೀಜಿಯವರ 6ನೇ ವರ್ಷದ ಪುಣ್ಯಸ್ಮರಣೆ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

‘ಮಂಡ್ಯದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದ ಗೊರುಚ ಅವರು ಜಾನಪದ ಹಾಗೂ ಶರಣ ಸಾಹಿತ್ಯಕ್ಕೆ ನೀಡಿದ ಕೊಡುಗೆ ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ’ ಎಂದು ಸಂಘದ ಕಾರ್ಯದರ್ಶಿ ಕೆ.ಎಚ್.ಶಿವರುದ್ರಯ್ಯ ತಿಳಿಸಿದ್ದಾರೆ.

‘ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಎಐಸಿಸಿ ಹೊಣೆ’

ಬೆಳಗಾವಿ: ‘ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ನಿರ್ಧಾರ ಎಐಸಿಸಿಗೆ ಬಿಟ್ಟಿದ್ದು. ನಮ್ಮ ಹಂತದಲ್ಲಿ ಏನೂ ಇಲ್ಲ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ, ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.


ನಗರದಲ್ಲಿ ಮಾಧ್ಯಮದವರಿಗೆ ಬುಧವಾರ ಪ್ರತಿಕ್ರಿಯೆ ನೀಡಿದ ಅವರು, ‘ನಾನು ಕಾರ್ಯಾಧ್ಯಕ್ಷನಿದ್ದೇನೆ. ಒಬ್ಬರೇ ಎರಡು ಹುದ್ದೆಯಲ್ಲಿದ್ದರೆ ಜವಾಬ್ದಾರಿ ನಿರ್ವಹಣೆ ಕಷ್ಟ ಆಗುತ್ತದೆ. ಅಧ್ಯಕ್ಷ ಸ್ಥಾನಕ್ಕೆ ಈಗಿರುವವರನ್ನೇ ಮುಂದುವರಿಸಬೇಕೆ ಅಥವಾ ಹೊಸಬರಿಗೆ ಅವಕಾಶ ನೀಡಬೇಕೆ ಎಂಬುದು ಹೈಕಮಾಂಡ್ ಹಂತದಲ್ಲಿ ಚರ್ಚೆ ಆಗಬೇಕು’ ಎಂದರು.

‘ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರ ಪುತ್ರ ಮೃಣಾಲ್ ಅವರನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಮಾಡುವ ಕುರಿತು ಚರ್ಚೆ ನಡೆದಿಲ್ಲ. ಎಲ್ಲರೂ ಚರ್ಚೆ ಮಾಡಿ, ಒಬ್ಬರ ಹೆಸರನ್ನೇ ಕೊಟ್ಟಿದ್ದೇವೆ. ಕಾರ್ಯಕರ್ತರ ಜತೆಗೆ ನಿರಂತರ ಸಂಪರ್ಕ ಹೊಂದಿರಬೇಕು ಎಂಬುದೊಂದೇ ಮಾನದಂಡ’ ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ಸಿ.ಟಿ.ರವಿ ಹಾಗೂ ಲಕ್ಷ್ಮೀ ಹೆಬ್ಬಾಳಕರ ಅವರ ಪ್ರಕರಣದ ವಿಚಾರವಾಗಿ ಜಿಲ್ಲೆಯ ಯಾವುದೇ ಅಧಿಕಾರಿಯನ್ನು ವರ್ಗಾವಣೆ ಮಾಡುವ ಪ್ರಶ್ನೆಯೇ ಇಲ್ಲ’ ಎಂದೂ ಸಚಿವರು ಇದೇ ವೇಳೆ ಹೇಳಿದರು.

ಕೃಷಿ ಹೊಂಡಕ್ಕೆ ಬಿದ್ದು ತಾಯಿ, ಇಬ್ಬರು ಮಕ್ಕಳು ಸಾವು

ದೇವರಹಿಪ್ಪರಗಿ (ವಿಜಯಪುರ ಜಿಲ್ಲೆ): ತಾಲ್ಲೂಕಿನ ಹರನಾಳ ಗ್ರಾಮದಲ್ಲಿ ಬುಧವಾರ ಕೃಷಿ ಹೊಂಡದಲ್ಲಿ ಕಾಲು ಜಾರಿ ಬಿದ್ದು, ತಾಯಿ ಮತ್ತು ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ.



ಶ್ರವಣ



ಶರತ್



ಗೀತಾ

‘ಗ್ರಾಮದ ರಾಮಪ್ಪ ನಾಯ್ಕೋಡಿ ಎಂಬುವರಿಗೆ ಸೇರಿದ ತೋಟದ ಕೃಷಿ ಹೊಂಡದಲ್ಲಿ ಅವರ ಪುತ್ರಿ ಗೀತಾ ಶ್ರೀಶೈಲ ಬಡಗಿ (28) ಹಾಗೂ ಮೊಮ್ಮಕ್ಕಳಾದ ಶರತ್ (6) ಮತ್ತು ಶ್ರವಣ(4) ನೀರು ತರಲು ಹೋದಾಗ ಈ ದುರ್ಘಟನೆ ನಡೆದಿದೆ’ ಎಂದು ದೇವರಹಿಪ್ಪರಗಿ ಠಾಣೆಯ ಪಿಎಸ್ಐ ಬಸವರಾಜ ತಿಪರಡ್ಡಿ ತಿಳಿಸಿದ್ದಾರೆ.


ಯೋಧ ದಿವಿನ್ ಪಂಚಭೂತಗಳಲ್ಲಿ ಲೀನ

ಮಡಿಕೇರಿ: ಕಾಶ್ಮೀರದಲ್ಲಿ ಈಚೆಗೆ ಅಪಘಾತದಲ್ಲಿ ಮೃತಪಟ್ಟಿದ್ದ ಯೋಧ ಪಿ.ಪಿ. ದಿವಿನ್ ಅವರ ಅಂತ್ಯಕ್ರಿಯೆಯು ಸೇನಾ ಗೌರವ, ಸಾವಿರಾರು ಮಂದಿಯ ಅಶ್ರುತರ್ಪಣ ದೊಂದಿಗೆ ಕೊಡಗು ಜಿಲ್ಲೆಯ ಶನಿವಾರಸಂತೆ ಸಮೀಪದ ಮಾಲಂಬಿ ಗ್ರಾಮದಲ್ಲಿ ಬುಧವಾರ ನಡೆಯಿತು. ಪಕ್ಕದ ಹಾಸನ ಜಿಲ್ಲೆಯ ಕೊಣನೂರು ಸೇರಿದಂತೆ ಸುತ್ತಮುತ್ತಲ ಜಿಲ್ಲೆಗಳಿಂದಲೂ ಬಂದಿದ್ದ ಸಹಸ್ರಾರು ಮಂದಿ ಅಂತಿಮ ದರ್ಶನ ಪಡೆದರು.

ಸೌರಫಲಕ ಅಳವಡಿಕೆಗೆ ಜನರ ನಿರಾಸಕ್ತಿ

ಸೂರ್ಯ ಘರ್: ಐದು ಸಾವಿರ ಮನೆಗಳಲ್ಲಿ ಮಾತ್ರ ಅಳವಡಿಕೆ • 4,407 ಮಂದಿಗಷ್ಟೇ ಸಹಾಯಧನ ಬಿಡುಗಡೆ

• ಖಲೀಲಅಹ್ಮದ ಶೇಖ



ಬೆಂಗಳೂರು: ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆಯಡಿ ಮನೆಯ ಛಾವಣಿ ಮೇಲೆ ಸೌರಫಲಕ ಅಳವಡಿಸಿ ವಿದ್ಯುತ್ ಉತ್ಪಾದಿಸಲು ರಾಜ್ಯದಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ಯೋಜನೆ ಆರಂಭವಾಗಿ ಹತ್ತು ತಿಂಗಳು ಕಳೆದರೂ ಐದು ಸಾವಿರ ಮನೆಗಳಲ್ಲಿ ಮಾತ್ರ ಸೌರ ಫಲಕಗಳ ಅಳವಡಿಕೆ ಯಾಗಿದೆ.

ಸೂರ್ಯ ಘರ್ ಯೋಜನೆಯಡಿ ನೋಂದಣಿಗೆ ಕಾಣಿಸಿದ್ದ ಆಸಕ್ತಿ ಅರ್ಜಿ ಸಲ್ಲಿಕೆಯಲ್ಲಿ ಕ್ಷೀಣಿಸಿತ್ತು. ಸೌರ ಫಲಕಗಳ ಅಳವಡಿಕೆಯ ಸ್ಥಿತಿ ಕುಂಟುತ್ತಾ ಸಾಗಿದೆ. 5.72 ಲಕ್ಷ ಮಂದಿ ನೋಂದಾಯಿಸಿ ಕೊಂಡಿದ್ದರು. ಅವರಲ್ಲಿ 1.72 ಲಕ್ಷ ಮಂದಿಯ ಅರ್ಜಿಗಳು ಆಯ್ಕೆಯಾಗಿದ್ದರೆ, ಸೌರ ಫಲಕಗಳನ್ನು ಅಳವಡಿಸಿದವರು 5,274 ಮಂದಿ ಮಾತ್ರ. ಘಟಕ ಅಳವ ಡಿಸಿದವರಲ್ಲೂ 4,407 ಮಂದಿಗಷ್ಟೇ ಕೇಂದ್ರ ಸರ್ಕಾರದಿಂದ ಸಹಾಯಧನ ಬಿಡುಗಡೆ ಆಗಿದೆ.

ಈ ಯೋಜನೆಯ ಅಡಿಯಲ್ಲಿ ಗ್ರಾಹಕರು ತಮ್ಮ ಮನೆಯ ತಾರಸಿ ಮೇಲೆ ಸೌರ ಫಲಕಗಳನ್ನು ಅಳವಡಿಸಿಕೊಂಡು ವಿದ್ಯುತ್ ಉತ್ಪಾದಿಸಿ ಮನೆ ಬಳಕೆಗೆ ಉಪಯೋ ಗಿಸಿಕೊಳ್ಳ-ಬಹುದು. ವಿದ್ಯುತ್ ಲಭ್ಯತೆ ಹೆಚ್ಚಿದ್ದರೆ ಅದನ್ನು ತಮ್ಮ ವ್ಯಾಪ್ತಿಯ ಎಸ್ಕಾಂಗಳಿಗೆ ಮಾರಾಟ ಮಾಡಬಹುದು. ಒಂದು ಕಿಲೊ ವಾಟ್ ಸಾಮರ್ಥ್ಯದ ಘಟಕದಿಂದ ಪ್ರತಿ ಯೂನಿಟ್‌ಗೆ ₹2.25, ಎರಡು ಕಿಲೋ ವಾಟ್ ಸಾಮರ್ಥ್ಯದ ಘಟಕದ ಪ್ರತಿ ಯೂನಿಟ್‌ಗೆ ₹2.43 ಹಾಗೂ ಮೂರು ಕಿಲೊ ವಾಟ್ ಸಾಮರ್ಥ್ಯ ಘಟಕದ ಪ್ರತಿ ಯೂನಿಟ್‌ಗೆ ₹2.62 ದರ ನಿಗದಿ ಮಾಡಿ ಎಸ್ಕಾಂಗಳು ಖರೀದಿಸುತ್ತವೆ.

ಒಂದು ಕಿಲೋ ವಾಟ್ ಸಾಮರ್ಥ್ಯದ ಘಟಕಕ್ಕೆ ₹30 ಸಾವಿರ, ಎರಡು ಕಿಲೊ ವಾಟ್ ಸಾಮರ್ಥ್ಯದ ಘಟಕ್ಕೆ ₹60 ಸಾವಿರ ಹಾಗೂ ಮೂರು ಕಿಲೋ ವಾಟ್‌ಗಿಂತ ಹೆಚ್ಚು ಸಾಮರ್ಥ್ಯದ ಘಟಕ ಸ್ಥಾಪಿಸಲು ಗರಿಷ್ಠ ₹78 ಸಾವಿರ ಸಹಾಯಧನವನ್ನು ಕೇಂದ್ರ ಸರ್ಕಾರದ ನೀಡಲಿದೆ. ಸಹಾಯಧನ ಹಾಗೂ ಫಲಾನುಭವಿಯ ವಂತಿಗೆ ಆಧಾರದ ಮೇಲೆ ಗ್ರಾಹಕರು ತಮ್ಮ ಮನೆಯ ತಾರಸಿ ಮೇಲೆ ಸೌರ ಫಲಕಗಳನ್ನು ಅಳವಡಿಸಿ ಕೊಳ್ಳಬಹುದು.

‘ರಾಜ್ಯದಲ್ಲಿ ಸುಮಾರು 37 ಲಕ್ಷ ಗೃಹ ಜ್ಯೋತಿ ಸೌಲಭ್ಯ ಪಡೆಯದ ಗ್ರಾಹಕರಿಗೆ ಸೂರ್ಯ ಘರ್ ಯೋಜನೆ ತಲುಪಿಸುವ ಉದ್ದೇಶದಿಂದ ರಾಜ್ಯದ ನೋಡಲ್ ಏಜೆನ್ಸಿಯಾಗಿ ಬೆಸ್ಕಾಂ ಕಾರ್ಯನಿರ್ವಹಿ-ಸುತ್ತಿದೆ. ಸೌರ ಫಲಕಗಳನ್ನು ಅಳವಡಿಸಿ-ಕೊಳ್ಳಲು ಕೇಂದ್ರ ಸರ್ಕಾರ ಸಹಾಯಧನ ಮಾತ್ರ ನೀಡುತ್ತದೆ. ಉಳಿದ ಹಣವನ್ನು ಗ್ರಾಹಕರೇ ಭರಿಸಬೇಕು. ಆದ್ದರಿಂದ, ಸಾರ್ವಜನಿಕರು ಆಸಕ್ತಿ ತೋರುತ್ತಿಲ್ಲ’ ಎಂದು ಬೆಸ್ಕಾಂನ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ಎಸ್ಕಾಂಗಳು	ಒಟ್ಟು ನೋಂದಣಿ ಸಂಖ್ಯೆ	ಸಲ್ಲಿಕೆಯಾದ ಅರ್ಜಿಗಳು	ಮಾರಾಟಗಾರರ ಆಯ್ಕೆ ಮಾಡಿಕೊಂಡವರು	ಸೌರಫಲಕ ಅಳವಡಿಕೆ ಮಾಡಿಕೊಂಡವರು	ಸಹಾಯಧನ ಪಡೆದುಕೊಂಡವರು	ವಿದ್ಯುತ್ ಉತ್ಪಾದನೆ (ಮೆಗಾ ವಾಟ್‌ಗಳಲ್ಲಿ)	ಸಹಾಯಧನ ಬಿಡುಗಡೆ
ಬೆಸ್ಕಾಂ	1,64,135	63,795	5,289	2,433	1,951	10	₹15.48 ಕೋಟಿ
ಹೆಸ್ಕಾಂ	1,53,260	30,791	3,946	900	744	3.06	₹5.46 ಕೋಟಿ
ಸೆಸ್ಕಾಂ	99,363	31,955	2,367	602	513	2.07	₹3.79 ಕೋಟಿ
ಮೆಸ್ಕಾಂ	94,332	38,035	2,400	1,079	995	3.76	₹7.51 ಕೋಟಿ
ಜೆಸ್ಕಾಂ	60,922	7,880	2.640	260	204	1.01	₹1.56 ಕೋಟಿ
ಒಟ್ಟು	5,72,012	1,72,456	16,642	5,274	4,407	20	₹33.82 ಕೋಟಿ

ಮಾಹಿತಿ: (ಫೆಬ್ರವರಿಯಿಂದ ಡಿಸೆಂಬರ್ 30ರವರೆಗೆ)

ಸೂರ್ಯ ಘರ್ ಯೋಜನೆಯಡಿಯಲ್ಲಿ ಸೌರ ಫಲಕಗಳನ್ನು ಅಳವಡಿಸಿಕೊಂಡು ಮೂರು ತಿಂಗಳಾಗಿದೆ. ಕೇಂದ್ರ ಸರ್ಕಾರದಿಂದ ಇದುವರೆಗೂ ಸಹಾಯಧನ ಬಂದಿಲ್ಲ. ₹7.40 ಲಕ್ಷ ವೆಚ್ಚ ಮಾಡಿದ್ದೇನೆ. ಸರ್ಕಾರದಿಂದ ₹1.65 ಲಕ್ಷ ಸಹಾಯಧನ ಬರಬೇಕಾಗಿದೆ

ಎನ್.ವಿ. ರಮೇಶ್, ಚಿಕ್ಕಲ್ಲಸಂದ್ರದ ನಿವಾಸಿ, ಬೆಂಗಳೂರು

‘1.72 ಲಕ್ಷ ಗ್ರಾಹಕರಿಗೂ ಸೌಲಭ್ಯ ವಿಸ್ತರಣೆ’



ಮಹಾಂತೇಶ್

‘ಸೂರ್ಯ ಘರ್ ಯೋಜನೆ ಅಡಿಯಲ್ಲಿ ಇದುವರೆಗೂ 1.72 ಲಕ್ಷ ಗ್ರಾಹಕರು ಅರ್ಜಿ ಸಲ್ಲಿಸಿದ್ದಾರೆ. 2025ರ ಮಾರ್ಚ್ ಒಳಗೆ ಇವರೆಲ್ಲರ ಮನೆಗಳ ಮೇಲೆ ಸೌರ ಫಲಕ ಅಳವಡಿಸುವ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು’ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ್ ಬೀಳಗಿ ‘ಪ್ರಜಾವಾಣಿ’ಗೆ ತಿಳಿಸಿದರು.

ಸುದ್ದಿ 2 ನಿಮಿಷ

ಡಾ.ಉಮೇಶ್ ಅಮಾನತು ರದ್ದತಿಗೆ ಹೈಕೋರ್ಟ್ ನಕಾರ

ಬೆಂಗಳೂರು: ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಐವರು ಬಾಣಂತಿಯರು ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯಲೋಪ ಆರೋಪದಡಿ ರಾಜ್ಯದ ಹೆಚ್ಚುವರಿ ಔಷಧ ನಿಯಂತ್ರಕ ಡಾ.ಎಸ್. ಉಮೇಶ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿರುವ ರಾಜ್ಯ ಸರ್ಕಾರದ ಆದೇಶಕ್ಕೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.

ಸರ್ಕಾರದ ಆದೇಶಕ್ಕೆ ತಡೆ ನೀಡಲು ನಿರಾಕರಿಸಿದ್ದ ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿಯ (ಕೆಎಟಿ) ಮಧ್ಯಂತರ ಆದೇಶ ಪ್ರಶ್ನಿಸಿ ಡಾ.ಎಸ್.ಉಮೇಶ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.



ಅಂತೆಯೇ, ‘ಮೂಲ ಅರ್ಜಿಯನ್ನು ಕೆಎಟಿ ಶೀಘ್ರವೇ ವಿಚಾರಣೆ ನಡೆಸಿ ವಿಲೇವಾರಿ ಮಾಡಬೇಕು’ ಎಂದೂ ನಿರ್ದೇಶಿಸಿದೆ.

‘ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ 2024ರ ನವೆಂಬರ್ 11ರಿಂದ ಡಿಸೆಂಬರ್ 5ರ ಅವಧಿಯಲ್ಲಿ ಐವರು ಬಾಣಂತಿಯರು ಸಾವನ್ನಪ್ಪಿದ್ದಾರೆ. ಮೃತ ಬಾಣಂತಿಯರು ಸೇವಿಸಿದ ಔಷಧಗಳ ಬಗ್ಗೆ ವೈದ್ಯಕೀಯ ತಜ್ಞರ ವಿಶೇಷ ಸಮಿತಿ ಪರೀಕ್ಷೆ ನಡೆಸುತ್ತಿದೆ. ಈ ಬಗ್ಗೆ ಆಳವಾದ ಪರೀಕ್ಷೆಯ ಅಗತ್ಯವಿದೆ’ ಎಂದು ನ್ಯಾಯಪೀಠ ತಿಳಿಸಿದೆ.

‘ಸ್ವತಃ ಮುಖ್ಯಮಂತ್ರಿಗಳೇ ಘಟನಾ ಸ್ಥಳಕ್ಕೆ ಖುದ್ದಾಗಿ ಭೇಟಿ ಪರಿಶೀಲಿಸಿರುವುದು ಪ್ರಶಂಸನೀಯ. ಅಷ್ಟೇ ಅಲ್ಲ, ಮೂಲ ಅರ್ಜಿ ವಿಚಾರಣೆಗೆ ಬಾಕಿ ಇರುವ ಈ ಹಂತದಲ್ಲಿ ಕೆಎಟಿ ನೀಡಿರುವ ಮಧ್ಯಂತರ ಆದೇಶದ ಬಗ್ಗೆ ಹೈಕೋರ್ಟ್ ಮಧ್ಯ ಪ್ರವೇಶಿಸುವುದಿಲ್ಲ. ಹಾಗಾಗಿ, ಈ ಅರ್ಜಿಯನ್ನು ವಜಾಗೊಳಿಸಲಾಗುತ್ತಿದೆ’ ಎಂದು ನ್ಯಾಯಪೀಠ ತಿಳಿಸಿದೆ.

ಸಂಪುಟ ಪುನರ್‌ರಚನೆ ಮತ್ತೆ ಮುನ್ನೆಲೆಗೆ

ಬೆಂಗಳೂರು: ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆ ಮುಗಿದ ಬೆನ್ನಲ್ಲೇ ಮುನ್ನೆಲೆಗೆ ಬಂದಿದ್ದ ಸಂಪುಟ ಪುನರ್‌ರಚನೆ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಚಾರ, ನಂತರ ಸ್ವಲ್ಪ ದಿನಗಳು ತಣ್ಣಗಾಗಿದ್ದವು. ಈಗ ಮತ್ತೆ ಚರ್ಚೆಗಳು ಆರಂಭವಾಗಿವೆ.

ಹೊಸ ವರ್ಷದ ಮೊದಲ ದಿನ ವಿಧಾನಸೌಧದಲ್ಲಿ ಅಧಿಕಾರಿಗಳ ಸಭೆ ನಡೆಸಿದ ನಂತರ ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಪಕ್ಷದ ನಾಯಕರು, ಹೈಕಮಾಂಡ್ ಜತೆ ಚರ್ಚಿಸಿದ ನಂತರ ಮುಂದಿನ ದಿನಗಳಲ್ಲಿ ಸಂಪುಟ ಪುನರ್‌ರಚನೆ ಮಾಡಲಾಗುವುದು ಎಂದರು.

ಬೆಳಗಾವಿ ಕಾಂಗ್ರೆಸ್ ಸಮಾವೇಶದ ಶತಮಾನೋತ್ಸವಕ್ಕೆ ಆಹ್ವಾನ ನೀಡಲು ಕಳೆದ ತಿಂಗಳು ದೆಹಲಿಗೆ ತೆರಳಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದ ಬಳಿಕ ‘ಸಚಿವ ಸಂಪುಟ ಪುನರ್ ರಚನೆ ಸದ್ಯಕ್ಕಿಲ್ಲ’ ಎಂದು ಸ್ಪಷ್ಟಪಡಿಸಿದ್ದರು.

‘ಸಂಪುಟ ಪುನರ್ ರಚನೆ ಕುರಿತು ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಚರ್ಚೆ ಮಾಡಿಲ್ಲ. ನಾಗೇಂದ್ರ ಅವರು ಸಂಪುಟಕ್ಕೆ ಸೇರ್ಪಡೆ ಆಗಲಿದ್ದಾರೆ. ಆದರೆ, ಈಗಲೇ ಅಲ್ಲ’ ಎಂದು ಸಿದ್ದರಾಮಯ್ಯ ಹೇಳಿದ್ದರು.

ಭಿನ್ನಮತಕ್ಕೆ ಮದ್ದು: ವರಿಷ್ಠರಿಗೆ ಬಿ.ವೈ. ವಿಜಯೇಂದ್ರ ಮೊರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಬುಧವಾರ ಇಲ್ಲಿ ಭೇಟಿ ಮಾಡಿ ಸಮಾಲೋಚನೆ ನಡೆಸಿದರು. ರಾಜ್ಯದಲ್ಲಿ ಭಿನ್ನಮತೀಯ ನಾಯಕರು ನಡೆಸುತ್ತಿರುವ ಚಟುವಟಿಕೆಗಳಿಗೆ ಕಡಿವಾಣ ಹಾಕುವಂತೆ ಶಾ ಅವರಲ್ಲಿ ವಿಜಯೇಂದ್ರ ಮನವಿ ಮಾಡಿದರು.

ರಾಜ್ಯ ಘಟಕ ಅಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಬದಲಾವಣೆ ಮಾಡಬೇಕು ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣ ಪಟ್ಟು ಹಿಡಿದಿದೆ. ಪಕ್ಷದ ನಾಯಕ ಬಿ.ಎಸ್. ಯಡಿಯೂರಪ್ಪ ಹಾಗೂ ವಿಜಯೇಂದ್ರ ವಿರುದ್ಧ ಯತ್ನಾಳ ಆಗಾಗ ಟೀಕಾಪ್ರಹಾರ ನಡೆಸುತ್ತಿದ್ದಾರೆ. ಯತ್ನಾಳ ಅವರಿಗೆ ನೋಟಿಸ್ ನೀಡಿದ್ದ ಪಕ್ಷದ ವರಿಷ್ಠರು ಬಹಿರಂಗ ಹೇಳಿಕೆ ನೀಡದಂತೆ ತಾಕೀತು ಮಾಡಿದ್ದರು. ನಾಲ್ಕು ದಿನಗಳ ಕಾಲ ಯತ್ನಾಳ ಮೌನವಾಗಿದ್ದರು. ಆ ನಂತರ, ರಾಜ್ಯ ಘಟಕದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದರು. ವಕ್ಫ್ ಎರಡನೇ ಸುತ್ತಿನ ಹೋರಾಟಕ್ಕೆ ಯತ್ನಾಳ ಬಣ ಸಜ್ಜಾಗಿದೆ. ಸತ್ಯಶೋಧನಾ ಸಮಿತಿಗಳಲ್ಲಿ ಭಿನ್ನಮತೀಯ ನಾಯಕರನ್ನು ದೂರ ಇಟ್ಟಿರುವ ಬಗ್ಗೆಯೂ ಪಕ್ಷದೊಳಗೆ ಅಸಮಾಧಾನ ವ್ಯಕ್ತವಾಗಿದೆ.



ಅಮಿತ್ ಶಾ ಅವರಿಗೆ ಬಿ.ವೈ. ವಿಜಯೇಂದ್ರ ವಚನ ಪುಸ್ತಕ ನೀಡಿದರು

ಯತ್ನಾಳ, ರಮೇಶ ಜಾರಕಿಹೊಳಿ ಮತ್ತಿತರ ನಾಯಕರು ನಡೆಸುತ್ತಿರುವ ಚಟುವಟಿಕೆಗಳ ಬಗ್ಗೆ ಶಾ ಅವರ ಗಮನಕ್ಕೆ ತಂದ ವಿಜಯೇಂದ್ರ, ‘ಇದರಿಂದ ಪಕ್ಷ ಸಂಘಟನೆಗೆ ಹಿನ್ನಡೆಯಾಗಿದೆ. ರಾಜ್ಯ ಸರ್ಕಾರದ ವಿರುದ್ಧದ ಹೋರಾಟಗಳಲ್ಲೂ ಈ ನಾಯಕರು ಕೈಜೋಡಿಸುತ್ತಿಲ್ಲ. ವರಿಷ್ಠರು ಕೂಡಲೇ ಮಧ್ಯಪ್ರವೇಶಿಸಿ ಇದಕ್ಕೆ ಕಡಿವಾಣ ಹಾಕಬೇಕು. ಭಿನ್ನಮತೀಯ ನಾಯಕರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಆಡಳಿತದ ಪರಿಣಾಮವಾಗಿ ಉದ್ಭವಿಸಿರುವ ಅನೇಕ ಸಮಸ್ಯೆಗಳು, ಕಾಂಗ್ರೆಸ್ ಸಚಿವರ ವಿರುದ್ಧದ ಆರೋಪಗಳ ಕುರಿತು ಹಾಗೂ ಮುಂದಿನ ದಿನಗಳಲ್ಲಿ ಸಂಘಟನೆಯನ್ನು ಮತ್ತಷ್ಟು ಬಲಪಡಿಸಲು ಯೋಜಿಸಿರುವ ಕಾರ್ಯ-ಕ್ರಮಗಳ ಕುರಿತು ವಿವರಿಸಲಾಯಿತು’ ಎಂದು ವಿಜಯೇಂದ್ರ ತಿಳಿಸಿದರು.

ಪೋಸ್ಟರ್ ಅಂಟಿಸಿ ನಗರದ ಸೌಂದರ್ಯಕ್ಕೆ ಧಕ್ಕೆ ತಂದ ಆರೋಪ

ಛಲವಾದಿ, ಸಿ.ಟಿ.ರವಿ ವಿರುದ್ಧ ಎಫ್‌ಐಆರ್


ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ಪೋಸ್ಟರ್ ಅಂಟಿಸಿ ನಗರದ ಸೌಂದರ್ಯಕ್ಕೆ ಧಕ್ಕೆ ತಂದ ಆರೋಪದಡಿ ಬಿಜೆಪಿಯ 13 ಮುಖಂಡರ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ ಸದಸ್ಯರಾದ ಸಿ.ಟಿ.ರವಿ, ಎನ್.ರವಿಕುಮಾರ್, ಮುಖಂಡರಾದ ಉಮೇಶ್ ಶೆಟ್ಟಿ, ಶಿವಕುಮಾರ್, ಹರ್ಷ ಹೆಗ್ಡೆ, ವೆಂಕಟ್, ಕರುಣಾಕರ್, ನಾಗೇಶ್, ಪ್ರಶಾಂತ್, ಯದುವೀರ್, ರಾಜೇಂದ್ರ ಮೂರ್ತಿ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಪಿಎಸ್‌ಐ ಶಶಿಧರ್ ವಣ್ಣೂರು ಅವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

‘ರೇಸ್‌ಕೋರ್ಸ್ ರಸ್ತೆಯ ಮಾಧವ ನಗರ ಜಂಕ್ಷನ್‌ನಲ್ಲಿ ಮಂಗಳವಾರ ಛಲವಾದಿ ನಾರಾಯಣ ಸ್ವಾಮಿ ಅವರ ನೇತೃತ್ವದಲ್ಲಿ 10ರಿಂದ 12 ಮಂದಿ ಗುಂಪುಗೂಡಿಕೊಂಡು, ಸಾರ್ವಜನಿಕರ ಸಂಚಾರಕ್ಕೆ ಅಡ್ಡಿಯಾಗುವಂತೆ ಜಮಾವಣೆ ಗೊಂಡಿದ್ದರು. ಅಲ್ಲದೇ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡಿ ಎಂದು ಆಗ್ರಹಿಸುತ್ತಾ, ‘ಸೂಸೈಡ್, ಸುಪಾರಿ ಭಾಗ್ಯ ನೀಡಿದ ಸರ್ಕಾರಕ್ಕೆ ಧಿಕ್ಕಾರ’ ಎಂಬ ಪೋಸ್ಟರ್ ಗಳನ್ನು ನಗರದ ಸೌಂದರ್ಯಕ್ಕೆ ಧಕ್ಕೆ ಆಗುವಂತೆ ಅಂಟಿಸಿರುವುದು ಕಂಡುಬಂದಿತ್ತು. ಸ್ಥಳದಲ್ಲಿದ್ದ ಮುಖಂಡರಿಗೆ ಪೋಸ್ಟರ್ ಅಂಟಿಸದಂತೆ ತಿಳಿವಳಿಕೆ ನೀಡಲಾಗಿತ್ತು. ಆದರೂ ಅವರು ಪೋಸ್ಟರ್ ಅಂಟಿಸುವ ಕೆಲಸ ಮುಂದುವರಿಸಿದ್ದರು.



ನಾರಾಯಣಸ್ವಾಮಿ



ಸಿ.ಟಿ.ರವಿ



ರವಿಕುಮಾರ್

ತಕ್ಷಣವೇ ಅವರನ್ನು ವಶಕ್ಕೆ ಪಡೆದುಕೊಳ್ಳಲಾಯಿತು. ಸಾರ್ವಜನಿಕ ಸ್ವತ್ತಿಗೆ ಹಾನಿ ಮಾಡುವ ಉದ್ದೇಶದಿಂದ ಪೋಸ್ಟರ್ ಅಂಟಿಸಲಾಗಿದ್ದು, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಕೋರಿ ದೂರು ನೀಡಲಾಗಿದೆ. ಆ ದೂರು ಆಧರಿಸಿ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಹೆಬ್ಬಾಳಕರ ದೂರು ನೀಡಿಲ್ಲ: ಹೊರಟ್ಟಿ



ಹುಬ್ಬಳ್ಳಿ: ‘ವಿಧಾನ ಪರಿಷತ್‌ನಲ್ಲಿ ಸಿ.ಟಿ.ರವಿ ತಮ್ಮ ವಿರುದ್ಧ ಆಕ್ಷೇಪಾರ್ಹ ಪದ ಬಳಸಿದ್ದಾರೆಂದು ಆರೋಪಿಸಿರುವ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಈವರೆಗೆ ಯಾವುದೇ ದೂರು ಅಥವಾ ಸಾಕ್ಷ್ಯಾಧಾರ ನನಗೆ ನೀಡಿಲ್ಲ. ದೂರು ನೀಡಿದರೆ ಮುಂದಿನ ಕ್ರಮ ಕೈಗೊಳ್ಳುವೆ’ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ನಗರದಲ್ಲಿ ಬುಧವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕೆಲ ದೃಶ್ಯ ಮಾಧ್ಯಮಗಳಲ್ಲಿ ವಿಡಿಯೊ ಪ್ರಸಾರ ಆಗಿದೆ ಎನ್ನಲಾಗಿದೆ. ಈ ವಿಡಿಯೊ ನನಗೆ ಸಿಕ್ಕಿಲ್ಲ. ವಿಡಿಯೊ ಅಥವಾ ಆಡಿಯೊ ಸಾಕ್ಷ್ಯಗಳನ್ನು ನಮಗೆ ನೀಡಿದರೆ ಅವುಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ಅವುಗಳ ನೈಜತೆ ಪರಿಶೀಲಿಸಲಾಗುವುದು. ಪ್ರಯೋಗಾಲಯದ ವರದಿ ಆಧಾರದ ಮೇಲೆ ಪ್ರಕರಣವನ್ನು ಎಥಿಕ್ಸ್ ಸಮಿತಿಗೆ ನೀಡಬೇಕೇ, ಬೇಡವೇ ಎಂಬುದನ್ನು ತೀರ್ಮಾನಿಸುವೆ. ನನ್ನ ಮೇಲೆ ಬಿಜೆಪಿ ಅಥವಾ ಕಾಂಗ್ರೆಸ್‌ನ ಒತ್ತಡ ಇಲ್ಲ. ನಾನು ಯಾರ ಮಾತೂ ಕೇಳಲ್ಲ’ ಎಂದರು.


‘ಘಟನೆ ನಡೆದ ವೇಳೆ ನಾನು ಸದನದಲ್ಲಿರಲಿಲ್ಲ. ಸಿ.ಟಿ. ರವಿ ತಮ್ಮ ವಿರುದ್ಧ ಆಕ್ಷೇಪಾರ್ಹ ಪದ ಬಳಸಿದ್ದಾರೆ ಎಂದು ಲಕ್ಷ್ಮೀ ಹೆಬ್ಬಾಳಕರ ಘಟನೆಯ ವಿವರವನ್ನು ನನಗೆ ನೀಡಿದರು. ಕಲಾಪ ಮುಂದೂಡಿದ್ದರಿಂದ ಆಡಿಯೊ–ವಿಡಿಯೊ ರೆಕಾರ್ಡಿಂಗ್ ಸ್ಥಗಿತ ಆಗಿದ್ದವು. ಹೀಗಾಗಿ ಈ ಘಟನೆಗೆ ನಮ್ಮಲ್ಲಿ ಯಾವುದೇ ಸಾಕ್ಷಿಗಳಿಲ್ಲ’ ಎಂದರು.

ಪಂಚನಾಮೆಗೆ ಅವಕಾಶ ಇಲ್ಲ: ‘ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಲಕ್ಷ್ಮೀ ಮತ್ತು ಸಿ.ಟಿ.ರವಿ ಪರಸ್ಪರ ದೂರು ದಾಖಲಿಸಿದ್ದಾರೆ. ಪ್ರಕರಣವನ್ನು ಸರ್ಕಾರವು ಸಿಐಡಿಗೆ ನೀಡಿದೆ. ಸ್ಥಳದ ಪಂಚನಾಮೆ ನಡೆಸಲು ಸಿಐಡಿ ಅಧಿಕಾರಗಳು ನನ್ನ ಅನುಮತಿ ಕೇಳಿದ್ದಾರೆ. ಯಾವ ರೀತಿ ಪಂಚನಾಮೆ ನಡೆಸುತ್ತಾರೆ ಎನ್ನುವ ಬಗ್ಗೆ ವಿವರಿಸಬೇಕು. ನಾನು ಈವರೆಗೆ ಅನುಮತಿ ನೀಡಿಲ್ಲ’ ಎಂದರು.

‘ಲಕ್ಷ್ಮೀ ಮತ್ತು ಸಿ.ಟಿ. ರವಿ ಒಪ್ಪಿದರೆ ಇಬ್ಬರನ್ನೂ ಕರೆಸಿ ಮಾತನಾಡಿ, ಪ್ರಕರಣ ಕೊನೆಗಾಣಿಸಲು ಪ್ರಯತ್ನಿಸುವೆ’ ಎಂದರು.

ನಿಧನ ವಾರ್ತೆ

ಮಂಜುನಾಥ ಅಡಿಗ



ಕುಂದಾಪುರ (ಉಡುಪಿ): ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ಪ್ರಧಾನ ತಂತ್ರಿ ಹಾಗೂ ಅರ್ಚಕರಾ-ಗಿದ್ದ ಕೆ.ಮಂಜುನಾಥ ಅಡಿಗ (64) ಬುಧವಾರ ಕೊಲ್ಲೂರಿನ ಸ್ವಗೃಹದಲ್ಲಿ ನಿಧನರಾದರು. ಅವರಿಗೆ ಪ್ರಸ್ತುತ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದ ಪ್ರಧಾನ ತಂತ್ರಿ ಹಾಗೂ ಅರ್ಚಕರಾಗಿರುವ ಪುತ್ರ ಕೆ.ನಿತ್ಯಾನಂದ ಅಡಿಗ, ಪತ್ನಿ ಮಂಗಳಮ್ಮ ಹಾಗೂ ಪುತ್ರಿ ಇದ್ದಾರೆ. ಸಂಜೆ ಕೊಲ್ಲೂರಿನ ಹಿಂದೂ ರುದ್ರಭೂಮಿ ಯಲ್ಲಿ ಪಾರ್ಥಿವ ಶರೀರದ ಅಂತ್ಯಕ್ರಿಯೆ ನಡೆಯಿತು.

ಕ್ಯಾನ್ಸರ್‌ನಿಂದ ಶಿವರಾಜ್‌ಕುಮಾರ್ ಗುಣಮುಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಶಿವರಾಜ್‌ಕುಮಾರ್ ಕ್ಯಾನ್ಸರ್‌ನಿಂದ ಸಂಪೂರ್ಣ ಗುಣಮುಖರಾಗಿದ್ದಾರೆ. ಮಾರ್ಚ್‌ನಿಂದ ಮತ್ತೆ ಸಿನಿಮಾ ಶೂಟಿಂಗ್‌ನಲ್ಲಿ ಭಾಗವಹಿಸುವುದಾಗಿ ಅವರು ತಿಳಿಸಿದ್ದಾರೆ.

ಮೂತ್ರಕೋಶದ ಕ್ಯಾನ್ಸರ್ ಚಿಕಿತ್ಸೆಗಾಗಿ ಶಿವರಾಜ್‌ಕುಮಾರ್ ಅಮೆರಿಕಕ್ಕೆ ತೆರಳಿದ್ದು, ಡಿ.24ರಂದು ಮಯಾಮಿ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್‌ನಲ್ಲಿ ಅವರು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಶಸ್ತ್ರ ಚಿಕಿತ್ಸೆ ಯಶಸ್ವಿಯಾಗಿದೆ ಎಂದು ಡಿ.25ರಂದು ಅವರ ಪತ್ನಿ ಗೀತಾ ಶಿವರಾಜ್‌ಕುಮಾರ್ ಹೇಳಿದ್ದರು. ಜ.1ರಂದು ಶಿವರಾಜ್‌ಕುಮಾರ್ ಸಮ್ಮುಖದಲ್ಲಿ ವಿಡಿಯೊ ಮುಖಾಂತರ ಗೀತಾ ಶಿವರಾಜ್‌ಕುಮಾರ್ ಮಾತನಾಡಿ, ‘ಅಭಿಮಾನಿಗಳ ಪ್ರಾರ್ಥನೆಯಿಂದ ಎಲ್ಲ ವರದಿಗಳು ನೆಗೆಟಿವ್ ಬಂದಿದೆ. ಪೆಥಾಲಜಿ ವರದಿಯೂ ಬಂದಿದ್ದು, ಅದರಲ್ಲೂ ನೆಗೆಟಿವ್ ಬಂದಿದೆ. ಈ ಮೂಲಕ ಶಿವರಾಜ್‌ಕುಮಾರ್ ಅವರಿಗೆ ಕ್ಯಾನ್ಸರ್ ಇಲ್ಲ ಎಂದು ಅಧಿಕೃತವಾಗಿ ವೈದ್ಯರು ಹೇಳಿದ್ದಾರೆ’ ಎಂದರು.

ಶಿವರಾಜ್‌ಕುಮಾರ್ ಮಾತನಾಡಿ, ‘ಶಸ್ತ್ರ ಚಿಕಿತ್ಸೆಗೂ ಮುನ್ನ ಭಯ ಎಲ್ಲರಿಗೂ ಇರುತ್ತದೆ. ಈ ಭಯವನ್ನು ನೀಗಿಸಲು ಅಭಿಮಾನಿಗಳು, ಸಹ ಕಲಾವಿದರು, ಕುಟುಂಬದವರು, ಸ್ನೇಹಿತರು ಇರುತ್ತಾರೆ. ಬೆಂಗಳೂರಿನಲ್ಲಿದ್ದಾಗ ನನ್ನ ಆರೋಗ್ಯವನ್ನು ನೋಡಿಕೊಂಡ ವೈದ್ಯಕೀಯ ಸಿಬ್ಬಂದಿ ಧೈರ್ಯ ನೀಡಿದರು.



ಆ ಧೈರ್ಯದಲ್ಲೇ ಶೂಟಿಂಗ್ ಮಾಡಿದ್ದೆ. ಅದು ಯಾವ ಜೋಶ್‌ನಲ್ಲಿ ಚಿತ್ರೀಕರಣದಲ್ಲಿ ಭಾಗವಹಿಸಿದೆನೋ ಗೊತ್ತಿಲ್ಲ. ಕೀಮೊ ಮಾಡಿಸುತ್ತಿರುವಾಗಲೇ ‘45’ ಸಿನಿಮಾದ ಕ್ಲೈಮ್ಯಾಕ್ಸ್ ಸಾಹಸ ದೃಶ್ಯಗಳನ್ನು ಮಾಡಿದೆ. ಶಸ್ತ್ರಚಿಕಿತ್ಸೆಗೆ ಹೊರಡುವ ಸಂದರ್ಭದಲ್ಲಿ ಆತಂಕ ಜಾಸ್ತಿಯಾಗಿತ್ತು. ಎಲ್ಲರೂ ಧೈರ್ಯ ತುಂಬಿದರು. ಗೀತಾ ಇಲ್ಲದೆ ಶಿವಣ್ಣ ಇಲ್ಲವೇ ಇಲ್ಲ. ಗೀತಾ, ಮಕ್ಕಳು, ಮಧು ಬಂಗಾರಪ್ಪ, ವೈದ್ಯರಾದ ಮನೋಹರನ್ ಎಲ್ಲರೂ ಚೆನ್ನಾಗಿ ನೋಡಿಕೊಂಡರು. ನನಗೆ ಕಿಡ್ನಿ ಕಸಿ ಮಾಡಿಲ್ಲ, ಮೂತ್ರಕೋಶವನ್ನು ತೆಗೆದು ಹೊಸ ಮೂತ್ರಕೋಶ ಹಾಕಿದ್ದಾರೆ. ಜನರ ಆಶೀರ್ವಾದವನ್ನು ಜೀವನದಲ್ಲಿ ಯಾವತ್ತೂ ಮರೆಯುವುದಿಲ್ಲ. ಒಂದು ತಿಂಗಳು ಪೂರ್ಣ ವಿಶ್ರಾಂತಿಗೆ ವೈದ್ಯರು ಸೂಚಿಸಿದ್ದಾರೆ. ಮಾರ್ಚ್‌ನಿಂದ ಮತ್ತೆ ನಿರಂತರವಾಗಿ ಚಿತ್ರೀಕರಣದಲ್ಲಿ ತೊಡಗಿಸಿಕೊಳ್ಳುತ್ತೇನೆ. ದುಪ್ಪಟ್ಟು ಶಕ್ತಿಯೊಂದಿಗೆ ಡಾನ್ಸ್, ಫೈಟ್ಸ್ ಮೂಲಕ ಮರಳುತ್ತೇನೆ’ಎಂದಿದ್ದಾರೆಶಿವರಾಜ್‌ಕುಮಾರ್.



ಭಕ್ತರ ದಂಡು

ಆಂಧ್ರಪ್ರದೇಶದ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ಹೊಸ ವರ್ಷದ ಪ್ರಯುಕ್ತ ಸಾವಿರಾರು ಭಕ್ತರು ಬುಧವಾರ ಆಗಮಿಸಿದ್ದರು

ರಾಜ್ಯ ಸರ್ಕಾರದ ವಿರುದ್ಧ ಹೋರಾಟ ತೀವ್ರಗೊಳಿಸಲು ಸಿದ್ಧತೆ

ಪ್ರಿಯಾಂಕ್ ರಾಜೀನಾಮೆಗೆ ಬಿಜೆಪಿ ಪಟ್ಟು ಬಿಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆ ಮತ್ತು ಬಾಣಂತಿಯರ ಸಾವಿನ ಪ್ರಕರಣಗಳು ರಾಜ್ಯ ಸರ್ಕಾರದ ವಿರುದ್ಧದ ಹೋರಾಟಕ್ಕೆ ಹೊಸ ಅಸ್ತ್ರಗಳನ್ನು ಒದಗಿಸಿವೆ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಹಂತಹಂತದ ಪ್ರತಿಭಟನೆ ನಡೆಸಲು ಬಿಜೆಪಿ ಸಿದ್ಧತೆ ನಡೆಸಿದೆ.

ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಅವರ ಆಪ್ತರ ಹೆಸರು ಇರುವ ಸಚಿನ್ ಪಾಂಚಾಳ ಅವರ ಮರಣ ಪತ್ರ ಅಸಲಿ ಎಂದು ವಿಧಿವಿಜ್ಞಾನ ಪರೀಕ್ಷೆಯಲ್ಲಿ ದೃಢಪಟ್ಟಿರುವುದನ್ನು ಆಧರಿಸಿ ಪ್ರಿಯಾಂಕ್ ರಾಜೀನಾಮೆಗೆ ಪಟ್ಟು ಬಿಗಿಗೊಳಿಸಲು ರಾಜ್ಯ ಬಿಜೆಪಿ ನಾಯಕರು ಮುಂದಾಗಿದ್ದಾರೆ.

‘ಸುಪಾರಿ ಕೊಟ್ಟು ಕೊಲೆ ಮಾಡಿಸುವ ಸಚಿವರೂ ಈ ಸರ್ಕಾರದಲ್ಲಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ತಮ್ಮ ಮಗನಿಗೆ ಬುದ್ಧಿ ಹೇಳಬೇಕು. ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡಿಸಬೇಕು’ ಎಂದು ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ ಆಗ್ರಹಿಸಿದರು.

ವಿಧಾನ ಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ‘ದಾಖಲೆ ಇಲ್ಲದ್ದರಿಂದ ಪ್ರಿಯಾಂಕ್ ಅವರನ್ನು ಸಂಪುಟದಿಂದ ಕೈಬಿಡುವ ಪ್ರಶ್ನೆ ಇಲ್ಲ ಎಂದು ಸಿ.ಎಂ ಹೇಳಿದ್ದಾರೆ. ವಾಲ್ಮೀಕಿ ನಿಗಮದ ಪ್ರಕರಣದಲ್ಲಿ ಬಿ.ನಾಗೇಂದ್ರ ಅವರ ರಾಜೀನಾಮೆ ಪಡೆದಿದ್ದೀರಿ, ಈಗ ಪ್ರಿಯಾಂಕ್ ರಾಜೀನಾಮೆ ಏಕೆ ಪಡೆಯುತ್ತಿಲ್ಲ?’ ಎಂದು ಪ್ರಶ್ನಿಸಿದರು.

ಬಟ್ಟೆ ಹರಿದುಕೊಂಡರೂ ರಾಜೀನಾಮೆ ನೀಡುವುದಿಲ್ಲ ಎಂದು ಪ್ರಿಯಾಂಕ್ ಹೇಳಿದ್ದಾರೆ. ನಾವು ಬಟ್ಟೆ ಹರಿದುಕೊಳ್ಳುವುದಿಲ್ಲ, ಅವರ ರಾಜೀನಾಮೆ ಕೊಡಿಸುತ್ತೇವೆ

ಪಿ.ರಾಜೀವ

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ

‘ಈ ಸಂಬಂಧ ರಾಜ್ಯದಾದ್ಯಂತ ರಾಜೀನಾಮೆ ಕೊಡಿಸುವವರೆಗೂ ಹೋರಾಟ ನಡೆಸುತ್ತೇವೆ’ ಎಂದರು.

ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಮಾತನಾಡಿ, ‘ಗುತ್ತಿಗೆದಾರ ಆತ್ಮಹತ್ಯೆ ಮಾಡಿಕೊಂಡಿದ್ದಕ್ಕೆ ಈಶ್ವರಪ್ಪ ಅವರೇ ಕಾರಣ ಎಂದು ಅವರ ರಾಜೀನಾಮೆಗೆ ಪ್ರಿಯಾಂಕ್ ಆಗ್ರಹಿಸಿದ್ದರು. ಈಶ್ವರಪ್ಪಗೆ ಅನ್ವಯವಾಗುವ ನೀತಿ ಪ್ರಿಯಾಂಕ್ ಅವರಿಗೆ ಆಗುವುದಿಲ್ಲವೇ’ ಎಂದು ಪ್ರಶ್ನಿಸಿದರು.

‘ಅಸ್ತಿತ್ವ ಉಳಿಸಿಕೊಳ್ಳಲು ಬಿಜೆಪಿಗೆ ನನ್ನ ಹೆಸರು ಅನಿವಾರ್ಯ’



ಪ್ರಿಯಾಂಕ್

‘ಬಿಜೆಪಿ ಒಳಗೆ ಈಗ ವಿಜೆಪಿ/ ವೈಜೆಪಿ/ಎಜೆಪಿ ಬಡಿದಾಟ ನಡೆಯುತ್ತಿದೆ. ಅದನ್ನು ಮರೆಮಾಚಲು ನನ್ನ ವಿರುದ್ಧ ಹೋರಾಟದ ನಾಟಕ ಶುರು ಮಾಡಿದ್ದಾರೆ. ಬಿಜೆಪಿಗೆ ಅಸ್ತಿತ್ವ ಉಳಿಸಿಕೊಳ್ಳಲು ನನ್ನ ಹೆಸರು ಅನಿವಾರ್ಯ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ತಮ್ಮ ಮನೆಗೆ ಮುತ್ತಿಗೆ ಹಾಕಲು ರೂಪಿಸಿದ್ದ ಯೋಜನೆಗೆ ಸಂಬಂಧಿಸಿದ ಸ್ಕ್ರೀನ್‌ಶಾಟ್ ಹಂಚಿಕೊಂಡಿರುವ ಅವರು, ‘ಮನೆಗೆ ಮುತ್ತಿಗೆ ಹಾಕಲು ಬಿಜೆಪಿಗರನ್ನು ಧಾರಾಳವಾಗಿ ಸ್ವಾಗತಿಸುತ್ತೇನೆ. ಕಾಫಿ, ಟೀ, ಬಿಸ್ಕೆಟ್ ಆತಿಥ್ಯವನ್ನೂ ನೀಡುತ್ತೇನೆ’ ಎಂದಿದ್ದಾರೆ.

‘ಸುಳ್ಳುಗಳ ಆಧಾರದಲ್ಲಿ ನನ್ನ ವಿರುದ್ಧ ಹೋರಾಟ ಮಾಡುವ ಬದಲು ಬಿಜೆಪಿಯವರು ರಾಜ್ಯದ ಜನರೆದುರು ತಮ್ಮ ನೈತಿಕತೆ ನಿರೂಪಿಸುವ ಹೋರಾಟ ಮಾಡಿ. ಮಹಿಳೆಯರನ್ನು ಅತ್ಯಾಚಾರಗೈದು, ದಲಿತರನ್ನು ನಿಂದಿಸಿ, ಒಕ್ಕಲಿಗ ಮಹಿಳೆಯರನ್ನು ಮಂಚಕ್ಕೆ ಕರೆದ ಮುನಿರತ್ನರವರ ವಿರುದ್ಧ ಹೋರಾಟ ಮಾಡಿ. ಪೋಕ್ಸೊ ಪ್ರಕರಣ ಎದುರಿಸುತ್ತಿರುವ ಯಡಿಯೂರಪ್ಪ ವಿರುದ್ಧ ಕರಪತ್ರ ಹಂಚಿ’ ಎಂದು ಬಿಜೆಪಿ ನಾಯಕರಿಗೆ ಸವಾಲು ಹಾಕಿದ್ದಾರೆ.

‘ಮಹಿಳೆಯನ್ನು ಕೊಳಕು ಭಾಷೆಯಲ್ಲಿ ನಿಂದಿಸಿದ ಸಿ.ಟಿ ರವಿ ಮನೆಗೆ ಮುತ್ತಿಗೆ ಹಾಕಿ. ಕೋವಿಡ್ ಕಾಲದಲ್ಲಿ ಭ್ರಷ್ಟಾಚಾರದಿಂದ ಸಾವಿರಾರು ಜೀವ ತೆಗೆದ ಭ್ರಷ್ಟರ ವಿರುದ್ಧ ಕಪ್ಪುಬಾವುಟ ತೋರಿಸಿ. ವಕ್ಫ್ ವರದಿ ಮುಚ್ಚಿ ಹಾಕಲು 150 ಕೋಟಿ ಆಮಿಷ ಒಡ್ಡಿದ್ದ ವಿಜಯೇಂದ್ರ ವಿರುದ್ಧ ಪೋಸ್ಟರ್ ಪ್ರದರ್ಶಿಸಿ’ ಎಂದು ಪೋಸ್ಟ್ ಮಾಡಿದ್ದಾರೆ.

ರಾಜೀನಾಮೆ ಪ್ರಶ್ನೆಯೇ ಇಲ್ಲ: ಮುಖ್ಯಮಂತ್ರಿ

ಬೆಂಗಳೂರು: ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣದಲ್ಲಿ ಬಿಜೆಪಿ ಮುಖಂಡರು ರಾಜಕೀಯ ದ್ವೇಷಕ್ಕಾಗಿ ಸುಳ್ಳು ಆರೋಪ ಮಾಡುತ್ತಿದ್ದಾರೆ. ಅಂತಹ ಆರೋಪಗಳಿಗೆಲ್ಲ ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ಆತ್ಮಹತ್ಯೆಗೂ ಮುನ್ನ ಬರೆದ ಮರಣ ಪತ್ರದಲ್ಲಿ ಪ್ರಿಯಾಂಕ್ ಖರ್ಗೆ ಹೆಸರಿಲ್ಲ. ಸಾಕ್ಷ್ಯಗಳೂ ಇಲ್ಲ. ಆದರೂ, ವಿಚಾರಣೆ ಎದುರಿಸಲು ಸಿದ್ಧ ಎಂದು ಸಚಿವರೇ ಹೇಳಿದ್ದಾರೆ. ಹಿಂದಿನ ಸರ್ಕಾರದಲ್ಲಿ ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ ಪ್ರಕರಣದಲ್ಲಿ ಅವರ ಹೆಸರನ್ನು ನೇರವಾಗಿ ಉಲ್ಲೇಖಿಸಲಾಗಿತ್ತು. ಸಚಿನ್ ಪ್ರಕರಣ ಕುರಿತು ಸಿಐಡಿ ತನಿಖೆ ನಡೆಸುತ್ತಿದ್ದು, ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು ಎಂದರು.

‘ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಅವರು ರಾಜ್ಯಪಾಲರಿಗೆ ದೂರು ನೀಡಿದ್ದಾರೆ. ಸರ್ಕಾರ ಸಿಐಡಿಗೆ ವಹಿಸಿದೆ. ಎಫ್‌ಎಸ್‌ಎಲ್ ವರದಿಗೆ ಕಾಯುತ್ತಿದ್ದೇವೆ. ನಂತರ ಪ್ರತಿಕ್ರಿಯೆ ನೀಡುವೆ’ ಎಂದರು.

ಬಾಣಂತಿಯರ ಸಾವು: ಇಂದಿನಿಂದ ಮಹಿಳಾ ಮೋರ್ಚಾ ಪ್ರತಿಭಟನೆ

ಬಾಣಂತಿಯರ ಸಾವು ನಿಯಂತ್ರಣಕ್ಕೆ ತರುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆಯೆಂದು ರಾಜ್ಯದಾದ್ಯಂತ ಹೋರಾಟ ನಡೆಸಲು ಬಿಜೆಪಿ ಮಹಿಳಾ ಮೋರ್ಚಾ ಮುಂದಾಗಿದೆ. ಗುರುವಾರದಿಂದ ಜಿಲ್ಲಾವಾರು ಪ್ರತಿಭಟನಾ ಮೆರವಣಿಗೆ ಆಯೋಜಿಸಿದ್ದು, ಪ್ರತಿನಿತ್ಯ ಐದು ಜಿಲ್ಲೆಗಳಲ್ಲಿ ಹೋರಾಟ ನಡೆಯಲಿದೆ.

ಮೃತ ಬಾಣಂತಿಯರ ಕುಟುಂಬಕ್ಕೆ ₹25 ಲಕ್ಷ ಪರಿಹಾರ ನೀಡುವಂತೆ ಮತ್ತು ಸಂಬಂಧಿತ ಸಚಿವರ ರಾಜೀನಾಮೆಗೆ ಮೋರ್ಚಾವು ಆಗ್ರಹಿಸಲಿದೆ.

ಈ ಬಗ್ಗೆ ಮಾಹಿತಿ ನೀಡಿದ ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ, ‘ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರು, ಬಾಣಂತಿಯರ ಸಾವನ್ನು ತಡೆಯುವಲ್ಲಿ ವಿಫಲರಾಗಿದ್ದಾರೆ. ಇಬ್ಬರೂ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು’ ಎಂದು ಆಗ್ರಹಿಸಿದರು

ಇನ್ಫೊಸಿಸ್‌ನಲ್ಲಿ ಚಿರತೆಗೆ ಹುಡುಕಾಟ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಹೆಬ್ಬಾಳದಲ್ಲಿರುವ ಇನ್ಫೊಸಿಸ್ ಕ್ಯಾಂಪಸ್‌ನಲ್ಲಿ ಸೇರಿಕೊಂಡಿರುವ ಚಿರತೆ ಸೆರೆಗೆ ಅರಣ್ಯ ಇಲಾಖೆ ಬುಧವಾರವೂ ಹುಡುಕಾಟವನ್ನು ಮುಂದುವರಿಸಿದ್ದು, ಚಿರತೆ ಪತ್ತೆಯಾಗಿಲ್ಲ.


ಚಿರತೆ ಕಾರ್ಯಪಡೆ ಹಾಗೂ ಇಲಾಖೆಯ 40 ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದು, ಬುಧವಾರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮಾಲತಿ ಪ್ರಿಯಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಡಿಸಿಎಫ್‌ಗಳಾದ ಐ.ಬಿ.ಪ್ರಭುಗೌಡ, ಬಸವರಾಜು ಅವರಿಂದ ಮಾಹಿತಿ ಪಡೆದರು.

ಥರ್ಮಲ್ ಕ್ಯಾಮೆರಾ ಅಳವಡಿಸಿರುವ ಡ್ರೋನ್ ಹಾಗೂ ಹೆಜ್ಜೆ ಗುರುತಿನ ಪತ್ತೆಗೆ ನಿರಂತರವಾಗಿ ಹುಡುಕಾಟ ನಡೆಸಿದರೂ, ಕ್ಯಾಮೆರಾ ಟ್ರ್ಯಾಪ್, ಸಿ.ಸಿ.ಟಿ.ವಿ. ಕ್ಯಾಮೆರಾಗಳಲ್ಲಿ ಚಿರತೆ ಚಲನವಲನ ಕಂಡುಬಂದಿಲ್ಲ.

‘ಕಂಪನಿಯ ಉದ್ಯೋಗಿಗಳಿಗೆ ಮನೆಯಲ್ಲಿಯೇ ಕರ್ತವ್ಯ ನಿರ್ವಹಿಸಲು ಸೂಚಿಸಲಾಗಿದ್ದು, ಎಲ್ಲ ಸಿಬ್ಬಂದಿ ಕ್ಯಾಂಪಸ್‌ನಲ್ಲಿ ವಹಿಸಬೇಕಾದ ಎಚ್ಚರಿಕೆ ಬಗ್ಗೆ ಮಾಹಿತಿಯನ್ನು ಇಲಾಖೆಯ ಸಿಬ್ಬಂದಿ ನೀಡಿದ್ದಾರೆ’ ಎಂದು ಡಿಸಿಎಫ್ (ವನ್ಯಜೀವಿ) ಐ.ಬಿ.ಪ್ರಭುಗೌಡ ತಿಳಿಸಿದರು.

ಕೃಷಿ ವಿವಿ ಹೊಲದಲ್ಲಿ ಅಯ್ಯಪ್ಪಸ್ವಾಮಿ ಮೂರ್ತಿ

ಪ್ರಜಾವಾಣಿ ವಾರ್ತೆ



ಧಾರವಾಡ: ಇಲ್ಲಿನ ಕೃಷಿ ವಿಶ್ವವಿದ್ಯಾಲಯದ ಮಾವಿನ ತೋಪಿನ ಕಟ್ಟೆಯ ಮೇಲೆ ಅಯ್ಯಪ್ಪಸ್ವಾಮಿ ಮೂರ್ತಿಯನ್ನು ಅಪರಿಚಿತರು ತಂದಿಟ್ಟಿದ್ದು, ಗೊಂದಲಕ್ಕೀಡು ಮಾಡಿದೆ. ಕೆಲ ಮಾಲಾಧಾರಿಗಳು ಬುಧವಾರ ಮೂರ್ತಿಗೆ ನಮಿಸಿದರು.

‘ಮೂರ್ತಿಯನ್ನು ಯಾರು, ಯಾವಾಗ ತಂದಿಟ್ಟಿದ್ದಾರೆ ಎಂಬುದು ಗೊತ್ತಿಲ್ಲ. ಪೊಲೀಸರಿಗೆ ದೂರು ನೀಡಿದ್ದೇವೆ. ಪೊಲೀಸರು ಮತ್ತು ವಿಶ್ವವಿದ್ಯಾಲಯದ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ವಹಿಸುತ್ತೇವೆ’ ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಪಿ.ಎಲ್.ಪಾಟೀಲ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮೂರ್ತಿಯನ್ನು ಶಾಸ್ತ್ರೋಕ್ತವಾಗಿ ಉತ್ತರಾಭಿಮುಖವಾಗಿ ಇಡಲಾಗಿದೆ. ಯಾರೋ ವ್ಯವಸ್ಥಿತವಾಗಿ ಈ ಕಾರ್ಯ ಮಾಡಿದ್ದಾರೆ’ ಎಂದು ಎತ್ತಿನಗುಡ್ಡ ಗ್ರಾಮಸ್ಥ ನಾಗೇಶ ಅವರು ಹೇಳಿದರು.

14 ಪತ್ರಕರ್ತರಿಗೆ ಅಭಿವೃದ್ಧಿ, ಪರಿಸರ ಪತ್ರಿಕೋದ್ಯಮ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ನೀಡುವ ‘ಅಭಿವೃದ್ಧಿ ಹಾಗೂ ಪರಿಸರ ಪತ್ರಿಕೋದ್ಯಮ ಪ್ರಶಸ್ತಿ’ ಪ್ರಕಟವಾಗಿದ್ದು, ‘ಪ್ರಜಾವಾಣಿ’ಯ ಹಿರಿಯ ವರದಿಗಾರರಾದ ಆರ್. ಮಂಜುನಾಥ್, ಯೋಗೇಶ್ ಎಂ.ಎನ್. ಸೇರಿ 14 ಮಂದಿ ಆಯ್ಕೆಯಾಗಿದ್ದಾರೆ.

ಅಭಿವೃದ್ಧಿ ಮತ್ತು ಪರಿಸರ ಪತ್ರಿಕೋದ್ಯಮ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿದ ಪತ್ರಕರ್ತರಿಗೆ ಈ ಪ್ರಶಸ್ತಿ ನೀಡಲಾಗುತ್ತಿದ್ದು, ವಾರ್ತಾ ಇಲಾಖೆಯು 2017ರಿಂದ 2023ರ ಅವಧಿಯ ಪ್ರಶಸ್ತಿಗಳನ್ನು ಪ್ರಕಟಿಸಿದೆ.

‘ಪರಿಸರ ಪತ್ರಿಕೋದ್ಯಮ ಪ್ರಶಸ್ತಿ’ಗೆ ವಿಜಯಲಕ್ಷ್ಮೀ ಶಿಬರೂರು (ಡಿಜಿಟಲ್ ಮಾಧ್ಯಮ), ಬಿ.ಎಂ.ಟಿ. ರಾಜೀವ್ (ಹವ್ಯಾಸಿ ಪತ್ರಕರ್ತ), ವಿನೋದ ಕುಮಾರ್ ಬಿ. ನಾಯ್ಕ (ಏಷ್ಯಾನೆಟ್ ಸುವರ್ಣ), ಮಾಲತೇಶ ಅಂಗೂರ (ಕೌರವ ಪತ್ರಿಕೆ), ಸುಧೀರ್ ಶೆಟ್ಟಿ (ಹವ್ಯಾಸಿ ಪರಿಸರ ಛಾಯಾಗ್ರಾಹಕ), ಮಲ್ಲಿಕಾರ್ಜುನ ಹೊಸಪಾಳ್ಯ (ಹವ್ಯಾಸಿ ಪತ್ರಕರ್ತ) ಹಾಗೂ ಆರ್. ಮಂಜುನಾಥ್ (ಪ್ರಜಾವಾಣಿ) ಆಯ್ಕೆಯಾಗಿದ್ದಾರೆ.



ಆರ್. ಮಂಜುನಾಥ್



ಯೋಗೇಶ್ ಎಂ.ಎನ್.

‘ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿ’ಗೆ ಚೀ.ಜ.ರಾಜೀವ್ (ವಿಜಯ ಕರ್ನಾಟಕ), ದೇವಯ್ಯ ಗುತ್ತೇದಾರ್ (ವಿಜಯ ಕರ್ನಾಟಕ), ಗಿರೀಶ್ ಲಿಂಗಣ್ಣ (ಅಂಕಣಕಾರ), ಯೋಗೇಶ್ ಎಂ.ಎನ್. (ಪ್ರಜಾವಾಣಿ), ನೌಶಾದ್ ಬಿಜಾಪುರ (ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್), ಸತೀಶ್ ಜಿ.ಟಿ. (ದಿ ಹಿಂದೂ) ಹಾಗೂ ಎಸ್. ಗಿರೀಶ್ ಬಾಬು (ಕನ್ನಡಪ್ರಭ) ಅವರು ಆಯ್ಕೆಯಾಗಿದ್ದಾರೆ.

ವಾರ್ತಾ ಇಲಾಖೆಯ ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್ ಅಧ್ಯಕ್ಷತೆಯಲ್ಲಿ ಪತ್ರಕರ್ತರಾದ ಸನತ್ ಕುಮಾರ್ ಬೆಳಗಲಿ ಹಾಗೂ ಕೆ.ಶಿವಕುಮಾರ್ ಅವರನ್ನು ಒಳಗೊಂಡ ಸಮಿತಿಯು ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ತಲಾ ₹1 ಲಕ್ಷ ನಗದು, ಸ್ಮರಣಿಕೆ ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭ ಶೀಘ್ರದಲ್ಲಿಯೇ ಆಯೋಜಿಸಲಾಗುವುದು ಎಂದು ಇಲಾಖೆಯ ಆಯುಕ್ತ ತಿಳಿಸಿದ್ದಾರೆ.

ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯಗೆ ‘ಬಸವ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರಗಿಯ ಶ್ರೀ ಸುಭಾಶ್ಚಂದ್ರ ಪಾಟೀಲ ಸ್ಮಾರಕ ಜನಕಲ್ಯಾಣ ಟ್ರಸ್ಟ್‌ನಿಂದ ನೀಡುವ 2025ನೇ ಸಾಲಿನ ‘ಬಸವ ಪ್ರಶಸ್ತಿ’ಗೆ ಕವಿ ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯ ಅವರು ಆಯ್ಕೆಯಾಗಿದ್ದಾರೆ.



ಪ್ರಶಸ್ತಿಯು ₹50 ಸಾವಿರ ನಗದು ಮತ್ತು ಫಲಕವನ್ನು ಒಳಗೊಂಡಿದೆ.

ಇದೇ 11ರಂದು ಸಂಜೆ 5.30ಕ್ಕೆ ನಗರದ ಚಿತ್ರಕಲಾ ಪರಿಷತ್ತಿನಲ್ಲಿ ನಡೆಯುವ ಸಮಾರಂಭದಲ್ಲಿ ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಟ್ರಸ್ಟ್ ಪ್ರಕಟಣೆ ತಿಳಿಸಿದೆ.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯಕ್ರಮ

ರಾಜ್ಯದಲ್ಲಿ ಶುದ್ಧ ಜಲ ಅಭಿಯಾನ

ಪ್ರಜಾವಾಣಿ ವಾರ್ತೆ

ಮಂಗಳೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ರಾಜ್ಯದಲ್ಲಿ ಈ ತಿಂಗಳು ಶುದ್ಧ ಜಲ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಸುಮಾರು 1.50 ಲಕ್ಷ ಜನರಿಗೆ ಶುದ್ಧ ಜಲ ಬಳಕೆ ಕುರಿತು ಜಾಗೃತಿ ಮೂಡಿಸಲಾಗುವುದು ಎಂದು ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ಅನಿಲ್ ಕುಮಾರ್ ಎಸ್.ಎಸ್ ತಿಳಿಸಿದ್ದಾರೆ.

ಜನರಿಗೆ ಶುದ್ಧ ನೀರು ಕೊಡುವ ಉದ್ದೇಶಕ್ಕಾಗಿ ಧರ್ಮಸ್ಥಳ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರು ಕರ್ನಾಟಕದಲ್ಲಿ ಸಮುದಾಯ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸುವ ನಿರ್ಧಾರ ಕೈಗೊಂಡರು. 2009ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಯಗಟಿಯಲ್ಲಿ ಮೊದಲ ಶುದ್ಧ ಕುಡಿಯುವ ನೀರಿನ ಘಟಕವನ್ನು ಹೇಮಾವತಿ ವಿ. ಹೆಗ್ಗಡೆಯವರು ಲೋಕಾರ್ಪಣೆ ಮಾಡಿದರು. ‘ಶುದ್ಧಗಂಗಾ’ ಎಂಬ ಹೆಸರಿನಲ್ಲಿ ಇದುವರೆಗೆ ರಾಜ್ಯದಲ್ಲಿ 481 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದೆ. ನಿತ್ಯ ಸುಮಾರು 5.55ಲಕ್ಷ ಜನರು ಶುದ್ಧ ನೀರನ್ನು ಬಳಸುತ್ತಿದ್ದಾರೆ. ಇದಕ್ಕಾಗಿ ಪ್ರತಿದಿನ 22 ಲಕ್ಷ ಲೀಟರ್ ಶುದ್ಧ ಕುಡಿಯುವ ನೀರನ್ನು ಈ ಘಟಕಗಳ ಮೂಲಕ ನೀಡಲಾಗುತ್ತಿದೆ. ಈ ಮಹತ್ವಾಕಾಂಕ್ಷೆಯ ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆಗಳೂ ಕೈ ಜೋಡಿಸಿವೆ ಎಂದು ಅವರು ಹೇಳಿದ್ದಾರೆ.



ಶುದ್ಧ ಜಲ ಅಭಿಯಾನದ ಕರಪತ್ರವನ್ನು ಡಿ.ವೀರೇಂದ್ರ ಹೆಗ್ಗಡೆ, ಹೇಮಾವತಿ ಹೆಗ್ಗಡೆ ಅವರು ಬುಧವಾರ ಧರ್ಮಸ್ಥಳದಲ್ಲಿ ಬಿಡುಗಡೆಗೊಳಿಸಿದರು

ಶುದ್ಧಗಂಗಾ ಘಟಕಗಳು ಇರುವ ಪ್ರದೇಶದ ಜನರಿಗೆ ಜಾಗೃತಿ ಅಭಿಯಾನ ಆಯೋಜಿಸಲಾಗುತ್ತಿದೆ. ಶಾಲಾ ಮಕ್ಕಳಿಗೆ ಮಾಹಿತಿ, ಜಾಥಾ, ಕರಪತ್ರ ಹಂಚಿಕೆ, ಬೀದಿನಾಟಕ, ಸಾರ್ವಜನಿಕ ಮಾಹಿತಿ ಕಾರ್ಯಕ್ರಮ, ಒಕ್ಕೂಟ ಸಭೆಗಳು, ಜ್ಞಾನವಿಕಾಸ ಕೇಂದ್ರಗಳಲ್ಲಿ ಮಾಹಿತಿ ಹಾಗೂ ಮನೆಮನೆಗೆ ತೆರಳಿ ನೋಂದಣಿ ಮೊದಲಾದ 500ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನಡೆಸಲು ಉದ್ದೇಶಿಸಲಾಗಿದೆ. ಘಟಕ ಮೇಲ್ವಿಚಾರಕರು, ಪ್ರೇರಕರು, ಸ್ಥಳೀಯ ಕಾರ್ಯಕರ್ತರು ಹಾಗೂ ಪ್ರಗತಿಬಂಧು ಒಕ್ಕೂಟದ ಸದಸ್ಯರು ಇದರಲ್ಲಿ ತೊಡಗಿಕೊಳ್ಳಲಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಕರಪತ್ರ ಬಿಡುಗಡೆ: ಧರ್ಮಸ್ಥಳದಲ್ಲಿ ಡಿ.ವೀರೇಂದ್ರ ಹೆಗ್ಗಡೆ ಮತ್ತು ಹೇಮಾವತಿ ಹೆಗ್ಗಡೆ ಅವರು ಶುದ್ಧಜಲ ಅಭಿಯಾನದ ಕರಪತ್ರವನ್ನು ಬುಧವಾರ ಬಿಡುಗಡೆ ಮಾಡಿದರು. ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಅನಿಲ್ ಕುಮಾರ್ ಎಸ್.ಎಸ್, ಮುಖ್ಯ ಹಣಕಾಸು ಅಧಿಕಾರಿ ಶಾಂತರಾಮ ಪೈ, ಸಮುದಾಯ ಮತ್ತು ಅಭಿವೃದ್ಧಿ ವಿಭಾಗದ ಪ್ರಾದೇಶಿಕ ನಿರ್ದೇಶಕ ಆನಂದ ಸುವರ್ಣ, ಶುದ್ಧಗಂಗಾ ಮತ್ತು ಕೆರೆ ಅಭಿವೃದ್ಧಿ ವಿಭಾಗದ ನಿರ್ದೇಶಕ ಶಿವಾನಂದ ಆಚಾರ್ಯ ಉಪಸ್ಥಿತರಿದ್ದರು.

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ – ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ

ಮುಖ್ಯ ಯೋಜನಾಧಿಕಾರಿ ರವರ ಕಛೇರಿ, ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಲೋಕೋಪಯೋಗಿ ಇಲಾಖೆ ಅನೆಕ್ಸ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು –560001

ವೆಬ್‌ಸೈಟ್: www.shdpkar.in ಇ–ಮೇಲ್: cposhdp2020@gmail.com

ಸಂ: ಮುಯೋಅ/ರಾಹೆಅಯೋ/ತಾಂತ್ರಿಕ/ಕಾಇಂ–1, 2/ಅಲ್ಪಾವಧಿ ಟೆಂಡರ್ ಪ್ರಕಟಣೆ/2024–25/4465 ದಿನಾಂಕ: 31.12.2024

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ–5 ಘಟ್ಟ–1 ರಡಿಯಲ್ಲಿ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿಗಾಗಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.: 16/2024–25 ದಿನಾಂಕ: 31.12.2024

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಅಧೀಕ್ಷಕ ಇಂಜಿನಿಯರ್–2, ಯೋಜನಾ ಅನುಷ್ಠಾನ ಘಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರು. ಇವರಿಂದ ಸರ್ಕಾರದ ಆದೇಶ ಸಂಖ್ಯೆ: ಲೋಇ 304 ಇಎಪಿ 2024 ಬೆಂಗಳೂರು, ದಿನಾಂಕ: 29.02.2024, ಸರ್ಕಾರದ ಆದೇಶ ಸಂಖ್ಯೆ: ಲೋಇ 198 ಇಎಪಿ 2024 ಬೆಂಗಳೂರು ದಿನಾಂಕ: 16.12.2024 ಮತ್ತು ಆದೇಶ ಸಂಖ್ಯೆ: ಲೋಇ 198 ಇಎಪಿ 2024 ಬೆಂಗಳೂರು, ದಿನಾಂಕ: 30.12.2024 ರಲ್ಲಿ ಅನುಮೋದಿಸಲಾಗಿರುವ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ–5 ಘಟ್ಟ–1 ರಲ್ಲಿನ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸ್ಟ್ಯಾಂಡರ್ಡ್ ಟೆಂಡರ್‌ಗಳ ಡಾಕ್ಯುಮೆಂಟ್ (KW-4) ಎಸ್.ಹೆಚ್.ಡಿ.ಪಿ ನಿಯಮಗಳನುಸಾರವಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

(1) ಕಾಮಗಾರಿ ವಿವರ: ಪ್ಯಾಕೇಜು ಸಂಖ್ಯೆ: 822 (ಒಂದನೇ ಕರೆ) ಪ್ಯಾಕೇಜು ಸಂಖ್ಯೆ: 818 (ಎರಡನೇ ಕರೆ) ಪ್ಯಾಕೇಜು ಸಂಖ್ಯೆ: 697 (ಐದನೇ ಕರೆ). (2) ಟೆಂಡರ್‌ಗಿಟ್ಟ ಮೊತ್ತ 18% ಜಿ.ಎಸ್.ಟಿ ಹೊರತುಪಡಿಸಿ (ರೂ.ಲಕ್ಷಗಳಲ್ಲಿ): **ಪ್ಯಾಕೇಜುವಾರು ಟೆಂಡರ್‌ಗಿಟ್ಟ ಮೊತ್ತದ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆದುಕೊಳ್ಳಬಹುದು.** (3) ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ): **ಪ್ಯಾಕೇಜುವಾರು ಇ.ಎಂ.ಡಿ ಮೊತ್ತದ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆದುಕೊಳ್ಳಬಹುದು.** (4) ಅರ್ಹ ಗುತ್ತಿಗೆದಾರರ ದರ್ಜೆ: **1 ನೇ ದರ್ಜೆ ಮತ್ತು ಮೇಲ್ಪಟ್ಟು.** (5) ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ: **11 ತಿಂಗಳು (ಮಳೆಗಾಲ ಸೇರಿ). ಟೆಂಡರ್ ಪ್ರಕ್ರಿಯೆ ವಿವರಗಳು: 1.** ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ದಾಖಲಾತಿಗಳನ್ನು **ದಿನಾಂಕ: 02.01.2025 ರಿಂದ ದಿನಾಂಕ: 10.01.2025 ರವರೆಗೆ ಸಂಜೆ 4.30 ಗಂಟೆವರೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. **2.** ಟೆಂಡರ್‌ಗೆ ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಪ್ರೀಟೆಂಡರ್ ಮೀಟಿಂಗ್ **ದಿನಾಂಕ 06.01.2025 ರಂದು ಬೆಳಿಗ್ಗೆ 11–30 ಗಂಟೆಗೆ** (ಮುಖ್ಯ ಯೋಜನಾಧಿಕಾರಿ, ಎಸ್.ಹೆಚ್.ಡಿ.ಪಿ ಬೆಂಗಳೂರುರವರ ಕಛೇರಿ). **3.** ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ: 10.01.2025 ರಂದು ಸಂಜೆ 4–30 ಗಂಟೆ ವರೆಗೆ. 4.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ 16.01.2025ರ ಬೆಳಿಗ್ಗೆ 11–30 ಗಂಟೆ ನಂತರ. 5.** ಅರ್ಹ ಟೆಂಡರ್‌ಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ಸಂಭಾವನೀಯ **ದಿನಾಂಕ: 20.01.2025 ರಂದು ಬೆಳಿಗ್ಗೆ 11–30 ಗಂಟೆಗೆ. 6.** ತಿದ್ದುಪಡಿ ಪ್ರಕಟಣೆಗಳು, ಮಾರ್ಪಾಡುಗಳ ಪ್ರಕಟಣೆಗಳು ಮತ್ತು ಪ್ರಕಟಣೆಯಲ್ಲಿ ಯಾವುದಾದರೂ ಬದಲಾವಣೆಗಳಿದ್ದಲ್ಲಿ ಅವುಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಲೋಕೋಪಯೋಗಿ ಇಲಾಖೆ ಮತ್ತು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿತ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಟೆಂಡರ್ ಆಹ್ವಾನಿಸಿರುವ ಕಾಮಗಾರಿಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಮುಖ್ಯ ಯೋಜನಾಧಿಕಾರಿರವರ ಕಛೇರಿ, ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರು ರವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಮೂಲಕ: **support@eprochelpdesk.com** ರಲ್ಲಿ ಪಡೆಯಬಹುದಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ **ಸಹಾಯವಾಣಿ ದೂರವಾಣಿ ಸಂಖ್ಯೆಗಳು: +91–8046010000 & +91–8068948777**

ಸಹಿ/– ಅಧೀಕ್ಷಕ ಇಂಜಿನಿಯರ್–2
ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕೆ.ಆರ್. ವೃತ್ತ, ಬೆಂಗಳೂರು

DIPR/CP/4060/SPAN/2024-25

ಗೌರವಾನ್ವಿತ ನ್ಯಾಯಮೂರ್ತಿ ಹೆಚ್. ಎನ್. ನಾಗಮೋಹನ್ ದಾಸ್ ಏಕ ಸದಸ್ಯ ವಿಚಾರಣಾ ಆಯೋಗ

ನೃಪತುಂಗ ರಸ್ತೆ, ಯವನಿಕಾ ಕಟ್ಟಡ, ಬೆಂಗಳೂರು

ಅಧಿಸೂಚನೆ ಪ್ರಕಟಣೆ

ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಮತ್ತು ಸರ್ಕಾರಿ ಸೇವೆಗಳಲ್ಲಿ ಪರಿಶಿಷ್ಟ ಜಾತಿಯ ವಿವಿಧ ಉಪಜಾತಿಗಳಿಗೆ ಸೇರಿದವರ ಪ್ರಾತಿನಿಧ್ಯತೆ ಕುರಿತು Empirical Data (ವಾಸ್ತವಿಕ ಸ್ಥಿತಿಯ ಮಾಹಿತಿ) ಪಡೆದು ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಬಗ್ಗೆ ಸೂಕ್ತ ಶಿಫಾರಸ್ಸುಗಳೊಂದಿಗೆ ವರದಿ ಸಲ್ಲಿಸಲು ಆಯೋಗ ವಿಚಾರಣೆ ಕಾಯ್ದೆ 1952 (Commission of Enquiry Act 1952) ರಂತೆ, ಸರ್ಕಾರದ ಆದೇಶ ಸಂಖ್ಯೆ: SWD/8/SLP/2024 (P-1), ಬೆಂಗಳೂರು, ದಿನಾಂಕ: 12–11–2024 ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಶ್ರೀ ಹೆಚ್.ಎನ್.ನಾಗಮೋಹನ್ ದಾಸ್ ಇವರ ಅಧ್ಯಕ್ಷತೆಯಲ್ಲಿ ಏಕ ಸದಸ್ಯ ಆಯೋಗವನ್ನು ರಚಿಸಲಾಗಿದೆ.

ಸದರಿ ಆಯೋಗದ ಕಛೇರಿಯನ್ನು ನೃಪತುಂಗ ರಸ್ತೆ, ಯವನಿಕಾ ಕಟ್ಟಡ, ಬೆಂಗಳೂರು ಇಲ್ಲಿ ಪ್ರಾರಂಭಿಸಲಾಗಿದ್ದು, ಒಳ ಮೀಸಲಾತಿ ಕುರಿತು ಸಾರ್ವಜನಿಕರು ಯಾವುದೇ ರೀತಿಯ ಸಲಹೆ/ಆಕ್ಷೇಪಣೆ/ಅಹವಾಲು/ಹೇಳಿಕೆಗಳು/ದಾಖಲೆಗಳು ಇದ್ದಲ್ಲಿ ದಿ: 31/01/2025 ರೊಳಗಾಗಿ ಕಛೇರಿ ವೇಳೆಯಲ್ಲಿ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ವರೆಗೆ ಕಛೇರಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ **ಕಾರ್ಯದರ್ಶಿಗಳು ಗೌರವಾನ್ವಿತ ನ್ಯಾಯಮೂರ್ತಿ ಹೆಚ್. ಎನ್. ನಾಗಮೋಹನ್ ದಾಸ್ ಏಕ ಸದಸ್ಯ ವಿಚಾರಣಾ ಆಯೋಗ, ನೃಪತುಂಗ ರಸ್ತೆ, ಯವನಿಕಾ ಕಟ್ಟಡ, ಬೆಂಗಳೂರು** ಇಲ್ಲಿಗೆ ಅಥವಾ ಇಮೇಲ್ ವಿಳಾಸ: **justicengmdasinquirycommission@gmail.com** ಗೆ ಕಳುಹಿಸಬಹುದಾಗಿದೆ.

ಸಹಿ/– ಕಾರ್ಯದರ್ಶಿಗಳು
ಗೌರವಾನ್ವಿತ ನ್ಯಾಯಮೂರ್ತಿ ಹೆಚ್. ಎನ್. ನಾಗಮೋಹನ್ ದಾಸ್
ಏಕ ಸದಸ್ಯ ವಿಚಾರಣಾ ಆಯೋಗ, ನೃಪತುಂಗ ರಸ್ತೆ, ಯವನಿಕಾ ಕಟ್ಟಡ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/4067/ಆಕಾರ್/2024–25

ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ

ನವನಗರ, ಹುಬ್ಬಳ್ಳಿ–580 025 ಫೋನ್: 0836–2224195

ಕ್ರ.ಸಂ:ಹು.ಧಾ.ನ.ಪ್ರಾ:ಸಿ.ಎ.ನಿ.ಹಂಚಿಕೆ/2024–25/ 4143 ದಿನಾಂಕ: 31.12.2024

ಪ್ರಕಟಣೆ

ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ

ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಈ ಕೆಳಕಂಡ ಖಾಸಗಿ ಬಡಾವಣೆಗಳಲ್ಲಿರುವ ಸಾರ್ವಜನಿಕ ಸೌಲಭ್ಯಕ್ಕಾಗಿ ಮೀಸಲಿಟ್ಟಿರುವ ನಿವೇಶನಗಳು (30 ವರ್ಷಗಳ ಗುತ್ತಿಗೆ ಆಧಾರದ ಮೇಲೆ) ಹಂಚಿಕೆಗಾಗಿ ಲಭ್ಯವಿರುತ್ತವೆ. ಸದರಿ ಸಾರ್ವಜನಿಕ ಸೌಲಭ್ಯದ ನಿವೇಶನಗಳನ್ನು ಸಾರ್ವಜನಿಕ ಉದ್ದೇಶಗಳಿಗೆ ಹಂಚಿಕೆ ಮಾಡಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಸಾರ್ವಜನಿಕ ಉಪಯೋಗ (ನಾಗರೀಕ ಸೌಲಭ್ಯ) ನಿವೇಶನಗಳ ಹಂಚಿಕೆ ನಿಯಮ 1991 ರ ಪ್ರಕಾರ, ಅರ್ಹ ನೋಂದಾಯಿತ ಸಂಘ ಸಂಸ್ಥೆಗಳು/ ಕೇಂದ್ರ/ ರಾಜ್ಯ/ ಅರೆ ಸರ್ಕಾರಿ ನಿಗಮ ಮಂಡಳಿಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅ. ನಂ	ಗ್ರಾಮ	ರಿಸನಂ/ ಬ್ಲಾಕ್ ನಂ	ನಿವೇಶನ ಸಂ.	ಒಟ್ಟು ವಿಸ್ತೀರ್ಣ ಚ.ಮೀ.ಗಳಲ್ಲಿ	ರೂ. ಪ್ರತಿ ಚ.ಮೀ ಗಳಲ್ಲಿ	ಉದ್ದೇಶ	ಗುತ್ತಿಗೆ ಮೊಬಲಗು ರೂ.ಗಳಲ್ಲಿ	ಭರಿಸಬೇಕಾದ ನೋಂದಣಿ ಶುಲ್ಕ	ಶೇ.10 ರಂತೆ ಭರಿಸ–ಬೇಕಾದ ಪ್ರಾರಂಭಿಕ ಠೇವಣಿ ರೂ	ಮೀಸಲು
1	ಗೋಪನಕೊಪ್ಪ	154/1A	84	210.24	8000	ಸಾಮಾಜಿಕ	16,81,920	1000	1,68,192	ಪ.ಜಾ
2	ಗೋಪನಕೊಪ್ಪ	205/1+2	67	1492.27	7000	ಸಾಂಸ್ಕೃತಿಕ	1,04,45,890	2000	10,44,589	
3	ಗೋಪನಕೊಪ್ಪ	151/2	6	609.43	8000	ಸಾಮಾಜಿಕ	48,75,440	1000	4,87,544	
4	ಬೆಂಗೇರಿ	88/1B	72	925.71	7000	ಸಾಮಾಜಿಕ	64,79,970	1000	6,47,997	ಪ.ಜಾ
5	ಬೈರಿದೇವರಕೊಪ್ಪ (ನಗರಾಭಿವೃದ್ಧಿ ಪ್ರಾಧಿಕಾರದ ವಿನ್ಯಾಸ)	310 ಹಾಗೂ ಇತರೆ	04	1564.04	10500	ಧಾರ್ಮಿಕ	1,64,26,200	2000	16,42,620	
6	ಅಮರಗೋಳ	660/2	01	224.40	7000	ಸಾಮಾಜಿಕ	15,70,800	1000	1,57,080	ಪ.ಜಾ
7	ಅಮರಗೋಳ	681	53	650.84	7000	ಶೈಕ್ಷಣಿಕ	45,55,880	1000	4,55,588	ಪ.ಪಂ
8	ಅಮರಗೋಳ	291	01	1056.28	11500	ಶೈಕ್ಷಣಿಕ	1,21,47,220	2000	12,14,722	
9	ರಾಯನಾಳ	85/2	99	899.66	10000	ಶೈಕ್ಷಣಿಕ	89,96,600	1000	8,99,660	
10	ರಾಯನಾಳ	85/2	103	492.21	10000	ಸಾಂಸ್ಕೃತಿಕ	49,22,100	1000	4,92,210	
11	ಉಣಕಲ್ಲ	719/3	77	890.87	8000	ಶೈಕ್ಷಣಿಕ	71,26,960	1000	7,12,696	
12	ಉಣಕಲ್ಲ	658/2,3,4	14	268.57	6800	ಸಾಮಾಜಿಕ	18,26,276	1000	1,82,627	
13	ಉಣಕಲ್ಲ	709/2+3/ಅ	42	506.49	8000	ಶೈಕ್ಷಣಿಕ ಕನ್ನಡ ಮಾಧ್ಯಮ	40,51,920	1000	4,05,192	
14	ಉಣಕಲ್ಲ	537/1+2 537/3	22	393.72	13000	ಸಾಮಾಜಿಕ	51,18,360	1000	5,11,836	
15	ಗಬ್ಬೂರ	67/6, 68/1, 68/2+4	156	1882.7	7000	ಶೈಕ್ಷಣಿಕ	1,31,78,900	2000	13,17,890	ಪ.ಪಂ
16	ಸುತಗಟ್ಟಿ	105/2	52	1167.91	10000	ಆರೋಗ್ಯ	1,20,00,000	2000	12,00,000	
17	ಸುತಗಟ್ಟಿ	119/1ಅ/2ಅ	17	303.51	10000	ಸಾಮಾಜಿಕ	30,35,100	1000	3,03,510	ಪ.ಜಾ
18	ಸುತಗಟ್ಟಿ	16/2	113	328.79	9000	ಸಾಮಾಜಿಕ	29,59,110	1000	2,95,911	
19	ಸುತಗಟ್ಟಿ	105/3	79	466.95	10000	ಸಾಮಾಜಿಕ	46,69,500	1000	4,66,950	
20	ಸುತಗಟ್ಟಿ	111/ಎ	37	255.79	8000	ಸಾಮಾಜಿಕ	20,46,320	1000	2,04,632	
21	ನಾಗಶೆಟ್ಟಿಕೊಪ್ಪ	14/1B	86	1597.75	7500	ಸಾಮಾಜಿಕ	1,19,83,125	2000	11,98,312	
22	ನಾಗಶೆಟ್ಟಿಕೊಪ್ಪ	28/6A+6B+7/2, 28/6A+6B+28/9	44	204.70	7500	ಮೀಲ್ಸಭೂತ	15,35,250	1000	1,53,525	ಪ.ಜಾ
23	ಗಾಮನಗಟ್ಟಿ	292, 293/1, 293/2, 293/3, 294, 295	203	1112.00	10000	ಶೈಕ್ಷಣಿಕ/ ಸಾಂಸ್ಕೃತಿಕ	1,11,20,000	2000	11,12,000	
24	ಗಾಮನಗಟ್ಟಿ	346	108	1580.72	10000	ಧಾರ್ಮಿಕ/ ಸಾಂಸ್ಕೃತಿಕ	1,58,07,200	2000	15,80,720	
25	ಗೋಕುಲ	149,15 1,153	129	1580.43	10000	ಶೈಕ್ಷಣಿಕ	1,58,04,300	2000	15,80,430	
26	ಯಲ್ಲಾಪೂರ	33/1ಅ 33/1ಬ	170	163.05	8000	ಸಾಮಾಜಿಕ	13,08,000	1000	1,30,800	
27	ಇಟಿಗಟ್ಟಿ	7/41	29	809.36	5500	ಶೈಕ್ಷಣಿಕ	44,51,480	1000	4,45,148	
28	ಮಾಳಾಪೂರ (ಫ್ರಿ)	141/1,2,3,4,5, 6,7,8,9,10	118	440.00	7000	ಸಾಮಾಜಿಕ	30,80,000	1000	3,08,000	
29	ನವಲೂರ	203/1, 203/7	32	512.45	8000	ಶೈಕ್ಷಣಿಕ	67,23,680	1000	6,72,368	
30	ಕುಂ.ನರೇಂದ್ರ	13/1	61	1300.00	7500	ಸಾಮಾಜಿಕ	97,50,000	2000	9,75,000	
31	ಕುಂ.ನರೇಂದ್ರ	62/2A, 63	27	240.3	4500	ಮಿಲ್ಸಭೂತ	10,81,350	1000	1,08,135	
32	ಕುಂ.ನರೇಂದ್ರ	50, 51/1	49	703.33	4500	ಆರೋಗ್ಯ	31,64,985	1000	3,16,498	
33	ಕುಂ.ನರೇಂದ್ರ	49/1, 49/2	36	296.39	4500	ಸಾಮಾಜಿಕ	13,33,755	1000	1,33,375	
34	ನರೇಂದ್ರ	326/1A, 326/1B, 326/1K, 3 27/1, 313/1	115	1559.7	4500	ಶೈಕ್ಷಣಿಕ	70,18,650	2000	7,01,865	
35	ತಡಸಿನಕೊಪ್ಪ	76/3	18	463.42	5000	ಸಾಮಾಜಿಕ	23,17,100	1000	2,31,710	
36	ತಡಸಿನಕೊಪ್ಪ	86/1+87/1+88/1	71	1149.72	6500	ಶೈಕ್ಷಣಿಕ	74,73,180	2000	7,47,318	
37	ಬೇಲೂರ	116/1	89	379.52	5000	ಸಾಮಾಜಿಕ	18,97,600	1000	1,89,760	
38	ಕೆಲಗೇರಿ	11/3, 11/4	55	569.21	6500	ಸಾಂಸ್ಕೃತಿಕ	36,99,865	1000	3,69,986	ಪ.ಜಾ
39	ಕೆಲಗೇರಿ	69	1	591.64	6500	ಸಾಮಾಜಿಕ	38,45,660	1000	3,84,566	
40	ಕೆಲಗೇರಿ	40/2, 40/3	48	230.81	6500	ಸಾಮಾಜಿಕ	15,00,265	1000	1,50,026	
41	ಕೆಲಗೇರಿ	48/1ಹ,1ಗ, 1ಫ, 1ಡ,1ಕ, 1ಇ	84	1143.48	6500	ಸಾಂಸ್ಕೃತಿಕ	74,32,620	2000	7,43,262	
42	ದೊಡ್ಡನಾಯಕನ ಕೊಪ್ಪ	44/1ಎ+1ಬ+4	39	707.43	11000	ಶೈಕ್ಷಣಿಕ/ ವಸತಿ ನಿಲಯ	77,81,730	1000	7,78,173	ಪ.ಜಾ.
43	ದೊಡ್ಡನಾಯಕನ ಕೊಪ್ಪ	34/ಬ	3	774.55	11000	ಶೈಕ್ಷಣಿಕ	85,20,050	1000	8,52,005	ಪ.ಪಂ
44	ಲಕಮನಹಳ್ಳಿ	97/3, 97/4, 97/6	4	1656.24	7000	ಶೈಕ್ಷಣಿಕ	1,15,93,680	2000	11,59,368	
45	ಲಕಮನಹಳ್ಳಿ	162/8, 162/9, 162/11	6	202.35	8000	ಸಾಮಾಜಿಕ	16,18,800	1000	1,61,880	ಪ.ಜಾ
46	ಲಕಮನಹಳ್ಳಿ	55/ಕ	13	94.80	10,500	ಧಾರ್ಮಿಕ	9,95,400	1000	99,540	
47	ಹಿರೇಮಲ್ಲಿಗವಾಡ	63/A, 63/B, 63/K	43	899.58	6500	ಆರೋಗ್ಯ	58,47,270	1,000	5,84,727	ಪ.ಜಾ
48	ಹಿರೇಮಲ್ಲಿಗವಾಡ	41/3, 44/1	149	1035.30	6500	ಶೈಕ್ಷಣಿಕ	67,29,450	2000	6,72,945	ಪ.ಪಂ
49	ಹಿರೇಮಲ್ಲಿಗವಾಡ	69/4	42	607.1	6500	ಧಾರ್ಮಿಕ	39,46,150	1000	3,94,615	
50	ಸತ್ತೂರ	134/3	12	299.51	7500	ಸಾಮಾಜಿಕ	22,46,325	1000	2,24,632	

ಸೂಚನೆ: (1) ನಿಗಧಿತ ನೋಂದಣಿ ನಮೂನೆ ನಿವೇಶನ ಮಂಜೂರಾತಿ ಅರ್ಜಿ ಇವುಗಳನ್ನು **ದಿನಾಂಕ: 04.01.2025** ರಿಂದ ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿ ರೂ. 1,000/– ಶುಲ್ಕ ಪಾವತಿಸಿ, ಪಡೆಯಬಹುದು. **(2)** ಕೇಂದ್ರ/ರಾಜ್ಯ/ಅರೆ ಸರ್ಕಾರಿ/ ನಿಗಮ ಮಂಡಳಿಗಳು ಸಿ.ಎ ನಿವೇಶಗಳಿಗಾಗಿ ಕೋರಿದಲ್ಲಿ/ಅರ್ಜಿ ಸಲ್ಲಿಸಿದಲ್ಲಿ ಮೊದಲ ಆದ್ಯತೆ ನೀಡಲಾಗುವುದು. **(3)** ಸಭೆಯ ನಿರ್ಣಯದಂತೆ ಹಂಚಿಕೆಗೆ ಕ್ರಮ ವಹಿಸಲಾಗುವುದು. **(4)** ಅರ್ಹ ಸಂಘ ಸಂಸ್ಥೆಗಳು ಕಾಲಂ (9) ಮತ್ತು (10) ರಲ್ಲಿ ನಿಗದಿಪಡಿಸಿರುವ ನೋಂದಣಿ ಶುಲ್ಕ ಹಾಗೂ ಪ್ರಾರಂಭಿಕ ಠೇವಣಿದೊಂದಿಗೆ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ ಇವರಿಗೆ ಸಂದಾಯವಾಗುವಂತೆ ಖರೀದಿಸಲಾದ ಡಿ.ಡಿ./ ಕೆನರಾ ಬ್ಯಾಂಕ ನವನಗರ ಹುಬ್ಬಳ್ಳಿ ಶಾಖೆಯ ಖಾತೆ ಸಂಖ್ಯೆಗೆ ನಿಗದಿತ ಫಾರಂನೊಂದಿಗೆ ಸಲ್ಲಿಸಬಹುದು. **(5)** ಕೊನೆಯ ದಿನಾಂಕದ ನಂತರ ಸಲ್ಲಿಸಲಾದ ಮತ್ತು ದೋಷಪೂರಿತ ಸರಿಯಾದ ಮಾಹಿತಿ ನೀಡದ ಹಾಗೂ ದಾಖಲೆಗಳನ್ನು ಸಲ್ಲಿಸದೇ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. **(6)** ಕಚೇರಿ ವೇಳೆಯಲ್ಲಿ ಮಂಜೂರಾತಿಗೆ ಪ್ರಕಟಿಸಿರುವ ನಿವೇಶನಗಳ ನಕ್ಷೆ ಪರಿಶೀಲಿಸಿ ಹೆಚ್ಚಿನ ವಿವರಗಳನ್ನು ಪ್ರಾಧಿಕಾರದ ಹಂಚಿಕೆ ಶಾಖೆಯಲ್ಲಿ ಪಡೆಯಬಹುದು. **(7)** ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಲು ಅನುಸರಿಸಬೇಕಾದ ನಿಯಮಗಳ ಅರ್ಹತೆ ಷರತ್ತುಗಳು, ನಿಬಂಧನೆಗಳು ಮತ್ತು ಇತರೆ ವಿವರಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ನಿಯಮ 1991 ನ್ನು ಪರಿಶೀಲಿಸಬಹುದು. ಯಾವುದೇ ಅರ್ಜಿಯನ್ನು ತಿರಸ್ಕರಿಸುವ ಅಧಿಕಾರ ಪ್ರಾಧಿಕಾರಕ್ಕೆ ಇರುತ್ತದೆ. **(8)** ನಿವೇಶನ ಹಂಚಿಕೆಯನ್ನು ಸ್ಥಳದಲ್ಲಿ ಲಭ್ಯವಿರುವ ಕ್ಷೇತ್ರಕ್ಕೆ ಹಂಚಿಕೆ ಮಾಡಲಾಗುವುದು, ಕ್ಷೇತ್ರದಲ್ಲಿ ವ್ಯತ್ಯಾಸವಾದಲ್ಲಿ ಶುಲ್ಕವನ್ನು ಹೊಂದಾಣಿಕೆ ಮಾಡಲಾಗುವುದು. **(9)** ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ಸಿ.ಎ. ನಿವೇಶನ ಹಂಚಿಕೆ ನಿಯಮ 1991ರ ಅಡಿಯಲ್ಲಿ 8(4) ರಲ್ಲಿ ಅವಕಾಶವಿರುವಂತೆ ಪ್ರಕರಣಗಳಲ್ಲಿನ ನಿವೇಶನಗಳಿಗೆ ಗುತ್ತಿಗೆ ಹಣದ ಶೇಕಡ 50 ರಷ್ಟು ದರಕ್ಕೆ ಹಂಚಿಕೆ ಮಾಡಲಾಗುವುದು. **(10)** ಯಾವುದೇ ನಿವೇಶನವನ್ನು ಉಪವಿಭಾಗ ಮಾಡಿ ಹಂಚಿಕೆ ಮಾಡುವ ಅಧಿಕಾರವನ್ನು ಪ್ರಾಧಿಕಾರವು ಕಾಯ್ದಿರಿಸಿರುತ್ತದೆ. ಸಂಘ ಸಂಸ್ಥೆಗಳು ಈ ಕೆಳಗಿನ **(ಅ ದಿಂದ ಉ)** ವರೆಗಿನ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬೇಕಾದ ಕೊನೆಯ **ದಿನಾಂಕ: 01–02–2025** ರಂದು **ಸಾಯಂಕಾಲ 4:00** ಗಂಟೆವರೆಗೆ ಮಾತ್ರ ಸ್ವೀಕರಿಸಲಾಗುವುದು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. **(11)** ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ಸಿ.ಎ. ನಿವೇಶನ ಹಂಚಿಕೆ ನಿಯಮ 1991ರ 3(2) ರ ಅಡಿಯಲ್ಲಿ ಬೇರೆ ಸಂಘ ಸಂಸ್ಥೆಗಳಿಗೆ ಹಂಚಿಕೆ ಮಾಡಲು ಕ್ರಮ ವಹಿಸಲಾಗುವುದು. **(12)** ಹಂಚಿಕೆಯಾಗಿರುವ ಸಿ.ಎ. ನಿವೇಶನದ ಆಸ್ತಿ ತೆರಿಗೆಯನ್ನು ಹಂಚಿಕೆ ಪಡೆದವರು ಭರಿಸತಕ್ಕದ್ದು.

ಅ) ಸಂಘದ ಉದ್ದೇಶ ಹಾಗೂ ಚಟುವಟಿಕೆಗಳ ವಿವರ, ಸಂಘದ ನೋಂದಾಯಿಸಿದ ಬಗ್ಗೆ ದಾಖಲೆ ಹಾಗೂ ಧ್ಯೇಯೋದ್ದೇಶಗಳು / ಬೈಲಾ.
ಆ) ಸಂಘದ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಮಾಹಿತಿ. ಇ) ಸಾರ್ವಜನಿಕರಿಗೆ ಒದಗಿಸಬಹುದಾದ ಸೌಲಭ್ಯಗಳು.
ಈ) ಕಳೆದ 03 ವರ್ಷದ ಆಡಿಟ್ ವರದಿ. ಉ) ಸಿ.ಎ ನಿವೇಶನದ ಅಗತ್ಯತೆಯ ಬಗ್ಗೆ ವಿವರ ಹಾಗೂ ನಡಾವಳಿಕೆ ಪ್ರತಿ.

ಸಹಿ/– (ಡಾ॥ ಸಂತೋಷಕುಮಾರ ಬಿರಾದಾರ)
ಆಯುಕ್ತರು
ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ಹುಬ್ಬಳ್ಳಿ

ಸಹಿ/– (ಶಾಕೀರ ಸನದಿ)
ಅಧ್ಯಕ್ಷರು
ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ಹುಬ್ಬಳ್ಳಿ

ವಾ.ಸಾ.ಇ/ಧಾರವಾಡ/809/ದೇಶಪಾಂಡೆಪಬ್ಲಿಸಿಟಿ/2024–25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಪ್ರಜಾವಾಣಿ ಗುರುವಾರ • ಜನವರಿ 2, 2025

ಅಭಿಮತ



ಸುಭಾಷಿತ

ಕಷ್ಟಗಳನ್ನು ಮೌನವಾಗಿ ದಾಟಬೇಕು, ಪರಿಶ್ರಮ ಸದ್ದಿಲ್ಲದೆ ಸಾಗಬೇಕು, ಸಿಗುವ ಯಶಸ್ಸಿನ ಶಬ್ದ ಜಗತ್ತಿಗೇ ಕೇಳಿಸುವಷ್ಟು ಜೋರಾಗಿರಬೇಕು.

–ಸಿದ್ಧೇಶ್ವರ ಸ್ವಾಮೀಜಿ

ಮನೆಬಳಕೆ ವೆಚ್ಚ ಕುರಿತ ವರದಿ ಲಯ ಕಾಪಾಡಿಕೊಳ್ಳುವ ಸವಾಲು

ಮನೆಬಳಕೆಯ ವೆಚ್ಚಕ್ಕೆ ಸಂಬಂಧಿಸಿದ ಅಂಕಿ–ಅಂಶಗಳು ಜನ ತಮ್ಮಲ್ಲಿನ ಹಣವನ್ನು ಹೇಗೆ ಖರ್ಚು ಮಾಡುತ್ತಿದ್ದಾರೆ ಎಂಬ ಬಗ್ಗೆ ಬಹಳ ಉಪಯುಕ್ತವಾದ ಮಾಹಿತಿಯನ್ನು ನೀಡುತ್ತವೆ. ಅರ್ಥವ್ಯವಸ್ಥೆಯು ಯಾವ ದಿಕ್ಕಿನಲ್ಲಿ ಸಾಗಿದೆ ಎಂಬುದನ್ನೂ ಅವು ಹೇಳುತ್ತವೆ. ಮನೆಬಳಕೆಯ ವೆಚ್ಚಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಈಚೆಗೆ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು, ಕುಟುಂಬಗಳ ಸರಾಸರಿ ತಲಾವಾರು ಮಾಸಿಕ ವೆಚ್ಚದಲ್ಲಿ ಹೆಚ್ಚಳ ಆಗಿರುವುದನ್ನು ತೋರಿಸುತ್ತಿವೆ. ಅಲ್ಲದೆ, ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವವರ ವೆಚ್ಚದಲ್ಲಿನ ಅಂತರವು ಕಡಿಮೆ ಆಗಿರುವುದನ್ನು ಕೂಡ ಈ ಅಂಕಿ–ಅಂಶಗಳು ತೋರಿಸಿವೆ. ಆಹಾರ ವಸ್ತುಗಳ ಮೇಲಿನ ವೆಚ್ಚವು ಕೆಲವು ವರ್ಷಗಳಿಂದ ಕಡಿಮೆ ಆಗುತ್ತಿತ್ತು. ಆದರೆ ಅದು ಮತ್ತೆ ಹೆಚ್ಚಾಗಿರುವುದನ್ನು ಕೂಡ ಹೊಸ ವರದಿಯು ತೋರಿಸಿದೆ. 2023– 24ರಲ್ಲಿ ಗ್ರಾಮೀಣ ಪ್ರದೇಶಗಳ ಸರಾಸರಿ ಮಾಸಿಕ ತಲಾವಾರು ಮನೆಬಳಕೆ ವೆಚ್ಚವು ₹4,122ಕ್ಕೆ ಏರಿಕೆ ಆಗಿದೆ. ಇದು ಹಿಂದಿನ ವರ್ಷದಲ್ಲಿ ₹3,773 ಆಗಿತ್ತು. ನಗರ ಪ್ರದೇಶಗಳಲ್ಲಿ ಇದು 2022– 23ರಲ್ಲಿ ₹6,459 ಇದ್ದದ್ದು 2023– 24ರಲ್ಲಿ ₹6,996ಕ್ಕೆ ಹೆಚ್ಚಳವಾಗಿದೆ. ಮನೆಬಳಕೆ ವೆಚ್ಚದಲ್ಲಿ ಆಗಿರುವ ಏರಿಕೆಗೆ ದೊಡ್ಡ ಕಾರಣ ಹಣದುಬ್ಬರದಲ್ಲಿನ ಏರಿಕೆ. ಹಣದುಬ್ಬರದ ಏರಿಕೆಯನ್ನು ಲೆಕ್ಕಕ್ಕೆ ಪರಿಗಣಿಸಿದ ನಂತರದಲ್ಲಿ, ಮನೆಬಳಕೆ ವೆಚ್ಚದಲ್ಲಿ ಆಗಿರುವ ಹೆಚ್ಚಳವು ಶೇಕಡ 3.5ರಷ್ಟು ಆಗುತ್ತದೆ. ಆದರೆ ಈ ಏರಿಕೆಯು ದೇಶದ ಜಿಡಿಪಿ ಬೆಳವಣಿಗೆ ದರವಾದ ಶೇಕಡ 8.2ಕ್ಕಿಂತ ಬಹಳ ಕಡಿಮೆ ಎಂಬುದನ್ನು ಗಮನಿಸಬೇಕು.



ನಗರ ಮತ್ತು ಗ್ರಾಮೀಣ ಪ್ರದೇಶಗಳ ತಲಾವಾರು ವೆಚ್ಚದಲ್ಲಿನ ಅಂತರ ತಗ್ಗಿರುವುದು ಒಳ್ಳೆಯ ಲಕ್ಷಣ. ಆದರೆ ಇದನ್ನು ಹೀಗೇ ಕಾಪಾಡಿಕೊಳ್ಳಬೇಕಾಗಿದೆ

ಒಟ್ಟು ವೆಚ್ಚದಲ್ಲಿ ಆಹಾರ ವಸ್ತುಗಳ ಮೇಲಿನ ವೆಚ್ಚದ ಪ್ರಮಾಣವು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಳ ಕಂಡಿದೆ. ಗ್ರಾಮೀಣ ಪ್ರದೇಶಗಳಲ್ಲಿ ಇದು ಶೇ 46.4ರಷ್ಟು ಇದ್ದದ್ದು ಶೇ 47.04ಕ್ಕೆ ಹೆಚ್ಚಳ ಕಂಡಿದೆ. ನಗರ ಪ್ರದೇಶಗಳಲ್ಲಿ ಇದು ಶೇ 39.17ರಷ್ಟು ಇದ್ದದ್ದು, ಶೇ 39.48ಕ್ಕೆ ಏರಿಕೆ ಆಗಿದೆ. 2011– 12ರಲ್ಲಿ ಆಹಾರ ವಸ್ತುಗಳ ಮೇಲಿನ ವೆಚ್ಚದ ಪ್ರಮಾಣಕ್ಕಿಂತ ಇದು ಕಡಿಮೆಯೇ ಆದರೂ, ಮನೆಬಳಕೆಯ ವೆಚ್ಚದ ಮೇಲೆ ಹಣದುಬ್ಬರದ ಪರಿಣಾಮವು ಹೇಗಿದೆ ಎಂಬುದನ್ನು ಇದು ತೋರಿಸುತ್ತಿದೆ. 2011– 12ರಲ್ಲಿ ಗ್ರಾಮೀಣ ಪ್ರದೇಶಗಳ ತಿಂಗಳ ಮನೆಬಳಕೆಯ ಸರಾಸರಿ ಖರ್ಚಿನಲ್ಲಿ ಆಹಾರ ವಸ್ತುಗಳ ಪ್ರಮಾಣವು ಶೇಕಡ 52.9ರಷ್ಟು ಇತ್ತು. ನಗರ ಪ್ರದೇಶಗಳಲ್ಲಿ ಇದು ಶೇ 42.62ರಷ್ಟು ಇತ್ತು. ಈ ದೀರ್ಘ ಅವಧಿಯಲ್ಲಿ ಆಹಾರ ವಸ್ತುಗಳಿಗೆ ಮಾಡುವ ವೆಚ್ಚದಲ್ಲಿ ಇಳಿಕೆ ಆಗಿರುವುದು ಒಳ್ಳೆಯದು ಎಂದೇ ಪರಿಗಣಿತ ವಾಗುತ್ತದೆ. ಏಕೆಂದರೆ, ಹೀಗೆ ಆದಾಗ ಜನರಿಗೆ ಇತರ ಅಗತ್ಯಗಳಾದ ಶಿಕ್ಷಣ, ಸಾರಿಗೆ, ಮನರಂಜನೆಯ ಮೇಲೆ ವೆಚ್ಚ ಮಾಡಲು ಹೆಚ್ಚು ಹಣ ಉಳಿದುಕೊಳ್ಳುತ್ತದೆ. ಆದರೆ, ತೀರಾ ಈಚಿನ ದಿನಗಳಲ್ಲಿ ಆಹಾರ ವಸ್ತುಗಳಿಗಾಗಿ ಹೆಚ್ಚು ವೆಚ್ಚ ಮಾಡಬೇಕಾದ ಸ್ಥಿತಿ ಬಂದಿರುವುದು ಕಳವಳಕಾರಿ ಸಂಗತಿ. ಪರಿಸ್ಥಿತಿ ಇದೇ ರೀತಿ ಮುಂದುವರಿದರೆ, ಕುಟುಂಬಗಳ ಬಜೆಟ್‌ನಲ್ಲಿ ಇತರ ಅಗತ್ಯಗಳಿಗೆ ಮಾಡುವ ವೆಚ್ಚದ ಪ್ರಮಾಣವು ಇನ್ನೂ ಕಡಿಮೆ ಆಗಬಹುದು.

ನಗರ ಹಾಗೂ ಗ್ರಾಮೀಣ ಪ್ರದೇಶಗಳ ಜನರ ಮನೆಬಳಕೆ ವೆಚ್ಚದಲ್ಲಿನ ಅಂತರವು ಕಡಿಮೆ ಆಗುತ್ತಿರುವುದು ಈ ಬಾರಿಯ ವರದಿಯಲ್ಲಿ ಇರುವ ಇನ್ನೊಂದು ಮುಖ್ಯವಾದ ಅಂಶ. ತಿಂಗಳ ಮನೆಬಳಕೆ ವೆಚ್ಚದ ಏರಿಕೆಯು ಗ್ರಾಮೀಣ ಪ್ರದೇಶಗಳಲ್ಲಿ ನಗರ ಪ್ರದೇಶಗಳಿಗಿಂತ ಹೆಚ್ಚು ತೀವ್ರವಾಗಿ ಇತ್ತು. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ತಲಾವಾರು ವೆಚ್ಚದಲ್ಲಿನ ಅಂತರವು ಶೇ 84ರಷ್ಟು ಇದ್ದದ್ದು ದಶಕದ ಅವಧಿಯಲ್ಲಿ ಶೇ 70ಕ್ಕೆ ತಗ್ಗಿದೆ. ಗ್ರಾಮೀಣ ಪ್ರದೇಶಗಳ ಜನರ ಆದಾಯದಲ್ಲಿ ಏರಿಕೆ, ಡಿಜಿಟಲ್ ಪಾವತಿ ವ್ಯವಸ್ಥೆಗಳು ನೆಲೆಯನ್ನು ಹೆಚ್ಚು ಮಾಡಿಕೊಂಡಿದ್ದು ಹಾಗೂ ಗ್ರಾಮೀಣ ಸಮುದಾಯಗಳ ಆಕಾಂಕ್ಷೆಗಳು ಇನ್ನಷ್ಟು ಹಿಗ್ಗಿರುವುದು ಇದಕ್ಕೆ ಕಾರಣಗಳಾಗಿರಬಹುದು. ಇದು ಕೂಡ ಒಂದು ಒಳ್ಳೆಯ ಲಕ್ಷಣ. ಆದರೆ ಇದನ್ನು ಹೀಗೇ ಕಾಪಾಡಿಕೊಳ್ಳುವ ಸವಾಲು ಇದೆ.

ದಿನದ ಟ್ವೀಟ್




ನಾವು ಸನ್ನಡತೆ ಕಲಿಯುವುದೆಂದು?
ಪ್ರತಿ ವರ್ಷವೂ ಇದೇ ಕತೆ ಪುನರಾವರ್ತನೆಯಾಗುತ್ತದೆ. ಇದು, ಜನರ ಮನಃಸ್ಥಿತಿಯನ್ನು ತೋರಿಸುತ್ತದೆ.

(ಹೊಸ ವರ್ಷಾಚರಣೆ ಬಳಿಕ ಬೆಂಗಳೂರಿನ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೃಹತ್ ಪ್ರಮಾಣದಲ್ಲಿ ತ್ಯಾಜ್ಯ ಕಂಡುಬಂದಿದ್ದಕ್ಕೆ ಪ್ರತಿಕ್ರಿಯೆ)

ವಿಕ್ರಮ್ ಮೈಲಾರ್ ವಿಜಯ್, ಬೆಂಗಳೂರು ನವನಿರ್ಮಾಣ ಪಕ್ಷದ ಮುಖಂಡ

ಕಿಡಿನುಡಿ



ಪ್ರಿಯಾಂಕ್ ಖರ್ಗೆ ಅವರಿಂದ ರಾಜೀನಾಮೆ ಪಡೆಯುವ ಧೈರ್ಯ ಮುಖ್ಯಮಂತ್ರಿಗೆ ಇಲ್ಲ. ಹಾಗೆ ಮಾಡಿದರೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಂದ ತಮ್ಮ ಕುರ್ಚಿ ಹೋಗುತ್ತದೆ ಎಂಬುದು ಸಿದ್ದರಾಮಯ್ಯ ಅವರಿಗೆ ಗೊತ್ತಿದೆ.

ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಭಾನುವಾರ, 2-1-2000

• ಸಮಸ್ಯೆಯಾಗದ ವೈ2ಕೆ 'ಗುಮ್ಮ'

ನವದೆಹಲಿ, ಜ. 1 (ಪಿಟಿಐ): ನಾಗರಿಕ ವಿಮಾನಯಾನ, ರೈಲ್ವೆ, ರಕ್ಷಣೆ, ಹಣಕಾಸು, ವಿದ್ಯುತ್ ಹಾಗೂ ದೂರಸಂಪರ್ಕ ಇಲಾಖೆ ಸೇರಿದಂತೆ ಎಲ್ಲ 11 ಪ್ರಮುಖ ವಲಯಗಳಲ್ಲಿನ ಕಂಪ್ಯೂಟರ್ ವ್ಯವಸ್ಥೆಗಳು ಯಾವುದೇ ತೊಂದರೆಯಿಲ್ಲದೆ ಹೊಸ ಸಹಸ್ರಮಾನಕ್ಕೆ ಅಡಿಯಿರಿಸಿವೆ ಎಂದು ಉನ್ನತ ಸರ್ಕಾರಿ ಅಧಿಕಾರಿಯೊಬ್ಬರು ಇಂದು ಹೇಳಿದ್ದಾರೆ.

ಬಂದರು, ದೂರಸಂಪರ್ಕ, ಬ್ಯಾಂಕಿಂಗ್ ಹಾಗೂ ಅಣ್ವಸ್ತ್ರ ಘಟಕಗಳಂತಹ ಪ್ರಮುಖ ಕ್ಷೇತ್ರಗಳು 'ವೈ2ಕೆ' ಕಾಟದಿಂದ ತೊಂದರೆಗೀಡಾಗಿಲ್ಲ ಎಂದು ಮಾಹಿತಿ ತಂತ್ರಜ್ಞಾನ ಕಾರ್ಯದರ್ಶಿ ಪಿ.ವಿ.ಜಯಕೃಷ್ಣನ್ ಅವರು ಸುದ್ದಿಗಾರರಿಗೆ ಹೇಳಿದರು.

ವಿವಿಧ ರಾಜ್ಯಗಳಿಂದ ಬಂದಿರುವ ವರದಿಗಳು ಅಲ್ಲಿ 'ವೈ2ಕೆ' ಸಮಸ್ಯೆಯಿಂದ ತೊಂದರೆ ಎದುರಾಗಿಲ್ಲ ಎಂಬುದನ್ನು ಸೂಚಿಸಿವೆ. ಕೊಹಿಮಾ, ಜೈಪುರ ಸೇರಿದಂತೆ ವಿವಿಧ ರಾಜ್ಯಗಳ ರಾಜಧಾನಿಗಳಲ್ಲಿ ಪರಿಸ್ಥಿತಿ ಸಹಜವಾಗಿದೆ ಎಂದು ಅವರು ತಿಳಿಸಿದರು.

ದೇಶದಾದ್ಯಂತ ಎಲ್ಲ 11 ಪ್ರಮುಖ ವಲಯಗಳ ಕಂಪ್ಯೂಟರ್ ವ್ಯವಸ್ಥೆಗಳು ಯಾವುದೇ ತೊಡಕಿಲ್ಲದೆ ಕಾರ್ಯನಿರ್ವಹಿಸುತ್ತಿವೆ ಎಂದು ರಾಷ್ಟ್ರೀಯ ಮಾಹಿತಿ ಕೇಂದ್ರಕ್ಕೆ ಬಂದಿರುವ ವರದಿಗಳು ತಿಳಿಸಿವೆ.

• ದೆಹಲಿಗೆ ಮರಳಿದ ಅಪಹೃತ ವಿಮಾನ

ನವದೆಹಲಿ, ಜ. 1 (ಪಿಟಿಐ): ಅಫ್ಗಾನಿಸ್ತಾನದ ಕಂದಹಾರ್‌ನಲ್ಲಿ ಒಂದು ವಾರ ಅಪಹರಣಕಾರರ ಹಿಡಿತದಲ್ಲಿದ್ದ ಇಂಡಿಯನ್ ಏರ್‌ಲೈನ್ಸ್‌ನ ವಿಮಾನ ಇಂದು ನವದೆಹಲಿ ತಲುಪಿತು. ವಿಮಾನದಲ್ಲಿ ಅಪಹರಣಕಾರರು ಬಿಟ್ಟು ಹೋದ ಬಾಂಬ್ ಮತ್ತು ಶಸ್ತ್ರಾಸ್ತ್ರಗಳು ಇದ್ದವೆಂದು ಪೈಲಟ್ ಪುರಿ ತಿಳಿಸಿದರು.

ಅಪಹರಣದ ಬಿಕ್ಕಟ್ಟು ಶುಕ್ರವಾರವೇ ಅಂತ್ಯಗೊಂಡಿತ್ತಾದರೂ ತಾಂತ್ರಿಕ ತೊಂದರೆ ಉದ್ಭವಿಸಿದ್ದರಿಂದ ವಿಮಾನವನ್ನು ಅಲ್ಲಿಯೇ ಬಿಡಲಾಗಿತ್ತು. ಕಳೆದ ರಾತ್ರಿ ಅದನ್ನು ದುರಸ್ತಿಪಡಿಸಲಾಯಿತು.

50 ವರ್ಷಗಳ ಹಿಂದೆ

ಗುರುವಾರ, 2-1-1975

• ಮೈತ್ರಿಕೂಟ ರಚನೆಯ ಅಧಿಕಾರ ನಾಯಕರಿಗೆ

ಕಲ್ಲೀಕೋಟೆ, ಜ. 1– ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಮೈತ್ರಿಕೂಟ ರಚಿಸುವ ಅಧಿಕಾರವನ್ನು ತನ್ನ ನಾಯಕರಿಗೆ ನೀಡುವ ರಾಜಕೀಯ ನಿರ್ಣಯ ಒಂದನ್ನು ಸೋಷಲಿಸ್ಟ್ ಪಕ್ಷದ ರಾಷ್ಟ್ರೀಯ ಸಮ್ಮೇಳನವು ಇಂದು ಇಲ್ಲಿ ಅಂಗೀಕರಿಸಿತು.

ಈ ರೀತಿ ಏರ್ಪಡಿಸಿಕೊಳ್ಳುವ ರಾಜಕೀಯ ಮೈತ್ರಿಕೂಟಗಳು 1971ರಲ್ಲಿದ್ದ 'ಮಹಾಮೈತ್ರಿ' ಕೂಟದಂತಿರದೆ ಆಯಾ ರಾಜ್ಯಗಳಲ್ಲಿರುವ ಪ್ರಸಕ್ತ ರಾಜಕೀಯ ಬೆಳವಣಿಗೆಯನ್ನು ಅವಲಂಬಿಸಿರಬೇಕೆಂಬ ಸ್ಪಷ್ಟ ನಿಲುವನ್ನು ದೀರ್ಘ ಚರ್ಚೆಯ ನಂತರ ಸಮ್ಮೇಳನವು ವ್ಯಕ್ತಪಡಿಸಿತು.

ಸಮ್ಮೇಳನದಲ್ಲಿ ಮಂಡಿಸಿದ 60ಕ್ಕೂ ಹೆಚ್ಚಿನ ತಿದ್ದುಪಡಿಗಳಲ್ಲಿ ಬಹುತೇಕ ತಿದ್ದುಪಡಿಗಳು, ಚುನಾವಣಾ ಸಂಕೇತದಂತಹ ವಿಷಯಗಳಲ್ಲಿ ರಾಷ್ಟ್ರದಾದ್ಯಂತ ಏಕರೂಪದ ನೀತಿ ಇರಬೇಕೆಂದು ಜಯಪ್ರಕಾಶ ನಾರಾಯಣ್ ಅವರು ಮಾಡಿದ ಸಲಹೆಯನ್ನು ಪುಷ್ಟೀಕರಿಸಿದವು.

• ಮಹಿಳೆ ದುಡಿತದ ಬೆಲೆ ಅರ್ಧ ಮಾತ್ರ

ನವದೆಹಲಿ, ಜ. 1– ಒಂದೇ ತರಹದ ಉದ್ಯೋಗದಲ್ಲಿ ಗಂಡಸರಿಗಿಂತ ಇಂದು ಉದ್ಯೋಗಿ ಮಹಿಳೆಯ ಸಂಪಾದನೆ ಅರ್ಧದಷ್ಟು ಮಾತ್ರ ಎನ್ನಬಹುದು.

ಆಕೆಯ ಮನೆಗೆಲಸವನ್ನೂ ಲೆಕ್ಕಕ್ಕೆ ತೆಗೆದುಕೊಂಡಾಗ, ಪ್ರತಿವಾರ ಆಕೆಯು ಗಂಡಸಿಗಿಂತ ಕೆಲವೊಮ್ಮೆ ಎರಡುಪಟ್ಟು ಹೆಚ್ಚು ದುಡಿಯುತ್ತಾಳೆ. ಅಂತರರಾಷ್ಟ್ರೀಯ ಕಾರ್ಮಿಕ ಕಚೇರಿಯ ವರದಿಯಿಂದ ಈ ವಿಷಯ ವ್ಯಕ್ತವಾಗಿದೆ.

ವಿಶ್ವದ ಒಟ್ಟು 1637 ದಶಲಕ್ಷ ಕಾರ್ಮಿಕ ಪಡೆಯಲ್ಲಿ ಉದ್ಯೋಗಿ ಮಹಿಳೆಯರ ಸಂಖ್ಯೆ ಸುಮಾರು 562 ದಶಲಕ್ಷ. ಒಂದೇ ಮಾತಿನಲ್ಲಿ ಹೇಳುವುದಾದರೆ, ಜಗತ್ತಿನಲ್ಲಿ ಮೂವರು ಮಹಿಳೆಯರಲ್ಲಿ ಒಬ್ಬರು ಉದ್ಯೋಗಿ.

ಚೀನಾ– ಅಮೆರಿಕ ಸಂಬಂಧ: ಭಾರತ ಮೈಮರೆಯುವಂತಿಲ್ಲ

ಟ್ರಂಪ್ 2.0: ಅಚ್ಚರಿ, ಇರಲಿ ಎಚ್ಚರ



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಡೊನಾಲ್ಡ್ ಟ್ರಂಪ್ ಅಚ್ಚರಿಯ ಹೆಜ್ಜೆಯನ್ನು ಇಟ್ಟಿದ್ದಾರೆ. ಇದೇ 20ರಂದು ನಡೆಯುವ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಚೀನಾದ ವರಿಷ್ಠ ಷಿ ಜಿನ್‌ಪಿಂಗ್ ಮತ್ತು ಇತರ ಕೆಲವು ದೇಶಗಳ ಮುಖ್ಯಸ್ಥರನ್ನು ಆಹ್ವಾನಿಸಿದ್ದಾರೆ. ಇದುವರೆಗೆ ಅಮೆರಿಕದ ಅಧ್ಯಕ್ಷರ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಇತರ ದೇಶಗಳ ನಾಯಕರು ಭಾಗವಹಿಸಿದ ಉದಾಹರಣೆ ಇಲ್ಲ. ಮೊದಲ ಅವಧಿಗಿಂತ ಟ್ರಂಪ್ 2.0 ಭಿನ್ನವಾಗಿ ಇರಲಿದೆ ಎಂಬುದಕ್ಕೆ ಇದು ಸೂಚನೆ ಇರಬಹುದು.

2017ರ ಟ್ರಂಪ್ ಮತ್ತು 2025ರ ಟ್ರಂಪ್ ಹೇಗೆ ಭಿನ್ನ ಎಂದು ನೋಡಿದರೆ, ಟ್ರಂಪ್ ಮೊದಲ ಆಡಳಿತಾವಧಿಯಲ್ಲಿ ರಾಜಕೀಯವಾಗಿ ಅನನುಭವಿಯಾಗಿದ್ದರು. ಅಮೆರಿಕದಲ್ಲಿ ಯಾವುದೂ ಸರಿ ಇಲ್ಲ, ಎಲ್ಲವನ್ನೂ ಬದಲಿಸುತ್ತೇನೆ ಎಂಬ ಧೋರಣೆ ಅವರ ಮಾತಿನಲ್ಲಿ ಕಾಣುತ್ತಿತ್ತು. ವ್ಯವಸ್ಥೆಯನ್ನು ಬುಡಸಮೇತ ಬದಲಾಯಿಸುವ ಹುಂಬತನ ಅವರ ನಡೆಯಲ್ಲಿ ವ್ಯಕ್ತವಾಗುತ್ತಿತ್ತು. ಚೀನಾ ಎಂಬ ಗುಮ್ಮನನ್ನು ತೋರಿಸಿ ಅವರು ಜನರನ್ನು ಆಕರ್ಷಿಸಿದ್ದರು. ನಂತರ ಚೀನಾದ ವಿರುದ್ಧ ವಾಣಿಜ್ಯ ಸಮರ ಸಾರಿದ್ದರು. ಕೊರೊನಾ ಜಾಗತಿಕ ಮಹಾಮಾರಿಯಾಗಿ ಉಲ್ಬಣಗೊಂಡಾಗ, ಚೀನಾ ಮತ್ತು ವಿಶ್ವ ಆರೋಗ್ಯ ಸಂಸ್ಥೆ ಮುಖ್ಯಸ್ಥರ ನಡುವಿನ ಸಖ್ಯವೇ ಇದಕ್ಕೆ ಕಾರಣ ಎಂದು ದೂರಿದ್ದರು. ಹಸಿರು ಇಂಧನ ಬಳಕೆಯ ಕುರಿತು ಅಸಡ್ಡೆಯ ನಿಲುವು ತಾಳಿದ್ದರು. ಟಿಕ್‌ಟಾಕ್ ಎಂಬ ಮೊಬೈಲ್ ಅಪ್ಲಿಕೇಶನ್‌ನಿಂದ ಅಮೆರಿಕದ ರಕ್ಷಣೆಗೆ ಅಪಾಯವಿದೆ ಎಂದು, ಅದರ ನಿಷೇಧಕ್ಕೆ ವಕಾಲತ್ತು ವಹಿಸಿದ್ದರು.

ಆದರೆ ಇದೀಗ ಕೆಲವು ವಿಷಯಗಳಲ್ಲಾದರೂ ಅವರ ನಿಲುವು ಬದಲಾದಂತಿದೆ. ಟಿಕ್‌ಟಾಕ್ ಅನ್ನು ಸಂಪೂರ್ಣ ನಿಷೇಧಿಸುವ ಕುರಿತು ತಕ್ಷಣಕ್ಕೆ ತೀರ್ಮಾನಿಸುವುದು ಬೇಡ ಎಂದು ಅವರು ಅಮೆರಿಕದ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿರುವುದು ವರದಿಯಾಗಿದೆ. ಎಚ್-1ಬಿ ವೀಸಾ ಕುರಿತು ತಮ್ಮ ಆಪ್ತ ಮತ್ತು ಉದ್ಯಮಿ ಎಲಾನ್ ಮಸ್ಕ್ ಅವರು ಹೊಂದಿರುವ ನಿಲುವನ್ನು ಟ್ರಂಪ್ ಬೆಂಬಲಿಸಿದ್ದಾರೆ. ಹಸಿರು ಇಂಧನದ ಬಳಕೆಯನ್ನು ಉತ್ತೇಜಿಸಲು ಅವರು ಕ್ರಮ ಕೈಗೊಂಡರೆ ಅಚ್ಚರಿಯಿಲ್ಲ. ಈ ಎಲ್ಲ ಸಂಗತಿಗಳೂ ಟ್ರಂಪ್ ತಮ್ಮ ಎರಡನೆಯ ಅವಧಿಯಲ್ಲಿ ಭಿನ್ನಹಾದಿಯನ್ನು ತುಳಿಯಲಿದ್ದಾರೆ ಎಂಬುದನ್ನು ಸೂಚಿಸುತ್ತಿವೆ.

ಹಾಗಾದರೆ, ಚೀನಾ ವಿಷಯದಲ್ಲೂ ಟ್ರಂಪ್ ಅವರ ನಿಲುವು ಬದಲಾಗಬಹುದೇ? ಟ್ರಂಪ್ ಓರ್ವ ವಾಸ್ತವವಾದಿ. ಕೆಲವು ಜಾಗತಿಕ ಸಮಸ್ಯೆಗಳಿಗೆ ಉತ್ತರ ಹುಡುಕಬೇಕಾದರೆ ಅಮೆರಿಕ ಮತ್ತು ಚೀನಾ ಜೊತೆಯಾಗಿ ಹೆಜ್ಜೆ ಹಾಕಬೇಕು ಎಂಬುದು ಅವರಿಗೆ ತಿಳಿಯದ್ದಲ್ಲ. ಹಾಗಾಗಿ, ವಾಣಿಜ್ಯಿಕ ವ್ಯವಹಾರದ ವಿಷಯದಲ್ಲಿನ 'ಚೀನಾ ವಿರೋಧ'ವು ಅವರ ನಿಲುವಿನ ಒಂದು ಭಾಗ ಅಷ್ಟೇ.

ಉಕ್ರೇನ್ ಯುದ್ಧವನ್ನು ಕೊನೆಗೊಳಿಸುವುದು ಹೇಗೆ, ಇರಾನ್- ಇಸ್ರೇಲ್ ಬಿಕ್ಕಟ್ಟಿಗೆ ಉತ್ತರವೇನು, ಕೃತಕ ಬುದ್ಧಿಮತ್ತೆಯ ಅಭಿವೃದ್ಧಿ ಮತ್ತು ಬಳಕೆ ಯಾವ ಪರಿಧಿಯೊಳಗೆ ಇರಬೇಕು, ಹವಾಮಾನ ಬದಲಾವಣೆ ತಡೆಗೆ ಯಾವ ಕ್ರಮ ಸೂಕ್ತ, ಆರ್ಥಿಕ ಕುಸಿತ ಮತ್ತು ರಾಜಕೀಯ ಅರಾಜಕತೆ ಉಂಟು ಮಾಡುತ್ತಿರುವ ಸಮಸ್ಯೆಗಳಿಗೆ ಪರಿಹಾರವೇನು ಎಂಬ ಕುರಿತು ಹಿರಿಯಣ್ಣ ಅಮೆರಿಕ ಏಕಮುಖ ನಿಲುವು ತಳೆಯಲು ಸಾಧ್ಯವಿಲ್ಲ.

ಉಕ್ರೇನ್ ಯುದ್ಧದ ವಿಷಯದಲ್ಲಿ ಪರೋಕ್ಷವಾಗಿ ರಷ್ಯಾಕ್ಕೆ ಬೆಂಬಲವಾಗಿ ನಿಂತಿರುವುದರ ಜೊತೆಗೆ, ಉತ್ತರ ಕೊರಿಯಾವನ್ನು ನಿಯಂತ್ರಿಸಲು ಚೀನಾ ಯಾವುದೇ ಉಪಕ್ರಮ ಕೈಗೊಂಡಿಲ್ಲ ಎಂಬ ಸಿಟ್ಟು ಅಮೆರಿಕಕ್ಕಿದೆ. ಅತ್ತ ಇರಾನ್ ಬಗಲಿಗೆ ನಿಂತಿರುವುದು ಕೂಡ ರಷ್ಯಾ ಮತ್ತು ಚೀನಾ. ಹಾಗಾಗಿ, ಚೀನಾದೊಂದಿಗೆ ಸಂಬಂಧವನ್ನು ಸರಳೀಕರಿಸಿಕೊಂಡರೆ, ರಷ್ಯಾ ಮತ್ತು ಇರಾನನ್ನು ಏಕಾಂಗಿಯಾಗಿಸಬಹುದು. ಒಂದು ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಹೊಡೆದಂತೆ!

ಚೀನಾವು ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರದಲ್ಲಿ ದಾಪುಗಾಲು ಇಟ್ಟಿದೆ. ಚೀನಾವನ್ನು ಹೊರಗಿಟ್ಟು ಎಐ ಬಳಕೆಗೆ ಒಂದು ಪರಿಧಿ ನಿರ್ಧರಿಸಲು ಸಾಧ್ಯವಿಲ್ಲ. 2024ರ ನವೆಂಬರಿನಲ್ಲಿ ಏಷ್ಯಾ- ಪೆಸಿಫಿಕ್ ಆರ್ಥಿಕ ಸಹಕಾರ ವೇದಿಕೆಯ ಸಭೆಯಲ್ಲಿ ಭಾಗವಹಿಸಿದ್ದ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಮತ್ತು ಚೀನಾದ ಷಿ ಜಿನ್‌ಪಿಂಗ್, ಪರಮಾಣು ಶಸ್ತ್ರಾಸ್ತ್ರಗಳನ್ನು ಬಳಸುವ ನಿರ್ಧಾರ ಮಾನವ ನಿಯಂತ್ರಣದಲ್ಲೇ ಇರಬೇಕು ಎಂಬುದನ್ನು ಅನುಮೋದಿಸಿದ್ದಾರೆ, ಅರ್ಥಾತ್ ಅಣ್ವಸ್ತ್ರ ಬಳಕೆಯ ಕುರಿತ ನಿರ್ಧಾರವನ್ನು ಕೃತಕ ಬುದ್ಧಿಮತ್ತೆ ತಳೆಯುವಂತೆ ಆಗಬಾರದು ಎಂಬುದನ್ನು ಒಪ್ಪಿದ್ದಾರೆ. ಇದು ಮೊದಲ ಹೆಜ್ಜೆ. ಟ್ರಂಪ್ ಮುಂದಡಿ ಇಡಬೇಕಿದೆ.

ಅಮೆರಿಕ ಮತ್ತು ಚೀನಾ ಇಂಗಾಲ ಹೊರಸೂಸುವ ಪ್ರಮುಖ ರಾಷ್ಟ್ರಗಳು ಕೂಡ ಹೌದು. ಹವಾಮಾನ ಬದಲಾವಣೆ ತಡೆಗಟ್ಟುವ ದಿಸೆಯಲ್ಲಿ ಈ ರಾಷ್ಟ್ರಗಳು ಒಮ್ಮತದ ಹೆಜ್ಜೆ ಇಡಬೇಕಾದ ಅವಶ್ಯಕತೆ ಇದೆ. ಜೊತೆಗೆ ಆರ್ಥಿಕ ಕುಸಿತ ಮತ್ತು ರಾಜಕೀಯ ಅರಾಜಕತೆ ಹಲವು ದೇಶಗಳನ್ನು ಬಾಧಿಸುತ್ತಿವೆ. ಮಧ್ಯಪ್ರಾಚ್ಯದ ಲಿಬಿಯಾ, ಯೆಮನ್, ಸುಡಾನ್, ಲೆಬನಾನ್, ಸಿರಿಯಾ ಮತ್ತು ಸೊಮಾಲಿಯಾದಂತಹ ರಾಷ್ಟ್ರಗಳಿಗೆ ಈ ಸಮಸ್ಯೆ ಸೀಮಿತವಾಗಿಲ್ಲ. ಚೀನಾದೊಂದಿಗೆ ಬೆಸೆದುಕೊಂಡ ವೆನಿಜುವೆಲಾ, ಜಿಂಬಾಂಬ್ವೆ, ಮ್ಯಾನ್ಮಾರ್, ಶ್ರೀಲಂಕಾ, ಅರ್ಜೆಂಟೀನಾ, ಕೀನ್ಯಾ, ಮಲೇಷ್ಯಾ, ಪಾಕಿಸ್ತಾನದಂತಹ ರಾಷ್ಟ್ರಗಳೂ ದೃಢವಾಗಿ ನಿಲ್ಲುವ ಸಾಮರ್ಥ್ಯ ಹೊಂದಿಲ್ಲ. ಈ ಪೈಕಿ ಹಲವು ರಾಷ್ಟ್ರಗಳಿಗೆ ಚೀನಾ ದೊಡ್ಡಮಟ್ಟದ ಸಾಲ ನೀಡಿದೆ ಮತ್ತು ಅದನ್ನು ಹಿಂಪಡೆಯಲು ನಿಡುಸುಯ್ಯುತ್ತಿದೆ. ಈ ವಿಷಯದಲ್ಲಿ ಅಮೆರಿಕದೊಂದಿಗೆ ಒಂದು ಒಪ್ಪಂದಕ್ಕೆ ಬರುವ ಜರೂರು ಚೀನಾಕ್ಕಿದೆ.



ಮೊದಲ ಅವಧಿಯಲ್ಲಿ ಟ್ರಂಪ್, ಚೀನಾದ ಉತ್ಪನ್ನಗಳಿಗೆ ಸುಂಕ ಏರಿಸುವ ಮಾತನ್ನಾಡುತ್ತಿದ್ದರೆ, ದೇಶಿ ತಂತ್ರಜ್ಞಾನ ಅಭಿವೃದ್ಧಿಪಡಿಸುವ ದಿಸೆಯಲ್ಲಿ ಚೀನಾ ಹೆಜ್ಜೆ ಇರಿಸಿತ್ತು. ವಿದ್ಯುತ್‌ಚಾಲಿತ ಕಾರು ಮತ್ತು ರೋಬೊಟಿಕ್ ತಂತ್ರಜ್ಞಾನದಲ್ಲಿ ಸ್ವಾವಲಂಬನೆ ಸಾಧಿಸಿತು. ಅಮೆರಿಕಕ್ಕೆ ಪ್ರತಿಸ್ಪರ್ಧಿಯಾಗಿ ಬೆಳೆಯಿತು. ಚೀನಾದ ರಫ್ತು ಸಾಮರ್ಥ್ಯ ಹೆಚ್ಚಿತು. ಅತ್ಯಾಧುನಿಕ, ಸುಧಾರಿತ ಉತ್ಪನ್ನಗಳನ್ನು ಮಾರುಕಟ್ಟೆಗೆ ತುಂಬಲು ಚೀನಾ ಸಜ್ಜಾಯಿತು. ಹಾಗಾಗಿ, ಟ್ರಂಪ್ ತಮ್ಮ ಎರಡನೆಯ ಅವಧಿಯಲ್ಲಿ ಬೇರೆಯದೇ ಚೀನಾವನ್ನು ಎದುರಿಸಬೇಕಿದೆ.

ಈ ಸಂಗತಿಗಳನ್ನು ಅರಿತಿರುವ ಟ್ರಂಪ್ 1972ರ ಅವಕಾಶಕ್ಕಾಗಿ ಮತ್ತೊಮ್ಮೆ ಎದುರು ನೋಡುತ್ತಿದ್ದರೆ ಅಚ್ಚರಿಯಿಲ್ಲ! 1972ರಲ್ಲಿ ರಿಚರ್ಡ್ ನಿಕ್ಸನ್ ಚೀನಾಕ್ಕೆ ಭೇಟಿಯಿತ್ತು ಮಾವೋ ಜೆಡಾಂಗ್ ಅವರ ಕೈಕುಲುಕಿದ್ದರು. ಆಗ ರಷ್ಯಾವನ್ನು ಅಂಕೆಯಲ್ಲಿಡಲು ಚೀನಾದ ಸಖ್ಯ ಅಮೆರಿಕಕ್ಕೆ ಬೇಕಿತ್ತು. ಇದೀಗ ಅಮೆರಿಕ ಮತ್ತು ಚೀನಾ ಒಂದೇ ಮೇಜಿಗೆ ಬಂದರೆ, ಜಾಗತಿಕ ಸಮಸ್ಯೆಗಳಿಗೆ ಉತ್ತರ ಹುಡುಕುವುದು ಸುಲಭ ಎಂಬ ಆಲೋಚನೆ, ಟ್ರಂಪ್ ಅವರು ಷಿ ಜಿನ್‌ಪಿಂಗ್ ಅವರನ್ನು ಪದಗ್ರಹಣ ಸಮಾರಂಭಕ್ಕೆ ಆಹ್ವಾನಿಸಿರುವುದರ ಹಿಂದೆ ಇರಬಹುದು.

ಈ ಬೆಳವಣಿಗೆಯನ್ನು ನಾವು ಎಚ್ಚರಿಕೆಯಿಂದಲೇ ನೋಡಬೇಕು. ಇತ್ತೀಚಿನ ವರ್ಷಗಳಲ್ಲಿ ಭಾರತ ಮತ್ತು ಅಮೆರಿಕದ ಬಾಂಧವ್ಯ ಗಟ್ಟಿಗೊಂಡಿದ್ದರೆ ಅದಕ್ಕೆ ಮುಖ್ಯ ಕಾರಣ ಚೀನಾ. ಒಂದೊಮ್ಮೆ ಚೀನಾದೊಂದಿಗೆ ಅಮೆರಿಕ ಸಂಬಂಧವನ್ನು ಸುಧಾರಿಸಿಕೊಳ್ಳಲು ಮುಂದಾದರೆ, ಚೀನಾದ ವಿರುದ್ಧ ಸಹಾಯಕ್ಕೆ ನಾವು ಅಮೆರಿಕವನ್ನು ಅವಲಂಬಿಸಲು ಸಾಧ್ಯವಿಲ್ಲ. ಭಾರತ ತನ್ನ ಕಾರ್ಯತಂತ್ರವನ್ನು ಬದಲಿಸಬೇಕಾಗುತ್ತದೆ.

ಇತ್ತೀಚಿನ ವರ್ಷಗಳಲ್ಲಿ ನಾವು ಜಾಗತಿಕ ಪೂರೈಕೆ ಜಾಲದಲ್ಲಿ ಮಹತ್ವದ ಕೊಂಡಿಯಾಗುವ ಅಭಿಲಾಷೆ ಹೊಂದಿದ್ದೇವೆ. ಅಮೆರಿಕ ಮತ್ತು ಚೀನಾ ನಡುವಿನ ಪೈಪೋಟಿಯು ಭಾರತಕ್ಕೆ ಅವಕಾಶಗಳ ಬಾಗಿಲು ತೆರೆಯಲಿದೆ ಎಂಬುದು ಲೆಕ್ಕಾಚಾರ. ಆದರೆ ಭೂಸ್ವಾಧೀನ ಪ್ರಕ್ರಿಯೆ ಮತ್ತು ಕಾರ್ಮಿಕ ಕಾನೂನುಗಳ ತೊಡಕು, ಉತ್ಪಾದನಾ ಕೇಂದ್ರವಾಗುವ ಭಾರತದ ಮಹತ್ವಾಕಾಂಕ್ಷೆಗೆ ಹಿನ್ನಡೆ ಉಂಟು ಮಾಡುತ್ತಿವೆ. ವಿಯೆಟ್ನಾಂ ಮತ್ತು ಮಲೇಷ್ಯಾ ಸ್ಪರ್ಧೆಗೆ ಇಳಿದಿವೆ.

1990 ಮತ್ತು 2000ರ ದಶಕದಲ್ಲಿ ಜಾಗತಿಕ ಉತ್ಪಾದನಾ ಕೇಂದ್ರವಾಗುವ ಅವಕಾಶವನ್ನು ಭಾರತ ಕೈಚೆಲ್ಲಿತು ಎಂದು ವಿದೇಶಾಂಗ ಸಚಿವ ಜೈಶಂಕರ್ ಆಗಾಗ ಹೇಳುತ್ತಿರುತ್ತಾರೆ. 'ರಿಫಾರ್ಮ್, ಪರ್ಫಾರ್ಮ್, ಟ್ರಾನ್ಸ್‌ಫಾರ್ಮ್' ಎಂಬ ಪ್ರಾಸಬದ್ಧ ಘೋಷಣೆಗಳಿಗೆ ನಮ್ಮ ಪ್ರಯತ್ನ ಸೀಮಿತವಾದರೆ, ಮತ್ತೊಮ್ಮೆ ಅವಕಾಶ ಕೈತಪ್ಪಬಹುದು. ಟ್ರಂಪ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನಡುವಿನ ವೈಯಕ್ತಿಕ ಗೆಳೆತನ ಭಾರತಕ್ಕೆ ಅವಕಾಶದ ಬಾಗಿಲು ತೆರೆಯಲಿದೆ ಎಂದು ನಾವು ಮೈಮರೆಯುವಂತಿಲ್ಲ.

ಚುರುಮುರಿ



ಹೊಸ ಸಂಕಲ್ಪ

• ಗುರು ಪಿ.ಎಸ್.

'ಹೋದ ವರ್ಷದ ನಿಮ್ಮ ಸಂಕಲ್ಪ ಏನಾಯ್ತು ರೀ' ನಗುತ್ತಾ ಕೇಳಿದಳು ಹೆಂಡತಿ.

'ಅಂದ್ರೆ, ನ್ಯೂ ಇಯರ್ ರೆಸಲ್ಯೂಷನ್ ಬಗ್ಗೆ ಕೇಳ್ತಿದ್ದೀಯಾ' ಪತ್ನಿಯ ವ್ಯಂಗ್ಯ ಅರ್ಥವಾಗದವನಂತೆ ಕೇಳಿದೆ.

'ಹ್ಞೂಂ... ಅದೇ, ಮೊಬೈಲ್ ಫೋನ್‌ನಲ್ಲಿ ಸೋಷಿಯಲ್ ಮೀಡಿಯಾ ನೋಡಲ್ಲ ಅಂತ ಶಪಥ ಮಾಡಿದ್ರಲ್ಲ' ನೆನಪಿಸಿದಳು.

'ಮನದ ಸಂಕಲ್ಪಗಳನ್ನು ಈಡೇರಿಸಿಕೊಳ್ಳೋದು ಹೇಗೆ ಅನ್ನೋದನ್ನ ತಿಳ್ಕೊಳ್ಳೋದಕ್ಕೆ ಫೇಸ್‌ಬುಕ್, ಇನ್‌ಸ್ಟಾ, ಯೂಟ್ಯೂಬ್ ನೋಡಿದೆ, ಅಲ್ಲಿಗೆ ನನ್ನ ರೆಸಲ್ಯೂಷನ್ ಫೇಲ್ ಆಯ್ತು'.

'ನಿಮ್ಮ ಹಣೆಬರಹ ಅಷ್ಟೇ ಅಲ್ವಾ?' ತಿವಿದಳು ಪತ್ನಿ.

'ಈ ಬಾರಿ ಹೊಸ ರೆಸಲ್ಯೂಷನ್ ತಗೊಳ್ತೀನಿ, ಅದನ್ನ ತಪ್ಪದೇ ಪಾಲಿಸ್ತೀನಿ' ದೃಢ ಧ್ವನಿಯಲ್ಲಿ ಹೇಳಿದೆ.

'ಏನು ಹೊಸ ಸಂಕಲ್ಪ?' ಮತ್ತೆ ಕೇಳಿದಳು.

'ಮನೆಯ ಒಳಗಾಗಲಿ, ಹೊರಗಾಗಲಿ, ಹೆಂಗಸರಿಗಾಗಲಿ, ಗಂಡಸರಿಗಾಗಲಿ ಕೆಟ್ಟ ಮಾತುಗಳನ್ನು ಆಡುವುದಿಲ್ಲ'.

'ಶಹಭಾಷ್, ಮತ್ತೆ?'

'ಹೋಳಿ ಹಬ್ಬದಲ್ಲಿ ಬಿಟ್ಟು, ಬೇರೆ ಯಾವುದೇ ಸಂದರ್ಭದಲ್ಲಿ ತಲೆ ಮೇಲೆ ಮೊಟ್ಟೆ ಹೊಡೆಸಿಕೊಳ್ಳುವಂತಹ ಕೆಲಸ ಮಾಡಲ್ಲ'.

'ವೆರಿಗುಡ್, ಮುಂದೆ?'

'ಇನ್ಮುಂದೆ ಸುಮ್ ಸುಮ್ಮನೆ ಚಾಟಿಯಲ್ಲಿ ಹೊಡ್ಕೊಳಲ್ಲ' ಎನ್ನುತ್ತಾ ಮುಂದುವರಿದು ಕೇಳಿದೆ, 'ನಿನ್ನ ಸಂಕಲ್ಪ ಏನು?'

ಈ ಪ್ರಶ್ನೆಗಾಗಿಯೇ ಕಾಯುತ್ತಿದ್ದವಳಂತೆ ಉತ್ತರಿಸಿದಳು, 'ನಿರ್ಮಲಕ್ಕನ ರೀತಿ ನಿಮ್ಮ ಜೇಬಿಗೆ ಸುಮ್ ಸುಮ್ಮನೆ ಟ್ಯಾಕ್ಸ್ ಹಾಕಲ್ಲ'.

'ಓಹ್, ಖುಷಿ ಪಡೋ ವಿಷಯ ಇದು. ಮತ್ತೆ?'

'ನಿಮಗೆ ಸಂಬಳವಾದ ತಕ್ಷಣ, ಅಷ್ಟೂ ಹಣವನ್ನ ನನ್ನ ಬ್ಯಾಂಕ್ ಖಾತೆಗೆ ವರ್ಗಾಯಿಸುವವರೆಗೆ ಮನೆಯಲ್ಲಿ ಅಡುಗೆ ಮಾಡಲ್ಲ'.

'ಓಹ್, ನೀನು ನಿರ್ಮಲಕ್ಕನಿಗೇ ಅಕ್ಕ ಆಗಿಬಿಟ್ಟೆ. ನನ್ನ ಸಂಕಲ್ಪ ನಾನು ಪಾಲಿಸ್ತೀನಿ, ನಿನ್ನ ಸಂಕಲ್ಪ ನೀನು ಪಾಲಿಸಲೇಬೇಡ, ಈ ಆಟ ಇಲ್ಲಿಗೇ ಸಾಕು' ಎನ್ನುತ್ತಾ ಮನೆಯಿಂದ ಹೊರಗಡಿಯಿಟ್ಟೆ.

ಚರ್ಚೆ

ಕೊನೆಯ ಪರೀಕ್ಷೆ, ಆ... 3 ಗಂಟೆ

ಶಾಲೆಯಲ್ಲಿ ಕಲಿಕೆಯ ವಿಧಾನ ಮತ್ತು ಫಲಿತಾಂಶಕ್ಕೆ ಹೊಸ ವ್ಯಾಖ್ಯಾನ ಬೇಕಾಗಿದ್ದು, ಶಿಕ್ಷಣ ಕ್ರಮವನ್ನು ಪುನರ್‌ರೂಪಿಸಬೇಕಿದೆ

• ಸದಾಶಿವ್ ಸೊರಟೂರು

ಕೇಂದ್ರ ಶಿಕ್ಷಣ ಸಚಿವಾಲಯದ ಅಧೀನಕ್ಕೆ ಒಳಪಡುವ ಶಾಲೆಗಳ 5 ಮತ್ತು 8ನೇ ತರಗತಿಯ ವಿದ್ಯಾರ್ಥಿಗಳು ನಿಗದಿತ ಕಲಿಕಾ ಸಾಮರ್ಥ್ಯ ಹೊಂದಿರದಿದ್ದರೆ ಅನುತ್ತೀರ್ಣರಾಗಬೇಕಾಗುತ್ತದೆ ಎಂಬ ಇತ್ತೀಚಿನ ಆದೇಶ, ನಮ್ಮ ಕಲಿಕೆಯ ಮಾನದಂಡಗಳನ್ನು ಪರಾಮರ್ಶೆಗೆ ಒಳಪಡಿಸಬೇಕಾದ ಅಗತ್ಯವನ್ನು ನಮಗೆ ಮನಗಾಣಿಸುತ್ತದೆ.

ಐದನೇ ತರಗತಿಯಲ್ಲಿರುವ ಒಂದು ಮಗು 'ತರಕಾರಿ ತಿನ್ನುವುದು ಆರೋಗ್ಯಕ್ಕೆ ಒಳ್ಳೆಯದು' ಎಂಬುದನ್ನು ಕಲಿಯುತ್ತದೆ ಮತ್ತು ಆ ಸಂಬಂಧದ ಪ್ರಶ್ನೆಗೆ ಅದೇ ರೀತಿ ಉತ್ತರವನ್ನೂ ಬರೆಯುತ್ತದೆ ಎಂದು ಭಾವಿಸೋಣ. ಆದರೆ ಆ ಮಗು ಊಟ ಮಾಡುವಾಗ ಮಾತ್ರ ತಟ್ಟೆಯಿಂದ ತರಕಾರಿಯನ್ನು ತೆಗೆದು ಆಚೆ ಇಟ್ಟು, ಉಳಿದದ್ದನ್ನು ತಿನ್ನುತ್ತದೆ. ಲಿಖಿತ ಪರೀಕ್ಷೆಗೆ ಸಂಬಂಧಿಸಿದ ನಮ್ಮ ಮೌಲ್ಯಮಾಪನದ ಮಾನದಂಡವು ಆ ಮಗುವಿನಲ್ಲಿ ಕಲಿಕೆಯಾಗಿದೆ ಎಂದು ಹೇಳುತ್ತದೆ. ಆದರೆ ನಿಜಕ್ಕೂ ಆ ಮಗುವಿನಲ್ಲಿ ಕಲಿಕೆಯಾಗಿರುವುದಿಲ್ಲ. ಹೀಗಿರುವಾಗ, ಮಗು ತನ್ನ ಕಲಿಕೆಯನ್ನು ವರ್ಷದ ಕೊನೆಯಲ್ಲಿ ಪರೀಕ್ಷೆ ಬರೆದೇ ಸಾಬೀತುಪಡಿಸಬೇಕೆ ಎಂಬ ಪ್ರಶ್ನೆ ಮೂಡುತ್ತದೆ.

ಒಂದು ಮಗು ಅನುತ್ತೀರ್ಣಗೊಳ್ಳುವ ಮಟ್ಟ ತಲುಪುತ್ತದೆ ಎಂದರೆ, ಅದು ಮಗುವಿನ ಕಡೆಯಿಂದ ಆಗುವ ದೋಷವಲ್ಲ. ಶಿಕ್ಷಕರು, ಶಾಲೆಯ ವಾತಾವರಣ, ಪಠ್ಯಕ್ರಮ, ಮೌಲ್ಯಮಾಪನದ ರೀತಿ ನೀತಿ, ಪೋಷಕರ ಮನೋಭಾವ, ಮನೆಯ ವಾತಾವರಣ, ಕಲಿಸಲು ಬಳಸುತ್ತಿರುವ ವಿಧಾನಗಳು... ಇಂತಹ ನೂರೆಂಟು ಕಾರಣಗಳಿರಬಹುದು.


ಶಿಕ್ಷಕರ ಕೊರತೆ, ಕೆಲವು ಶಿಕ್ಷಕರ ಅದಕ್ಷತೆ, ಶಿಕ್ಷಕರ ಮೇಲಿನ ಕಾರ್ಯದೊತ್ತಡ, ಕಠಿಣ ಕಲಿಕಾಂಶ, ಮಗುವಿನ ಮನೆಯಲ್ಲಿನ ಬಡತನ, ಶಾಲೆಗಳಲ್ಲಿ ಮೂಲ ಸೌಕರ್ಯಗಳ ಕೊರತೆ, ಪದೇ ಪದೇ ಹೇರಲಾಗುವ ಹೊಸ ಹೊಸ ಕಾರ್ಯಕ್ರಮಗಳು ಕಲಿಕೆಗೆ ತೊಡಕುಂಟು ಮಾಡಬಹುದು. ವಿದ್ಯಾರ್ಥಿನಿಯೊಬ್ಬಳು ಮುಟ್ಟಾದಾಗ ಬಳಸಲು ಸೂಕ್ತ ಶೌಚಾಲಯ ಇಲ್ಲದ ಕಾರಣಕ್ಕೆ, ಪ್ರತಿಬಾರಿ ವಾರಗಟ್ಟಲೆ ಶಾಲೆಗೆ ಗೈರಾಗುತ್ತಾಳೆ ಎಂದಿಟ್ಟುಕೊಳ್ಳೋಣ. ಅದರಿಂದ ಅವಳ ಕಲಿಕೆಗೆ ಹಿನ್ನಡೆಯಾಗಿ ಅನುತ್ತೀರ್ಣಳಾದರೆ ಅದರ ಹೊಣೆಯನ್ನು ಯಾರು ಹೊರಬೇಕು?

ಫೇಲಾದ ಮಗುವಿನಲ್ಲಿ ಬರುವ 'ನಾನು ಸೋತೆ' ಎನ್ನುವ ಭಾವವು ಅದರ ಮೇಲೆ ಬೀರುವ ಪರಿಣಾಮ ತುಂಬಾ ದೊಡ್ಡದು. ಎರಡು ತಿಂಗಳಲ್ಲಿ ಇನ್ನೊಮ್ಮೆ ಪರೀಕ್ಷೆ ನಡೆಸಿ ಮಗುವನ್ನು ಮುಂದಿನ ತರಗತಿಗೆ ಕಳುಹಿಸಿದರೂ ಕುಗ್ಗಿಹೋದ ಅದರ ಆತ್ಮವಿಶ್ವಾಸವನ್ನು ಮತ್ತೆ ಚಿಗುರಿಸುವುದು ಅಷ್ಟು ಸುಲಭವಲ್ಲ. ಅದರಲ್ಲೂ ಈಗಿನ ಮಕ್ಕಳ ಮನಸ್ಸು ಬಹಳ ಸೂಕ್ಷ್ಮ.

ಅನುತ್ತೀರ್ಣರಾದ ಮಕ್ಕಳು ಶಾಶ್ವತವಾಗಿ ಶಾಲೆ ಬಿಡುವ ಅಪಾಯ ಇರುತ್ತದೆ. ಎಸ್‌ಎಸ್‌ಎಲ್‌ಸಿಯಲ್ಲಿ ಅನುತ್ತೀರ್ಣರಾಗುವವರಲ್ಲಿ ಹೆಚ್ಚಿನವರು ತಮ್ಮ ಓದನ್ನು ನಿಲ್ಲಿಸುವುದನ್ನು ಕಾಣುತ್ತಿರುತ್ತೇವೆ. 'ಇನ್ನು ನನ್ನಿಂದ ಆಗದು' ಎನ್ನುವ ಭಾವನೆಯೇ ಅವರಲ್ಲಿ ತುಂಬಿಹೋಗಿರುತ್ತದೆ. ಸಹಪಾಠಿಗಳ ಕುಹಕ ನೋಟಕ್ಕೂ ಮಗು ಒಳಗಾಗಬೇಕಾಗುತ್ತದೆ.

ಕಲಿಕೆಯಲ್ಲಿ ಹಿಂದುಳಿದವರಲ್ಲಿ ಗ್ರಾಮೀಣ ಭಾಗದ ಮಕ್ಕಳು, ಅದರಲ್ಲೂ ಬಡ ಮಕ್ಕಳದೇ ಸಿಂಹಪಾಲಿರುತ್ತದೆ. ಅವರನ್ನೆಲ್ಲಾ ಅನುತ್ತೀರ್ಣ ಮಾಡಿದರೆ ಅವರ ಕಲಿಕೆಯ ಕನಸಿಗೆ ದೊಡ್ಡ ಪೆಟ್ಟು ಬೀಳುತ್ತದೆ. ಫೇಲು ಮಾಡುವುದು ದೊಡ್ಡದಲ್ಲ, ಅವರು ಕಲಿಯುವಂತೆ ಮಾಡುವುದು ಮುಖ್ಯವಾದ ಕಾರ್ಯ.

ಈ ವರ್ಷ ಹತ್ತನೇ ತರಗತಿಯಲ್ಲಿ ಮಕ್ಕಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅನುತ್ತೀರ್ಣರಾದರು. ಅವರಿಗೆ ಮೂರು ಬಾರಿ ಪರೀಕ್ಷೆಗಳನ್ನು ನಡೆಸಲಾಯಿತಾದರೂ ಪಾಸಾಗದೇ ಉಳಿದವರು ಬಹಳಷ್ಟು ಮಂದಿ. ಅಂತಹ ವಿದ್ಯಾರ್ಥಿಗಳು ಮತ್ತೆ ನಿಯಮಿತವಾಗಿ ಶಾಲೆಗೆ ಹೋಗಲು ಅವಕಾಶ ಕಲ್ಪಿಸಿಕೊಡಲಾಗಿದೆ. ಆದರೆ ಹೆಚ್ಚಿನ ವಿದ್ಯಾರ್ಥಿಗಳು ಶಾಲೆಗೆ ಬರುತ್ತಿಲ್ಲ. ಅಂತಹ ಮಕ್ಕಳು ಬಾಲಕಾರ್ಮಿಕರಾಗಬಹುದು, ಬಾಲ್ಯವಿವಾಹಗಳ ಸಂಖ್ಯೆ ಹೆಚ್ಚಾಗಬಹುದು, ಕೆಲವರು ಅಡ್ಡದಾರಿಯನ್ನೂ ಹಿಡಿಯಬಹುದು.



ಮಗುವಿನ ಕಲಿಕಾ ಸುಧಾರಣೆಗೆ ಅನುತ್ತೀರ್ಣಗೊಳಿಸುವುದು ಎಂದಿಗೂ ಪರಿಹಾರ ಆಗಲಾರದು. ಮಕ್ಕಳಿಗೆ ಕಲಿಸಲೇಬೇಕು ಎಂಬುದು ನಮ್ಮ ಮೊದಲ ಆದ್ಯತೆ ಆಗಬೇಕು. ಕೊನೆಯ ಆದ್ಯತೆ ಕೂಡ ಅದೇ. ಯಾಕೆ ಮಗು ಕಲಿಯುತ್ತಿಲ್ಲ ಎಂಬುದಕ್ಕೆ ಕಾರಣ ಹುಡುಕುವುದರ ಕಡೆ ನಮ್ಮ ಆದ್ಯತೆ ಇರಬೇಕು. ಒಂದು ವಿಚಿತ್ರವೆಂದರೆ, ತಾನು ಕಲಿಸುವ ಮಗುವಿನ ಕುರಿತಾಗಿ ನಿರ್ಧಾರ ತೆಗೆದುಕೊಳ್ಳುವ ಹಕ್ಕು ಶಿಕ್ಷಕನಿಗೆ ಇಲ್ಲ. ತರಗತಿಯ ಪರಿಚಯವೇ ಇಲ್ಲದ ಯಾರೋ ನಿರ್ಧಾರ ತೆಗೆದುಕೊಳ್ಳುತ್ತಾರೆ. ಅದರಂತೆ ಶಿಕ್ಷಕ ನಡೆದುಕೊಳ್ಳಬೇಕು ಅಷ್ಟೆ. ಈ ಅವ್ಯವಸ್ಥೆಯಿಂದಲೇ ಕಲಿಕಾ ಪ್ರಕ್ರಿಯೆ ಹೆಚ್ಚು ಬಾರಿ ಸೋಲಿನ ಕಡೆ ನಡೆಯುತ್ತದೆ. ಮಗು ಫೇಲಾದರೆ ಶಿಕ್ಷಣ ಕ್ರಮ ಫೇಲಾದಂತೆ.

ನಮ್ಮ ಶಿಕ್ಷಣ ಕ್ರಮವನ್ನು ಪುನರ್‌ರೂಪಿಸಬೇಕಾದ ಅವಶ್ಯಕತೆ ಹೆಚ್ಚಾಗಿದೆ. ಕಲಿಕಾ ವಿಧಾನ ಮತ್ತು ಅದನ್ನು ಪರೀಕ್ಷಿಸುವ ಮಾನದಂಡಗಳು ಸೋತುಹೋಗಿವೆ. ಹತ್ತಾರು ವರ್ಷಗಳಿಂದ, ವರ್ಷದ ಕೊನೆಯ ಪರೀಕ್ಷೆಯನ್ನೂ ಆ ಮೂರು ಗಂಟೆಯನ್ನೂ ನೂರು ಅಂಕಗಳನ್ನೂ ನೆಚ್ಚಿಕೊಂಡಿದ್ದೇವೆ. ಅವು ಮಾತ್ರ ಎಲ್ಲವನ್ನೂ ಅಳೆದುಬಿಡುತ್ತವೆ ಎಂಬ ಭ್ರಮೆಯಲ್ಲಿದ್ದೇವೆ. ನಮ್ಮ ಶಿಕ್ಷಣ ಕ್ರಮವು ಉತ್ತೀರ್ಣ ಮತ್ತು ಅನುತ್ತೀರ್ಣದ ಪರಿಕಲ್ಪನೆಯನ್ನು ಮೀರಿ ಬೆಳೆಯಬೇಕಿದೆ. ಅಂತಹದ್ದೊಂದು ಹೊಸ ಶಿಕ್ಷಣ ಕ್ರಮ ರೂಪಿಸುವ ದರತ್ತ ನಾವು ಯೋಚಿಸಬೇಕಿದೆ.

ವಾಚಕರ ವಾಣಿ

ತೆರೆದ ಅಂಚೆ: ಸೇವಾಶುಲ್ಕ ತಗ್ಗಲಿ

ಮುದ್ರಿತ ಪುಸ್ತಕಗಳನ್ನು ತೆರೆದ ಅಂಚೆಯ ಮೂಲಕ ಅತ್ಯಂತ ಕಡಿಮೆ ಖರ್ಚಿನಲ್ಲಿ ಭಾರತದ ಯಾವ ಸ್ಥಳಕ್ಕಾದರೂ ಕಳುಹಿಸಲು ಇದುವರೆಗೆ ಅವಕಾಶವಿತ್ತು. ಇದರಿಂದ ಲೇಖಕರು, ಪ್ರಕಾಶಕರು ಮತ್ತು ಓದುಗರಿಗೆ ತುಂಬಾ ಅನುಕೂಲವಾಗಿತ್ತು. ಆದರೆ ಈ ವ್ಯವಸ್ಥೆಗೆ ಈಗ ಸೇವಾಶುಲ್ಕ ತೆರಬೇಕಾಗಿದೆ.

ಅತಿಯಾದ ಮೊಬೈಲ್ ಬಳಕೆಯಿಂದ, ಪುಸ್ತಕ ಓದುವವರು ಅದರಲ್ಲೂ ಕನ್ನಡ ಪುಸ್ತಕ ಓದುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಇಂತಹ ಸ್ಥಿತಿಯಲ್ಲಿ, ತೆರೆದ ಅಂಚೆ ಬಟವಾಡೆಯ ವೆಚ್ಚ ಹೆಚ್ಚಿರುವುದರಿಂದ ಪುಸ್ತಕ ಸಂಸ್ಕೃತಿಗೆ ಇನ್ನಷ್ಟು ಹೊಡೆತ ಬೀಳಲಿದೆ. ಐದು ರೂಪಾಯಿ ವೆಚ್ಚದಲ್ಲಿ ಕಳುಹಿಸಬಹುದಾಗಿದ್ದ ಪುಸ್ತಕಕ್ಕೆ ಈಗ ನಲವತ್ತು ರೂಪಾಯಿಗಿಂತ ಹೆಚ್ಚು ಅಂಚೆ ವೆಚ್ಚ ಪಾವತಿಸಬೇಕಾಗಿದೆ. ಕೊರಿಯರ್ ಅಥವಾ ರಿಜಿಸ್ಟರ್ ಅಂಚೆಯ ಮೂಲಕ ತರಿಸಿಕೊಳ್ಳುವ ಶಕ್ತಿ ಇರುವವರು ಹಾಗೆ ತರಿಸಿಕೊಂಡಾರು. ಆದರೆ ಈ ಪರಿ ಅಂಚೆ ವೆಚ್ಚವನ್ನು ಭರಿಸಲಾರದವರು ಹೊಸ ಪುಸ್ತಕ ತರಿಸಿಕೊಳ್ಳಲು ಹಿಂದೆ ಮುಂದೆ ನೋಡುವುದಂತೂ ನಿಶ್ಚಿತ. ಇತ್ತ ಲೇಖಕರು, ಪ್ರಕಾಶಕರಿಗೂ ಇದು ಹೊರೆಯೇ. ತೆರೆದ ಅಂಚೆಗೆ ವಿಧಿಸುತ್ತಿರುವ ಸೇವಾಶುಲ್ಕವನ್ನು ಕಡಿಮೆ ಮಾಡಲು ನಮ್ಮ ಸಂಸದರು ಕೇಂದ್ರದ ಮೇಲೆ ಒತ್ತಡ ತರಬೇಕಾಗಿದೆ.

ವಿಶಾಲಾಕ್ಷಿ ಶರ್ಮಾ, ಬೆಂಗಳೂರು

ಕೆನಡಾ ಪ್ರಜೆಯ ಮಾದರಿ ನಡೆ

ಕೆನಡಾದಲ್ಲಿ ಭಾರತದ ಇಲ್ಲವೇ ಪಾಕಿಸ್ತಾನದ ಮೂಲದವರು ಯಾರೋ ಒಬ್ಬರು ರಸ್ತೆಯಲ್ಲಿ ಕಸ ಹಾಕಿದ್ದಕ್ಕೆ, ಪಕ್ಕದಲ್ಲಿ ಹೋಗುತ್ತಿದ್ದ ಸ್ಥಳೀಯ ವ್ಯಕ್ತಿ ತನ್ನ ಗಾಡಿಯನ್ನು ನಿಲ್ಲಿಸಿ, ಬೈದು ಅದನ್ನು ಅವರಿಂದಲೇ ಎತ್ತಿಸಿದ ವಿಡಿಯೊ ದೃಶ್ಯಾವಳಿಗೆ ಐ.ಟಿ ಉದ್ಯೋಗಿ ಅಮರನಾಥ ಶಿವಶಂಕರ್ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವುದು ಪ್ರಕಟವಾಗಿದೆ (ದಿನದ ಟ್ವೀಟ್– ಪ್ರ.ವಾ., ಜ. 1). ನಮ್ಮಲ್ಲಿ ಯಾವುದಾದರೂ ಸಂಗತಿಯ ಬಗ್ಗೆ ಅರಿವು ಮೂಡಿಸಬೇಕಾದರೆ ಅಥವಾ ಅದನ್ನು ಕಾರ್ಯರೂಪಕ್ಕೆ ತರಬೇಕಾದರೆ ಎಷ್ಟೋ ಬಾರಿ ಕಾನೂನಿನ ಬಲವೇ ಬೇಕಾಗುತ್ತದೆ. ಆದರೆ ಕೆನಡಾದಲ್ಲಿ ಒಬ್ಬ ವಾಹನ ಚಾಲಕ, ರಸ್ತೆಬದಿ ಕಸ ಎಸೆದ ಸಹ ವಾಹನ ಚಾಲಕನಿಗೆ ಬೈದು, ಹಾಕಬೇಕಾದ ಜಾಗಕ್ಕೆ ಅದನ್ನು ಹಾಕಿಸಿದ ಪರಿ ನಿಜಕ್ಕೂ ಶ್ಲಾಘನೀಯ. ಆ ಪ್ರಜೆಗೆ ತನ್ನ ದೇಶದ ಬಗ್ಗೆ ಮತ್ತು ಕಾಯ್ದುಕೊಳ್ಳಬೇಕಾದ ಸ್ವಚ್ಛತೆಯ ಬಗ್ಗೆ ಇರುವ ಕಾಳಜಿಯನ್ನು ಇದು ತೋರಿಸುತ್ತದೆ.

ನಮ್ಮಲ್ಲಿ ಯಾರಾದರೂ ಹೀಗೆ ಸಲಹೆ ಕೊಡಲು ಮುಂದಾದರೆ, ಗದ್ದಲ, ವಾಗ್ವಾದ ನಡೆಯುವ ಸಂದರ್ಭಗಳೇ ಹೆಚ್ಚು, ತಮ್ಮ ಮನೆಯಲ್ಲಿನ ಅಥವಾ ತಾವು ಬಳಸಿದ ಪದಾರ್ಥಗಳಿಂದ ಉಂಟಾದ ತ್ಯಾಜ್ಯವನ್ನು ಸಾರ್ವಜನಿಕ ಸ್ಥಳಗಳಲ್ಲಿ ತಂದುಹಾಕುವ ರೂಢಿ ಹಲವರಿಗೆ ಇದೆ. ಹೀಗಾಗಿ, ರಸ್ತೆಬದಿ, ಚರಂಡಿ, ಕೆರೆ ಕಟ್ಟೆ, ಕಾಲುವೆ, ನದಿಗಳ ಬದಿಯಲ್ಲಿ ಈಗ ಎಲ್ಲೆಡೆ ಕಸದ ರಾಶಿ ತುಂಬಿ ತುಳುಕುತ್ತಿರುತ್ತದೆ. ಇದು ಪರಿಸರದ ಬಗ್ಗೆ ನಮಗಿರುವ ಅತೀವ ನಿರ್ಲಕ್ಷ್ಯಕ್ಕೆ ಕನ್ನಡಿ ಹಿಡಿಯುತ್ತದೆ. ಎಲ್ಲವನ್ನೂ ಸರ್ಕಾರವೇ ನಿಭಾಯಿಸಬೇಕೆಂದಿಲ್ಲ. ಇಂತಹ ಕೆಲಸಗಳಿಗೆ ಸಾರ್ವಜನಿಕರ ಸಹಭಾಗಿತ್ವ, ಸಹಕಾರ ಅತಿ ಮುಖ್ಯ. ಕೆನಡಾದ ಪ್ರಜೆಯ ನಾಗರಿಕ ಪ್ರಜ್ಞೆ ನಮ್ಮಲ್ಲಿ ತಪ್ಪಿತಸ್ಥ ಭಾವನೆ ಮೂಡಿಸಬೇಕಾಗಿದೆ.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಕೃತಿಯಿಂದ ಮನಗೆದ್ದವರು...

ವಿಭಿನ್ನ ಆಲೋಚನೆಗಳಿಂದ ಆರೋಗ್ಯಕರ ಜಗತ್ತನ್ನು ರೂಪಿಸಲು ಸಾಧ್ಯ ಎಂದು ಬಿಂಬಿಸುವ ರಾಜಕುಮಾರ ಕುಲಕರ್ಣಿ ಅವರ ಲೇಖನವನ್ನು (ಸಂಗತ, ಜ. 1) ಓದಿದಾಗ, ಚಿಕ್ಕಮಗಳೂರು ಜಿಲ್ಲೆ ನರಸಿಂಹರಾಜಪುರ ತಾಲ್ಲೂಕಿನ ಕರಗುಂದ ಎಂಬ ಹಳ್ಳಿಯಲ್ಲಿ ಇದ್ದ ಕೃಷ್ಣೇಗೌಡ ಎಂಬ ಅಪ್ಪಟ ಗಾಂಧಿವಾದಿಯೊಬ್ಬರು ನನಗೆ ನೆನಪಾದರು. ಅವರು ಪದವಿ ಪೂರ್ವ ಕಾಲೇಜೊಂದರ ಪ್ರಾಂಶುಪಾಲರಾಗಿದ್ದು, ಶಿಸ್ತುಬದ್ಧ ಆಡಳಿತಕ್ಕೆ ಹೆಸರಾಗಿದ್ದರು. ಆದರೆ ಕಾಲೇಜಿನ ಆಡಳಿತ ಮಂಡಳಿಯವರ ಅನಗತ್ಯ ಹಸ್ತಕ್ಷೇಪದ ಕಿರಿಕಿರಿಯಿಂದ ಬೇಸತ್ತು, ನಿವೃತ್ತಿಗೆ ಏಳು ವರ್ಷಗಳ ಮೊದಲೇ ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟು ಹೊರಬಂದಂತಹ ಸ್ವಾಭಿಮಾನಿಯಾಗಿದ್ದರು. ನಂತರದ ದಿನಗಳಲ್ಲಿ ಅವರು, ತಮ್ಮ ಮನೆಯ ಸಮೀಪದ ಸಾರ್ವಜನಿಕ ಬಸ್ ನಿಲ್ದಾಣವನ್ನು ಬೆಳಿಗ್ಗೆ ದಿನಾಲೂ ಗುಡಿಸಿ ಸ್ವಚ್ಛವಾಗಿ ಇಟ್ಟಿರುತ್ತಿದ್ದರು. ತಾವು ಓಡಾಡುತ್ತಿದ್ದ ದಾರಿಯಲ್ಲಿ ಕಸ ಕಂಡರೆ ಸಾಕು ಅದನ್ನು ಎತ್ತಿ ದೂರ ಹಾಕಿ ಮುಂದೆ ಸಾಗುತ್ತಿದ್ದರು.

ನರಸಿಂಹರಾಜಪುರದಲ್ಲಿ 'ಶಾರದಾ ವಿದ್ಯಾಮಂದಿರ' ಎಂಬ ಶಾಲೆಯನ್ನು ಹುಟ್ಟುಹಾಕಿದರು. ಊರಿನಲ್ಲಿ ದೇವಸ್ಥಾನ, ರಸ್ತೆ, ಕುಡಿಯುವ ನೀರಿನಂತಹ ಯಾವುದೇ ಅಭಿವೃದ್ಧಿ ಕಾರ್ಯಗಳಿರಲಿ ಮುಂಚೂಣಿಯಲ್ಲಿ ಇರುತ್ತಿದ್ದರು. ಭ್ರಷ್ಟಾಚಾರ, ಸೋಮಾರಿತನ, ಸುಳ್ಳು, ಮೋಸದಂತಹ ಕೃತ್ಯಗಳಲ್ಲಿ ತೊಡಗಿದ್ದವರನ್ನು ಯಾವುದೇ ಮುಲಾಜಿಲ್ಲದೆ ಅವರ ಎದುರಿನಲ್ಲೇ ಖಂಡಿಸುತ್ತಿದ್ದರು. ಹಾಗಾಗಿ, ಕೆಲವರಿಗೆ ಅವರು ನುಂಗಲಾರದ ತುತ್ತಾಗಿದ್ದರು! ಅಂತಹ ಸರಳ, ಸಜ್ಜನಿಕೆಯ ವ್ಯಕ್ತಿ ಈಗ ಇಲ್ಲದಿದ್ದರೂ ಅವರ ಕೆಲಸಗಳು ಊರಿನ ಎಲ್ಲೆಡೆ ಮಾತನಾಡುತ್ತಿವೆ. ಇಂತಹವರ ಅಗತ್ಯ ಈಗ ನಮಗೆ ಹೆಚ್ಚಾಗಿದೆ.

ಚಾವಲ್ಮನೆ ಸುರೇಶ್ ನಾಯಕ್, ಕೊಪ್ಪ, ಚಿಕ್ಕಮಗಳೂರು

ವ್ಯಕ್ತಿಪೂಜೆ, ಉನ್ಮಾದ: ಅಂದೂ ಇಂದೂ

1975ರಲ್ಲಿ ಹೇರಲಾಗಿದ್ದ ತುರ್ತುಪರಿಸ್ಥಿತಿಯ ದಿನಗಳನ್ನು 'ಕಾಲು ಶತಮಾನದ ಕತೆ, ವ್ಯಥೆ...' ಎಂಬ ಲೇಖನದಲ್ಲಿ (ಪ್ರ.ವಾ., ಜ. 1) ನಾರಾಯಣ ಎ. ಪ್ರಸ್ತಾಪಿಸಿದ್ದಾರೆ. ಆ ಅವಧಿಯಲ್ಲಿ ದೇಶದಾದ್ಯಂತ ಎಂಥಾ ಕರಾಳ ಶಾಸನಗಳು ಜಾರಿಯಾದವು, ಎಷ್ಟು ಜನ ಅಮಾಯಕರನ್ನು- ಅವರು ಏಕವ್ಯಕ್ತಿಯ ಸರ್ವಾಧಿಕಾರ, ಭ್ರಷ್ಟ ಸ್ಥಿತಿಯನ್ನು ವಿರೋಧಿಸಿದ ಕಾರಣಕ್ಕೆ- ಜೈಲಿಗೆ ತಳ್ಳಿ, ಹಿಂಸಿಸಿ, ಒಂದೂವರೆ ವರ್ಷ ಪ್ರಜಾಪ್ರಭುತ್ವದ ಕಗ್ಗೊಲೆ ನಡೆಸಲಾಯಿತು ಎಂಬುದು, ಅದನ್ನು ನೇರವಾಗಿ ಕಂಡ ಪ್ರೌಢ, ಪ್ರಬುದ್ಧ, ಸೂಕ್ಷ್ಮ ಸಂವೇದನೆಯ ಆ ತಲೆಮಾರಿನ ಜನಕ್ಕಷ್ಟೇ ಗೊತ್ತು.


ಇಂದಿನ ವಿದ್ಯಮಾನಗಳು ನಿಜವಾಗಿ ಲೇಖಕರು ಹೇಳುವಷ್ಟು ಗಂಭೀರವಾಗಿ, ದಯನೀಯವಾಗಿ ಇವೆಯೇ? ಅಭಿವ್ಯಕ್ತಿ ಸ್ವಾತಂತ್ರ್ಯ, ಪ್ರತಿಭಟನೆಯ ಸ್ವಾತಂತ್ರ್ಯ ಅಬಾಧಿತವಾಗಿಯೇ ಇವೆ. ವ್ಯತ್ಯಾಸ ಇಷ್ಟೇ- ಅಂದೂ ವ್ಯಕ್ತಿಪೂಜೆ (ಇಂಡಿಯಾ ಎಂದರೆ ಇಂದಿರಾ, ಇಂದಿರಾ ಎಂದರೆ ಇಂಡಿಯಾ) ಉನ್ಮಾದ ಇತ್ತು, ಇಂದೂ ಕಂಡುಬರುತ್ತಿದೆ. ಆದರೆ ಲೇಖಕರೇ ತಿಳಿಸಿರುವಂತೆ, ತುರ್ತುಪರಿಸ್ಥಿತಿಯನ್ನು ಹೇರಲು ಅವಕಾಶವಿಲ್ಲ. ಅಂಥಾ ಮೂರ್ಖ ಕೆಲಸವನ್ನು ಈಗಿನ ನೇತಾರರು ಖಂಡಿತ ಮಾಡಲಾರರು.

ಎಚ್.ಎಸ್.ಶಿವರಾಮ್, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬ್ರಹ್ಮಪುತ್ರ ನದಿಗೆ ವಿಶ್ವದ ಅತಿ ದೊಡ್ಡ ಅಣೆಕಟ್ಟು

ಚೀನಾ ದುಸ್ಸಾಹಸ ಭಾರತಕ್ಕೆ ಕಂಟಕ?



ವಿಶ್ವದಲ್ಲೇ ಅತಿ ದೊಡ್ಡ ಅಣೆಕಟ್ಟು ನಿರ್ಮಾಣಕ್ಕೆ ಚೀನಾ ಮುಂದಾಗಿದೆ. ಅದರಿಂದ ಜಲವಿದ್ಯುತ್ ಉತ್ಪಾದನೆ ಮಾಡಿ, ಹೆಚ್ಚು ಸಮೃದ್ಧಿ ಸಾಧಿಸುವುದು ತನ್ನ ಗುರಿ ಎಂದು ಚೀನಾ ಹೇಳಿಕೊಂಡಿದೆ. ಆದರೆ, ಅಲ್ಲಿನ ತಜ್ಞರೂ ಸೇರಿದಂತೆ ಜಾಗತಿಕ ಮಟ್ಟದ ಹಲವರು ಆ ಅಣೆಕಟ್ಟು ಜನರ ಮೇಲೆ ಮತ್ತು ಪ್ರಕೃತಿಯ ಮೇಲೆ ಬೀರಬಹುದಾದ ಪರಿಣಾಮಗಳ ಬಗ್ಗೆ ಎಚ್ಚರಿಕೆ ನೀಡಿದ್ದಾರೆ. ಭಾರತವೂ ಈ ಬಗ್ಗೆ ಹಿಂದೆಯೇ ಆಕ್ಷೇಪ ವ್ಯಕ್ತಪಡಿಸಿತ್ತು. ಟಿಬೆಟ್, ಬಾಂಗ್ಲಾ, ಭಾರತದ ಜನರ ಸುರಕ್ಷತೆ ಮತ್ತು ಪ್ರಕೃತಿ ವಿನಾಶದ ದೃಷ್ಟಿಯಿಂದ ಅಪಾಯಕಾರಿಯಾಗಿದ್ದರೂ ಚೀನಾ ತನ್ನ ನಿಲುವಿನಿಂದ ಹಿಂದೆ ಸರಿಯುತ್ತಿಲ್ಲ

ಬ್ರಹ್ಮಪುತ್ರ ಭಾರತದಲ್ಲಿ ಹರಿಯುವ ಪ್ರಮುಖ ನದಿಗಳಲ್ಲೊಂದು. ಟಿಬೆಟ್‌ನಲ್ಲಿ ಹುಟ್ಟುವ ಇದು, ಭಾರತ ಮತ್ತು ಬಾಂಗ್ಲಾದೇಶದ ಮೂಲಕ ಹರಿದು ಕೊನೆಗೆ ಬಂಗಾಳ ಕೊಲ್ಲಿ ಸೇರುತ್ತದೆ. ಬ್ರಹ್ಮಪುತ್ರ ನದಿಯನ್ನು ಟಿಬೆಟ್‌ನಲ್ಲಿ ಯಾರ್ಲಂಗ್ ಸಂಗ್ಪೊ ಎಂದು ಕರೆಯುತ್ತಾರೆ. ನದಿಯ ಕೆಳಭಾಗದಲ್ಲಿ ವಿಶ್ವದ ಅತ್ಯಂತ ದೊಡ್ಡ ಅಣೆಕಟ್ಟು ನಿರ್ಮಿಸಿ, ಜಲವಿದ್ಯುತ್ ಉತ್ಪಾದನೆ ಮಾಡುವುದು ಚೀನಾ ಸರ್ಕಾರದ ಯೋಜನೆ. ಭಾರತದ ಅರುಣಾಚಲ ಪ್ರದೇಶದ ಗಡಿ ಸಮೀಪ ಇದನ್ನು ನಿರ್ಮಿಸಲಾಗುತ್ತಿದೆ ಎಂದು ಹೇಳಲಾಗುತ್ತಿದೆ.

ಸದ್ಯ ಚೀನಾದ ತ್ರೀ ಗಾರ್ಜಸ್ ಡ್ಯಾಮ್ (ಯಾಂಟ್ಜೆ ನದಿಗೆ ಕಟ್ಟಲಾಗಿದೆ) ವಿಶ್ವದ ಅತಿ ದೊಡ್ಡ ಅಣೆಕಟ್ಟಾಗಿದ್ದು, ಜಲವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಯಾರ್ಲಂಗ್ ಸಂಗ್ಪೊ ನದಿಯ ಕೆಳಭಾಗದಲ್ಲಿ ಕಟ್ಟಲಾಗುವ ಅಣೆಕಟ್ಟಿನಿಂದ ಅದರ ಮೂರು ಪಟ್ಟು ಜಲವಿದ್ಯುತ್ ಉತ್ಪಾದನೆ ಮಾಡುವುದು ಚೀನಾದ ಲೆಕ್ಕಾಚಾರ. ಚೀನಾದ ಮಾಧ್ಯಮಗಳು ಇದು ಸುರಕ್ಷಿತ ಯೋಜನೆಯಾಗಿದ್ದು, ಪರಿಸರ ರಕ್ಷಣೆಯನ್ನು ತನ್ನ ಆದ್ಯತೆಯಾಗಿಸಿಕೊಂಡಿದೆ ಎಂದು ವಿವರಿಸಿವೆ. ಈ ಯೋಜನೆಯು ದೇಶದ ಸಮೃದ್ಧಿಯನ್ನು ಹೆಚ್ಚಿಸಲಿದ್ದು, ಬೀಜಿಂಗ್‌ನ ಹೊಸ ಇಂಗಾಲ ಹೊರಸೂಸುವಿಕೆಯ ಗುರಿಗೆ ತಕ್ಕಂತೆ ಇದೆ.

ಚೀನಾದ ಕಮ್ಯುನಿಸ್ಟ್ ಪಕ್ಷವು 2021ರಲ್ಲಿ ಬಿಡುಗಡೆ ಮಾಡಿರುವ ಐದು ವರ್ಷಗಳ ಆರ್ಥಿಕ ಅಭಿವೃದ್ಧಿ ಯೋಜನೆಯಲ್ಲಿಯೂ ಈ ಅಣೆಕಟ್ಟು ಸ್ಥಾನ ಪಡೆದಿದೆ. ಟಿಬೆಟ್‌ನಲ್ಲಿ ಹಲವು ಜಲವಿದ್ಯುತ್ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಬಗ್ಗೆ ಚಿಂತಿಸುತ್ತಿದ್ದು, ಅವುಗಳಲ್ಲಿ ಇದು ಒಂದು ಯೋಜನೆ ಎನ್ನಲಾಗುತ್ತಿದೆ.

ಆದರೆ, ವಿಶ್ವದ ಅತಿ ದೊಡ್ಡ ಅಣೆಕಟ್ಟು ನಿರ್ಮಾಣದ ಬಗ್ಗೆ ಚೀನಾದಲ್ಲೇ ಆತಂಕ ವ್ಯಕ್ತವಾಗಿದೆ. ಬ್ರಹ್ಮಪುತ್ರ ನದಿ ಹಿಮಾಲಯದ ಗಿರಿ ಕಂದರಗಳಲ್ಲಿ ಹರಿಯುತ್ತದೆ. ಲಕ್ಷಾಂತರ ಜೀವಪ್ರಭೇದ, ಕೋಟ್ಯಂತರ ಜನರ ಬದುಕಿಗೆ ಆಸರೆಯಾಗಿದೆ ನದಿ. ಇಂಥ ಕಡಿದಾದ, ಆಳದ ಕಣಿವೆ ಇರುವ, ಭೂಕಂಪ ಸಂಭವನೀಯ ಪ್ರದೇಶದಲ್ಲಿ ಅಣೆಕಟ್ಟು ನಿರ್ಮಾಣವು ಭೂಕುಸಿತದಂಥ ಅಪಘಡಗಳಿಗೆ ಕಾರಣವಾಗುತ್ತದೆ ಎಂದು ಚೀನಾದ ವಿಜ್ಞಾನಿಗಳೇ ಕಳವಳ ವ್ಯಕ್ತಪಡಿಸಿದ್ದಾರೆ. ಜತೆಗೆ, ಅಮೆರಿಕದ ಗ್ರ್ಯಾಂಡ್ ಕ್ಯಾನ್‌ಗಿಂತಲೂ ಮೂರು ಪಟ್ಟು ಆಳವಾದ ಹಿಮಾಲಯದ ಕಣಿವೆಗಳಲ್ಲಿ ಅಣೆಕಟ್ಟು ನಿರ್ಮಾಣವಾಗಲಿದೆ. ಅದಕ್ಕೆ ಬೇಕಾದ ಅಗಾಧ ಎಂಜಿನಿಯರಿಂಗ್ ಕೌಶಲ ಮತ್ತಿತರ ಅಗತ್ಯಗಳನ್ನು ಪೂರೈಸುವುದು ಹೇಗೆ ಎನ್ನುವ ಪ್ರಶ್ನೆಗಳು ಹುಟ್ಟಿಕೊಂಡಿವೆ.

ಒಂದು ವೇಳೆ, ಭೂಕಂಪವನ್ನು ತಡೆಯುವ ರೀತಿಯಲ್ಲಿ ಅಣೆಕಟ್ಟು ನಿರ್ಮಿಸಿದರೂ ಅದರಿಂದ ಉಂಟಾಗುವ ಗುಡ್ಡಕುಸಿತ, ಮಣ್ಣು–ಕಲ್ಲಿನ ಅನಿಯಂತ್ರಿತ ಹರಿಯುವಿಕೆ ತಡೆಯುವುದು ಸಾಧ್ಯವಾಗುವುದಿಲ್ಲ. ಇದು ಯೋಜನೆಗೆ ಗಂಭೀರ ಸವಾಲೊಡ್ಡಲಿದೆ ಎಂದು ಸಿಚುವಾನ್ ಪ್ರಾಂತೀಯ ಭೂವಿಜ್ಞಾನ ಬ್ಯೂರೊದ ಎಂಜಿನಿಯರ್ ಒಬ್ಬರು 2022ರಲ್ಲೇ ಎಚ್ಚರಿಕೆ ನೀಡಿದ್ದರು.


ಟಿಬೆಟ್‌ನಲ್ಲಿ ಹರಿಯುವ ಯಾರ್ಲಂಗ್ ಸಂಗ್ಪೊ ನದಿಯ ನೋಟ

ಯಾರ್ಲಂಗ್ ಸಂಗ್ಪೊ ಟಿಬೆಟ್‌ನ ಅತಿ ಉದ್ದದ ನದಿ. ಟಿಬೆಟ್‌ನಲ್ಲಿ ಚೀನಾ ಈಗಾಗಲೇ ಹಲವು ಅಣೆಕಟ್ಟುಗಳನ್ನು ನಿರ್ಮಿಸಿದೆ. 2024ರ ಆರಂಭದಲ್ಲಿ ಅಣೆಕಟ್ಟೊಂದರ ನಿರ್ಮಾಣದಿಂದ ಜನರಿಗೆ ತೊಂದರೆಯಾಗಲಿದ್ದುದಲ್ಲದೇ ಹಲವು ಬೌದ್ಧ ವಿಹಾರಗಳು ಮುಳುಗಿಹೋಗಲಿದ್ದವು. ಅದರ ವಿರುದ್ಧ ಪ್ರತಿಭಟಿಸಿದ್ದ ಟಿಬೆಟ್ ಜನರನ್ನು ಬಂಧಿಸಿದ್ದ ಚೀನಾ ಸರ್ಕಾರ, ಅವರ ವಿರುದ್ಧ ಕಠಿಣ ಕ್ರಮ ಜರುಗಿಸಿತ್ತು. ತ್ರೀ ಗಾರ್ಜಸ್ ಡ್ಯಾಮ್ ನಿರ್ಮಾಣದಿಂದ ಚೀನಾದ 14 ಲಕ್ಷ ಮಂದಿ ನಿರ್ವಸಿತರಾಗಿದ್ದರು. ಈಗ ಚೀನಾ ಕಟ್ಟಲು ಉದ್ದೇಶಿಸಿರುವ ವಿಶ್ವದ ಅತಿ ದೊಡ್ಡ ಅಣೆಕಟ್ಟೆಯ ವ್ಯಾಪ್ತಿಯಲ್ಲಿ ಹೆಚ್ಚು ಜನವಸತಿ ಇರುವ ಪ್ರದೇಶಗಳೂ ಸೇರಿವೆ. ಹೀಗಾಗಿ ಅತಿ ಹೆಚ್ಚು ಮಂದಿ ನಿರ್ವಸಿತರಾಗಬೇಕಾಗುತ್ತದೆ ಎಂದು ‘ಟಿಬೆಟ್ ವಾಚ್’ ಎಂಬ ಲಂಡನ್ನಿನ ಎನ್‌ಜಿಒ ಕಳವಳ ವ್ಯಕ್ತಪಡಿಸಿದೆ.

ಬ್ರಹ್ಮಪುತ್ರದ ನೀರಿನಲ್ಲಿ ಭಾರತ ಮತ್ತು ಬಾಂಗ್ಲಾ ದೇಶಗಳಿಗೂ ಪಾಲು ಇದೆ. ಬ್ರಹ್ಮಪುತ್ರ ಸೇರಿದಂತೆ ಈ ಭಾಗದ ನದಿಗಳ ನೀರಿನ ಮೇಲೆ ನಿಯಂತ್ರಣ ಸಾಧಿಸುವ ಮೂಲಕ ಚೀನಾವು ಭಾರತದ ಆರ್ಥಿಕತೆಯ ಮೇಲೆ ತನ್ನ ಹಿಡಿತ ಬಿಗಿಗೊಳಿಸಲು ಪ್ರಯತ್ನಿಸುತ್ತಿದೆ ಎಂದು ಆಸ್ಟ್ರೇಲಿಯಾ ಮೂಲದ ಚಿಂತಕರ ಚಾವಡಿ ‘ಲೊವಿ ಇನ್‌ಸ್ಟಿಟ್ಯೂಟ್’ 2020ರ ತನ್ನ ವರದಿಯಲ್ಲಿ ಅಭಿಪ್ರಾಯಪಟ್ಟಿತ್ತು.

ಬ್ರಹ್ಮಪುತ್ರ ಮೇಲೆ ಚೀನಾದ ಹಿಡಿತ?

ತನ್ನ ಅಣೆಕಷ್ಟು ಯೋಜನೆಯಿಂದ ಭಾರತ, ಬಾಂಗ್ಲಾದೇಶ ಸೇರಿದಂತೆ ಯಾರಿಗೂ ತೊಂದರೆಯಾಗದು ಎಂದು ಚೀನಾ ಹೇಳಿಕೊಂಡಿದೆ. ಆದರೆ, ಈ ಯೋಜನೆ ಭಾರತ ಮತ್ತು ಬಾಂಗ್ಲಾದೇಶದ ಪಾಲಿಗೆ ವಿನಾಶಕಾರಿಯಾಗಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

ಯಾರ್ಲಂಗ್ ಸಂಗ್ಪೊ ನದಿಯ ಮೇಲ್ಭಾಗದಲ್ಲಿ ಚೀನಾ ಹಲವು ಅಣೆಕಟ್ಟುಗಳನ್ನು ಈಗಾಗಲೇ ನಿರ್ಮಿಸಿದೆ. ಈಗ ನದಿಯ ಕೆಳಭಾಗದಲ್ಲಿ ಭಾರಿ ಅಣೆಕಟ್ಟು ನಿರ್ಮಿಸಿದರೆ, ಇಡೀ ನದಿ ನೀರಿನ ಮೇಲೆ ಚೀನಾ ಹಿಡಿತ ಸಾಧಿಸಲಿದೆ ಇದರಿಂದ ಭಾರತ ಮತ್ತು ಬಾಂಗ್ಲಾದೇಶದ ಆರ್ಥಿಕತೆಯ ಮೇಲೆ ಪರಿಣಾಮ ಬೀರಲಿದೆ ಎಂದು ಹೇಳಲಾಗುತ್ತಿದೆ.

ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧ ಬಿಗಡಾಯಿಸಿದ ಸಂದರ್ಭಗಳಲ್ಲಿ ಭಾರತದ ಮೇಲೆ ಹಿಡಿತ ಸಾಧಿಸಲು ಈ ಅಣೆಕಟ್ಟನ್ನು ಒಂದು ಸಾಧನವನ್ನಾಗಿ ಚೀನಾ ಬಳಸಬಹುದು ಎಂಬ ಅಭಿಪ್ರಾಯವನ್ನು ರಾಜತಾಂತ್ರಿಕ ತಜ್ಞರು ವ್ಯಕ್ತಪಡಿಸಿದ್ದಾರೆ.

ಈಶಾನ್ಯ ಭಾರತ ಮತ್ತು ಬಾಂಗ್ಲಾದೇಶದ ಪಾಲಿಗೆ ಬ್ರಹ್ಮಪುತ್ರ ಜೀವ ನದಿ. ಭಾರತದ ಸಿಹಿ ನೀರಿನ ಸಂಪನ್ಮೂಲದ ಪೈಕಿ ಶೇ 30ರಷ್ಟು ಬ್ರಹ್ಮಪುತ್ರ ನದಿಯ ಪಾಲಿದೆ. ಭಾರತದ ಗಡಿ ಭಾಗದಲ್ಲಿ ಚೀನಾ ಅಣೆಕಟ್ಟು ನಿರ್ಮಿಸಿದರೆ, ಭಾರತ ಮತ್ತು ಬಾಂಗ್ಲಾದೇಶದತ್ತ ನದಿ ನೀರಿನ ಹರಿವಿಗೆ ಧಕ್ಕೆಯಾಗಲಿದೆ. ಬೇಸಿಗೆ ಅವಧಿಯಲ್ಲಿ ನೀರಿನ ಹರಿವು ಕಡಿಮೆಯಾಗಿ ಎರಡೂ ರಾಷ್ಟ್ರಗಳಿಗೂ ನೀರಿನ ಕೊರತೆ ಕಾಡಬಹುದು. ಇದರಿಂದ ಕೃಷಿ ಚಟುವಟಿಕೆಗಳಿಗೆ ಹಿನ್ನಡೆಯಾಗಲಿದೆ. ಇದು ಆರ್ಥಿಕತೆಯ ಮೇಲೆ ಪರಿಣಾಮ ಬೀರಬಹುದು. ಕುಡಿಯುವ ನೀರಿನ ಸಮಸ್ಯೆಯೂ ತಲೆದೋರಬಹುದು.

ಕೆಲವು ವರ್ಷಗಳಿಂದೀಚೆಗೆ ಪ್ರತಿ ಮಳೆಗಾಲದಲ್ಲಿ ಬ್ರಹ್ಮಪುತ್ರ ನದಿಯು ಉಕ್ಕೇರಿ ಅಸ್ಸಾಂ, ಅರುಣಾಚಲ ಪ್ರದೇಶ, ಮೇಘಾಲಯದಂತಹ ನದಿಯ ಅಚ್ಚುಕಟ್ಟು ಪ್ರದೇಶದ ರಾಜ್ಯಗಳು ಪ್ರವಾಹಕ್ಕೆ ಒಳಗಾಗುತ್ತಿವೆ. ಮುಂಗಾರು ಅವಧಿಯಲ್ಲಿ ಚೀನಾವು ಅಣೆಕಟ್ಟೆಯಿಂದ ಏಕಾಏಕಿ ನೀರು ಬಿಟ್ಟರೆ, ಭಾರತದಲ್ಲಿ ಪ್ರವಾಹ ಸ್ಥಿತಿ ಇನ್ನಷ್ಟು ಬಿಗಡಾಯಿಸಿ, ಈಶಾನ್ಯ ರಾಜ್ಯಗಳು ನೆರೆಯಿಂದ ತತ್ತರಿಸಿ ಹೋಗಬಹುದು ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಅಣೆಕಟ್ಟು ನಿರ್ಮಿಸಲು ಗುರುತಿಸಿರುವ ಜಾಗ, ಭೂಕಂಪನ ಸಂಭವನೀಯತೆ ಪ್ರದೇಶ (ಭೂಪದರ ತಟ್ಟೆಗಳು (ಟೆಕ್ಟೋನಿಕ್ ಪ್ಲೇಟ್ಸ್) ರೇಖೆಗಳು ಇಲ್ಲಿ ಹಾದುಹೋಗಿವೆ) ಎಂದು ಹೇಳಲಾಗಿದೆ. ಕಡಿದಾದ, ಆಳವಾದ ಕಂದಕಗಳಲ್ಲಿ ಭಾರಿ ಪ್ರಮಾಣದಲ್ಲಿ ಮಣ್ಣು ಕೊರೆಯುವುದು, ನಿರ್ಮಾಣ ಕಾಮಗಾರಿ ನಡೆಸುವುದು ಯಾವತ್ತೂ ಸವಾಲಿನ ಕೆಲಸ. ಇದು ಭೂಕಂಪನ, ಭೂಕುಸಿತದಂತಹ ವಿಪತ್ತಿಗೆ ಕಾರಣವಾಗಬಹುದು ಎಂದು ಚೀನಾ ವಿಜ್ಞಾನಿಗಳೇ ಎಚ್ಚರಿಸಿದ್ದಾರೆ. ಹಿಮಾಲಯದಲ್ಲಿ ಸಂಭವಿಸುವ ಯಾವುದೇ ವಿಪತ್ತು ಭಾರತದ ಮೇಲೂ ಪರಿಣಾಮ ಬೀರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಹಿಮಾಲಯದಲ್ಲಿ ಮೇಘಸ್ಫೋಟ, ಭೂಕುಸಿತ ಸಾಮಾನ್ಯವಾಗಿದೆ. ಇದರಿಂದ ದಿಢೀರ್ ಪ್ರವಾಹ ಉಂಟಾದ ನಿದರ್ಶನಗಳೂ ಇವೆ. ಹೀಗಿರುವಾಗ ಅಣೆಕಟ್ಟು ನಿರ್ಮಾಣ ಸಂದರ್ಭದಲ್ಲಿ ಅಥವಾ ನಂತರ ಯಾವುದೇ ಅವಘಡ ಜರುಗಿದರೂ ಅರುಣಾಚಲ ಪ್ರದೇಶ, ಅಸ್ಸಾಂ ಮೇಲೆ ಅದರ ಪರಿಣಾಮ ಆಗದೇ ಇರದು.

ಆಧಾರ: ಪಿಟಿಐ, ಬಿಬಿಸಿ, ರಾಯಿಟರ್ಸ್, ವೆದರ್.ಕಾಂ

‘ನನ್ನ ಹಕ್ಕು’ ಎಂದಿದ್ದ ಚೀನಾ

ಬ್ರಹ್ಮಪುತ್ರ ನದಿಯು ಭಾರತದ ಅರುಣಾಚಲ ಪ್ರದೇಶ ಮತ್ತು ಅಸ್ಸಾಂ ರಾಜ್ಯಗಳ ಮೂಲಕ ಹರಿಯುತ್ತದೆ. ಅರುಣಾಚಲ ಪ್ರದೇಶದ ಹಲವು ಭಾಗಗಳನ್ನು ಚೀನಾ ತನ್ನದೆಂದು ಪ್ರತಿಪಾದಿಸುತ್ತಿದೆ. ಈ ಬಗ್ಗೆ ಭಾರತದೊಂದಿಗೆ ಹಲವು ಬಾರಿ ವಾಗ್ವಾದವನ್ನೂ ನಡೆಸಿದೆ.

ಚೀನಾ ಬ್ರಹ್ಮಪುತ್ರ ನದಿಯ ಮೇಲೆ ಅತಿ ದೊಡ್ಡ ಅಣೆಕಟ್ಟು ನಿರ್ಮಾಣದ ಬಗ್ಗೆ 2020ರಲ್ಲಿಯೇ ಭಾರತವು ಆಕ್ಷೇಪಣೆ ವ್ಯಕ್ತಪಡಿಸಿತ್ತು. ಜತೆಗೆ, ಬ್ರಹ್ಮಪುತ್ರದ ಉಪನದಿಗೆ ದೊಡ್ಡ ಅಣೆಕಟ್ಟು ನಿರ್ಮಾಣ ಆರಂಭಿಸಿತು. ಭಾರತದ ಆಕ್ಷೇಪಣೆಗೆ ಉತ್ತರಿಸಿದ್ದ ಚೀನಾ, ಯಾರ್ಲಂಗ್ ಸಂಗ್ಪೊ ನದಿಗೆ ಅಣೆಕಟ್ಟು ನಿರ್ಮಿಸುವುದಕ್ಕೆ ತನಗೆ ಹಕ್ಕು ಇದ್ದು, ಅದರಿಂದ ಉಂಟಾಗುವ ಪರಿಣಾಮಗಳ ಸಂಪೂರ್ಣ ಅರಿವೂ ಇದೆ ಎಂದು ಸಮರ್ಥಿಸಿಕೊಂಡಿತ್ತು. ಬ್ರಹ್ಮಪುತ್ರ ನದಿಯ ನೀರಿನ ಮಟ್ಟ, ನೀರಿನ ಲಭ್ಯತೆ ಹಾಗೂ ಮಳೆಯ ಪ್ರಮಾಣದ ಬಗ್ಗೆ ದತ್ತಾಂಶ ಹಂಚಿಕೊಳ್ಳುವ ಸಂಬಂಧ ಎರಡೂ ದೇಶಗಳ ನಡುವೆ 2006ರಲ್ಲಿ ಒಪ್ಪಂದ ಆಗಿದೆ. 2023ಕ್ಕೆ ಅದು ಅಂತ್ಯಗೊಂಡಿದ್ದು, ಡಿ.18ರಂದು ನಡೆದಿದ್ದ ದ್ವಿಪಕ್ಷೀಯ ಮಾತುಕತೆ ಸಂದರ್ಭದಲ್ಲಿ ಈ ವಿಚಾರ ಪ್ರಸ್ತಾಪವಾಗಿದೆ ಎನ್ನಲಾಗಿದೆ.

ಪರಿಸರದ ಮೇಲೆ ಪರಿಣಾಮ

ಅಣೆಕಟ್ಟೆಯ ನಿರ್ಮಾಣವು ಪ್ರಕೃತಿಯ ಮೇಲೆ ಗಂಭೀರ ಪರಿಣಾಮ ಬೀರಲಿದೆ. ನದಿಯ ಜೀವವೈವಿಧ್ಯಕ್ಕೆ ಧಕ್ಕೆ ತರುವುದಲ್ಲದೆ, ಹಿಮಾಲಯದ ಸೂಕ್ಷ್ಮ ಪರಿಸರ ವ್ಯವಸ್ಥೆಯನ್ನು ಹಾಳು ಮಾಡಲಿದೆ ಎಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ.

- ದೊಡ್ಡ ಅಣೆಕಟ್ಟು ಟಿಬೆಟ್‌ನ ಭೂ ಪ್ರದೇಶದ ಸ್ವರೂಪವನ್ನೇ ಬದಲಾಯಿಸಲಿದೆ
- ಭಾರಿ ಸಂಖ್ಯೆಯ ಜನರಿಗೆ ಪುನರ್ವಸತಿ ಕಲ್ಪಿಸಬೇಕಾಗುತ್ತದೆ
- ಮಣ್ಣಿನ ಸವಕಳಿಯಾಗುತ್ತದೆ, ಹೂಳಿನ ಸಮಸ್ಯೆ ಕಾಡುತ್ತದೆ
- ಅಣೆಕಟ್ಟೆಯ ಕೆಳ ಪ್ರದೇಶಗಳಲ್ಲಿರುವ ವಿವಿಧ ಪ್ರಾಣಿಗಳ ಆವಾಸ ಸ್ಥಾನಗಳ ಮೇಲೆ ದುಷ್ಪರಿಣಾಮ ಬೀರಲಿದೆ

ಭೂ ಮಂತರ್ ಟ್ರೇಲರ್



ಶರಣ್

ಶರಣ್ ನಾಯಕರಾಗಿ ನಟಿಸಿರುವ ‘ಛೂ ಮಂತರ್’ ಚಿತ್ರದ ಟ್ರೇಲರ್ ಬಿಡುಗಡೆಗೊಂಡಿದೆ. ನವನೀತ್ ನಿರ್ದೇಶಿಸಿರುವ ಚಿತ್ರ ಜ.10ಕ್ಕೆ ತೆರೆ ಕಾಣಲಿದೆ. ತರುಣ್ ಸ್ಟುಡಿಯೋಸ್ ಚಿತ್ರವನ್ನು ನಿರ್ಮಾಣ ಮಾಡಿದೆ.

‘ಸಾಮಾನ್ಯವಾಗಿ ಸಂಕ್ರಾಂತಿ ಸಮಯದಲ್ಲಿ ಬೇರೆ ಭಾಷೆಗಳ ದೊಡ್ಡ ಚಿತ್ರಗಳು ಬಿಡುಗಡೆಯಾಗುವುದರಿಂದ ಕನ್ನಡದ ಚಿತ್ರಗಳನ್ನು ಆ ಸಮಯದಲ್ಲಿ ಹೆಚ್ಚಾಗಿ ಬಿಡುಗಡೆ ಮಾಡುವುದಿಲ್ಲ. ನಮ್ಮ ಚಿತ್ರದ ಕಂಟೆಂಟ್ ಚೆನ್ನಾಗಿದೆ. ಜನರಿಗೆ ಬೇಕಾದ ಎಲ್ಲಾ ಅಂಶಗಳು ಚಿತ್ರದಲ್ಲಿದೆ. ಹೀಗಾಗಿ ಸಂಕ್ರಾಂತಿ ಸಮಯದಲ್ಲೇ ಚಿತ್ರವನ್ನು ಬಿಡುಗಡೆ ಮಾಡುತ್ತಿದ್ದೇವೆ’ ಎಂದು ನಿರ್ಮಾಪಕ ತರುಣ್ ಶಿವಪ್ಪ ತಿಳಿಸಿದ್ದಾರೆ.

ಚಿಕ್ಕಣ್ಣ, ಮೇಘನಾ ಗಾಂವ್ಕರ್, ಅದಿತಿ ಪ್ರಭುದೇವ, ಪ್ರಭು ಮುಂಡ್ಕರ್ ಮುಂತಾದವರು ಚಿತ್ರದಲ್ಲಿದ್ದಾರೆ. ಅನೂಪ್ ಕಟ್ಟುಕರನ್ ಛಾಯಾಚಿತ್ರಗ್ರಹಣ, ಚಂದನ್ ಶೆಟ್ಟಿ ಸಂಗೀತ ನಿರ್ದೇಶನವಿರುವ ಚಿತ್ರಕ್ಕೆ ಅವಿನಾಶ್ ಬಸುತ್ಕರ್ ಹಿನ್ನೆಲೆ ಸಂಗೀತ ನೀಡಿದ್ದಾರೆ.

ಸಂಚಿತ್‌ಗೆ ವಿವೇಕ ಆ್ಯಕ್ಷನ್ ಕಟ್


ಸಂಚಿತ್

ನಟ ಸುದೀಪ್ ಅಕ್ಕನ ಮಗ ಸಂಚಿತ್ ವರ್ಷದ ಹಿಂದೆ ‘ಜಿಮ್ಮಿ’ ಸಿನಿಮಾ ಘೋಷಿಸಿದ್ದರು. ಈ ಸಿನಿಮಾ ಮೂಲಕ ನಟನಾಗಿ, ನಿರ್ದೇಶಕನಾಗಿ ಚಂದನವನಕ್ಕೆ ಹೆಜ್ಜೆ ಇಡುತ್ತಿರುವುದಾಗಿ ತಿಳಿಸಿದ್ದರು. ಇದೀಗ ಈ ಪ್ರಾಜೆಕ್ಟ್ ಬದಿಗಿರಿಸಿ ಹೊಸ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದಾರೆ ಸಂಚಿತ್.

‘ಮ್ಯಾಕ್ಸ್’ ಸಿನಿಮಾ ಯಶಸ್ಸಿನ ಬೆನ್ನಲ್ಲೇ ಸುದೀಪ್ ತಮ್ಮ ನಿರ್ಮಾಣ ಸಂಸ್ಥೆಯಿಂದ ಹೊಸ ಸಿನಿಮಾ ಘೋಷಿಸಿದ್ದಾರೆ. ಸುಪ್ರಿಯಾನ್ವಿ ಪ್ರೊಡಕ್ಷನ್ ಮತ್ತು ಕೆ ಆರ್ ಜಿ ಪ್ರೊಡಕ್ಷನ್ಸ್ ಜಂಟಿಯಾಗಿ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದು, ಸಂಚಿತ್ ಸಂಜೀವ್ ನಾಯಕನಾಗಿ ನಟಿಸುತ್ತಿದ್ದಾರೆ. ಸಂಚಿತ್ ಚೊಚ್ಚಲ ಸಿನಿಮಾ ಇದಾಗಿರಲಿದೆ. ಈ ಸಿನಿಮಾವನ್ನು ವಿವೇಕ ನಿರ್ದೇಶನ ಮಾಡುತ್ತಿದ್ದು, ಇದು ಅವರ ಚೊಚ್ಚಲ ಸಿನಿಮಾವಾಗಿದೆ. ತೆಲುಗು, ತಮಿಳು ಹಾಗೂ ಹಿಂದಿ ಸಿನಿಮಾಗಳಲ್ಲಿ ಕೆಲಸ ಮಾಡಿರುವ ಅನುಭವ ಹೊಂದಿರುವ ವಿವೇಕ, ಮೈಸೂರು ಮೂಲದವರು. ಕ್ರೈಂ ಥ್ರಿಲ್ಲರ್ ಕಥೆಯನ್ನು ಹೊಂದಿರುವ ಈ ಸಿನಿಮಾದ ಫಸ್ಟ್‌ಲುಕ್ ಮತ್ತು ಶೀರ್ಷಿಕೆ ಜನವರಿ 24ರಂದು ಬಿಡುಗಡೆಯಾಗಲಿದೆ. ಮೈಸೂರಿನಲ್ಲಿ ಈ ಸಿನಿಮಾದ ಕಥೆ ನಡೆಯಲಿದೆ. ಮುಹೂರ್ತದ ದಿನದಿಂದಲೇ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ ಎಂದಿದೆ ಚಿತ್ರತಂಡ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಿಹಾರದಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಎನ್‌ಡಿಎಯಿಂದ ಹೊರ ಬಂದಿದ್ದಾರೆ ಎಂದು ಹೇಳಿಕೊಳ್ಳುತ್ತಾ, ಅವರು ಮಾಧ್ಯಮಗಳೊಂದಿಗೆ ಮಾತನಾಡುವ ವಿಡಿಯೊ ತುಣುಕೊಂದನ್ನು ‘ಎಕ್ಸ್’ ಬಳಕೆದಾರರೊಬ್ಬರು ಶುಕ್ರವಾರ ಪೋಸ್ಟ್ ಮಾಡಿದ್ದರು. ಇದನ್ನು ಹಲವರು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು. ವಿಡಿಯೊ ಈಗಿನದ್ದಲ್ಲ.

ವಿಡಿಯೊ ತುಣುಕನ್ನು ಇನ್‌ವಿಡ್ ಟೂಲ್ ಮೂಲಕ ಹುಡುಕಿದಾಗ, ಅದರಲ್ಲಿ ಹಲವು ಕೀಫ್ರೇಮ್‌ಗಳು ಕಂಡು ಬಂದವು. ಒಂದು ಕೀ ಫ್ರೇಮ್ ಅನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿದಾಗ ಈ ವರ್ಷದ ಜನವರಿ 28ರಂದು ಮಾಧ್ಯಮವೊಂದರ ಯುಟ್ಯೂಬ್ ಚಾನೆಲ್‌ನಲ್ಲಿ ಪ್ರಸಾರವಾದ ವಿಡಿಯೊ ಸಿಕ್ಕಿತು. ಜೆಡಿಯು ಶಾಸಕರೊಂದಿಗೆ ಸಭೆ ನಡೆಸಿದ ಬಳಿಕ ಮುಖ್ಯಮಂತ್ರಿ ಹಾಗೂ ಜೆಡಿಯು ಅಧ್ಯಕ್ಷ ನಿತೀಶ್ ಕುಮಾರ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂದು ಅದರಲ್ಲಿ ಹೇಳಲಾಗಿತ್ತು. ಜೆಡಿಯು ‘ಮಹಾಘಟಬಂಧನ್’ ಕೂಟದಿಂದ ಹೊರಬಂದಿದ್ದ ಸಂದರ್ಭದ ವಿಡಿಯೊ ಅದಾಗಿತ್ತು. ಇದರ ಆಧಾರದಲ್ಲಿ ನಿರ್ದಿಷ್ಟ ಪದಗಳನ್ನು ಹಾಕಿ ಇಂಟರ್‌ನೆಟ್‌ನಲ್ಲಿ ಹುಡುಕಿದಾಗ ಬೇರೆ ಮಾಧ್ಯಮದಲ್ಲೂ ಈ ಬಗ್ಗೆ ವರದಿ ಪ್ರಕಟವಾಗಿರುವುದು ಕಂಡು ಬಂತು. ಮೈತ್ರಿಕೂಟ ತೊರೆದ ಬಳಿಕ ಮಾಧ್ಯಮಗಳೊಂದಿಗೆ ನಿತೀಶ್ ಮಾತನಾಡಿದ್ದ ವಿಡಿಯೊ ಅದಾಗಿತ್ತು. ಆ ಹಳೆಯ ವಿಡಿಯೊವನ್ನೇ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ, ನಿತೀಶ್‌ಕುಮಾರ್ ಅವರು ಈಗ ಎನ್‌ಡಿಎ ತೊರೆದು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಬಡ ಮನಸ್ಸೇ ಬಡತನ!

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

101

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಒಮ್ಮೆ ಅಮೆರಿಕಕ್ಕೆ ಹೋಗಿದ್ದರು. ಅವರು ಪಂಚೆ ಉಟ್ಟಿದ್ದರು. ಕಚ್ಚೆ ಹಾಕಿದ್ದರು. ಒಬ್ಬ ಪೊಲೀಸ್ ಅವರನ್ನು ಹಿಡಿದು ಕಚ್ಚೆ ಎಳೆಯುತ್ತಾ ‘ಇದೇನಿದು, ಇದೇನಿದು’ ಎಂದು ಕೇಳಿದ. ರಾಮಸ್ವಾಮಿ ಅವರಿಗೆ ಇಂಗ್ಲಿಷ್ ಗೊತ್ತಿತ್ತು. ಆದರೆ ಕಚ್ಚೆಗೆ ಇಂಗ್ಲಿಷ್ ನಲ್ಲಿ ಏನಂತ ಕರೀತಾರೆ ಎಂಬುದು ಗೊತ್ತಿರಲಿಲ್ಲ. ಆದರೆ ಪೊಲೀಸ್ ಕಚ್ಚೆ ಎಳೆಯುವುದನ್ನು ಬಿಡಲಿಲ್ಲ. ಆಗ ರಾಮಸ್ವಾಮಿ ಅವರಿಗೆ ಪೊಲೀಸ್ ಟೈ ಹಾಕಿಕೊಂಡಿದ್ದು ಕಂಡಿತು. ಅದನ್ನು ಹಿಡಿದು ‘ವಾಟಿಸ್ ದಿಸ್’ ಅಂತಾ ಕೇಳಿದರು. ಅದಕ್ಕೆ ಪೊಲೀಸ್ ‘ದಿಸ್ ಈಸ್ ಫ್ರಂಟ್ ಟೈ’ ಎಂದ. ತಕ್ಷಣವೇ ರಾಮಸ್ವಾಮಿ ತಮ್ಮ ಕಚ್ಚೆಯನ್ನು ತೋರಿಸಿ ‘ದಿಸ್ ಈಸ್ ಮೈ ಬ್ಯಾಕ್ ಟೈ’ ಎಂದರು. ಅಲ್ಲದೆ, ‘ನಿಮ್ಮ ದೇಶದಲ್ಲಿ ಮುಂದೆ ಟೈ ಹಾಕಿಕೊಳ್ಳುವವರಿಗೆ ಬೆಲೆ ಐತಿ. ನಮ್ಮ ದೇಶದಲ್ಲಿ ಹಿಂದೆ ಟೈ ಹಾಕಿಕೊಳ್ಳುವವರಿಗೆ ಬಹಳ ಬೆಲೆ ಐತಿ’ ಎಂದರು. ಅಂದರ ಮಾತು ಕೂಡಾ ಸಂಪತ್ತು. ಮಾತು ಮನುಷ್ಯರನ್ನು ಬದುಕಿಸುತ್ತದೆ.

ನಿಸರ್ಗವೇ ಸಂಪತ್ತು. ನಿಸರ್ಗದಲ್ಲಿ ಯಾವುದು ಸಂಪತ್ತಲ್ಲ ಹೇಳಿ, ನೋಡುವ ಕಣ್ಣು ಸರಿ ಇರಬೇಕು. ನಮ್ಮ ಕಣ್ಣು ಸರಿ ಇಲ್ಲದೇ ಇರುವುದರಿಂದ ನಾವು ಬಡವರಾಗಿದ್ದೇವೆ. ನಾವು ವಿಜಯದಶಮಿ ಆಚರಣೆ ಮಾಡುತ್ತೇವೆ. ಆಗ ನಾವು ‘ಬನ್ನಿ ತಗೊಂಡು ಬಂಗಾರಾಗಿರೋಣ’ ಅಂತೇವಿ. ಬನ್ನಿ ಗಿಡದ ಎಲೆಯನ್ನು ಯಾಕೆ ಬಂಗಾರ ಅಂತ ಕರೆದರು? ಯಾಕೆಂದರ ಒಂದು ಗಿಡದ ಅಡುಗೆ ಮನೆ ಎಂದರೆ ಅದು ಎಲೆ. ಗಿಡಕ್ಕೆ ಏನೆಲ್ಲಾ ಬೇಕು ಅದೆಲ್ಲವೂ ಎಲೆಯಲ್ಲಿಯೇ ತಯಾರಾಗುತ್ತದೆ. ಎಲೆ ಸೂರ್ಯನ ಬೆಳಕನ್ನು ತೆಗೆದುಕೊಳ್ಳುತ್ತದೆ. ಜೊತೆಗೆ ವಾತಾವರಣದಲ್ಲಿರುವ ಕೆಟ್ಟ ಗಾಳಿಯನ್ನು ತೆಗೆದುಕೊಳ್ಳುತ್ತದೆ. ಭೂಮಿಯಿಂದ ನೀರು, ಲವಣಾಂಶಗಳನ್ನು ತೆಗೆದುಕೊಂಡು ಗಿಡಕ್ಕೆ ಆಹಾರ ತಯಾರು ಮಾಡುತ್ತದೆ. ಎಲೆ ಇಲ್ಲದಿದ್ದರೆ ಗಿಡವೇ ಇರುವುದಿಲ್ಲ. ಗಿಡಗಳು ಇಲ್ಲದಿದ್ದರೆ ಜೀವಿಗಳು ಅಂದರ ನಾವೂ ಇರುತ್ತಿರಲಿಲ್ಲ. ಅದಕ್ಕಾಗಿಯೇ ಎಲೆಗಳನ್ನು ಬಂಗಾರ ಅಂತ ಕರೆದರು. ಇವುಗಳನ್ನು ನೋಡುವ ಕಣ್ಣಿರಬೇಕು.

‘ಬಡವನಾರ್, ಮಡದಿಯೊಲವಿನ ಸವಿಯನವರಿಯದವನು, ಹುಡುಗರಾಟದಿ ಬೆರೆತು ನಗಲರಿಯದವನು, ಉಡುರಾಜನೋಲಗದಿ ಕುಳಿತು ಮೈಮರೆಯದವನು, ಬಡ ಮನಸೇ ಬಡತನವೊ ಮರುಳ ಮುನಿಯ’ ಎಂದು ಡಿವಿಜಿ ಹೇಳುತ್ತಾರೆ. ಎಲ್ಲ ಸಂಪತ್ತು ಇರುವಾಗ ಮನಸ್ಸು ಕೆಡಿಸಿಕೊಂಡಿರಬಾರದು. ಸಂಸಾರದಲ್ಲಿ ಒಲವು ಇದ್ದರೆ ಶ್ರೀಮಂತವಾಗುತ್ತದೆ. ಸಂಶಯದ ವಿಷದ ಗಾಳಿ ಪ್ರವೇಶ ಮಾಡಿದರೆ ಸಂಸಾರ ಕೆಡುತ್ತದೆ. ಅದಕ್ಕೆ ಪ್ರೇಮ ಸಂಪತ್ತು ಎನ್ನುವುದನ್ನು ಅರಿಯಬೇಕು. ಜೀವನದಲ್ಲಿ, ಸಂಸಾರದಲ್ಲಿ ಏನೇ ಕಷ್ಟ ಬಂದರೂ ಯಾರ ಮುಂದೆ ಕೈಜೋಡಿಸದೆ ಬದುಕನ್ನು ಕಟ್ಟಿಕೊಂಡಿದ್ದಾರಲ್ಲ ಅವರೂ ಭಾರತ ರತ್ನಗಳೇ ಆಗಿದ್ದಾರೆ. ರಾಷ್ಟ್ರಪತಿಯಿಂದ ಪ್ರಶಸ್ತಿ ಪಡೆದವರು ಮಾತ್ರ ಭಾರತ ರತ್ನಗಳಲ್ಲ ಅಂಬೋದನ್ನು ತಿಳಕೋಬೇಕು.

ಗಂಡ ನೀಡಿದ ಒಂದು ಬೀಜವನ್ನು ಒಂಬತ್ತು ತಿಂಗಳು ಹೊಟ್ಟೆಯಲ್ಲಿ ಇಟ್ಟುಕೊಂಡು ಬೆಳೆಸಿ ಮಗುವನ್ನಾಗಿ ಮಾಡಿ, ಮಗು ಹುಟ್ಟಿದ ನಂತರ 6 ವರ್ಷ ಅದನ್ನು ಬೆಳೆಸಿ, ಅದು ಅತ್ತಾಗ ತಾನೂ ಅತ್ತು, ಅದು ನಕ್ಕಾಗ ತಾನೂ ನಕ್ಕು ಮಗುವನ್ನು ಶಾಲೆಗೆ ಸೇರಿಸುವಾಗ ತನ್ನ ಹೆಸರು ಹೇಳದೆ ಅಪ್ಪನ ಹೆಸರನ್ನು ಬರೆಸುವ ತಾಯಿಯ ತ್ಯಾಗ ಬಹಳ ದೊಡ್ಡದು. ಪ್ರೇಮ ಮನೆ ಕಟ್ಟುತ್ತದೆ ಎನ್ನುವುದು ಗೊತ್ತಿರಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜನವರಿ 2, 2025

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ತೃತೀಯ ಗಂ.25-09 ನಕ್ಷತ್ರ: ಶ್ರವಣ ಗಂ.23-11 ಯೋಗ: ಹರ್ಷಣ ಗಂ.14-58 ಕರಣ: ತೈತಿಲ ಗಂ.13-49, ಧನು ಮಾಸದ 17 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 2.
ರಾಹುಕಾಲ: ಮಧ್ಯಾಹ್ನ 01-30 – 03-00
ಸೂರ್ಯೋದಯ : 06-58 ಸೂರ್ಯಾಸ್ತ : 06-12
ಮುಸ್ಲಿಂ ದಿನಾಂಕ : 01 ರಜಬ್
ಅದೃಷ್ಟ ಸಂಖ್ಯೆ : 10, 7

ಮೇಷ: ಆತ್ಮವಿಶ್ವಾಸದಿಂದ ಹೊಸ ಯೋಜನೆ ಆರಂಭಿಸುವಿರಿ. ಜವಾಬ್ದಾರಿಗಳನ್ನು ಇತರರಿಗೆ ವಹಿಸಿ, ಆರಾಮವಾಗಿರಲು ತೀರ್ಮಾನಿಸುವುದು ಉತ್ತಮ. ಅನ್ವೇಷಣೆಯ ಸ್ವಭಾವವು ವೃತ್ತಿ ಬದುಕಿನಲ್ಲಿ ತಿರುವು ತರಲಿದೆ.

ವೃಷಭ: ಮಕ್ಕಳು ಮಾಡಿದ ತಪ್ಪುಗಳಿಗೆ ಅವರನ್ನು ಅತಿಯಾಗಿ ಶಿಕ್ಷಿಸಬೇಡಿ. ಕೇವಲ ಮಾತಿನಲ್ಲಿ ತಿಳಿವಳಿಕೆ ಹೇಳಿರಿ. ಭಾವನೆಗಳ ಬಗ್ಗೆ ಪ್ರಾಮಾಣಿಕರಾಗಿರಿ. ಈ ದಿನ ನಿಮ್ಮ ಸುತ್ತಲಿನವರ ಸಂತೋಷಕ್ಕೆ ಕಾರಣರಾಗುವಿರಿ.

ಮಿಥುನ: ರಕ್ತದೊತ್ತಡ ಇರುವವರು ಆಹಾರ ಪದ್ಧತಿಯಲ್ಲಿಯೇ ರಕ್ತದೊತ್ತಡವನ್ನು ನಿಯಂತ್ರಿಸಿಕೊಳ್ಳುವ ಪ್ರಯತ್ನಿಸಿ. ಸಿವಿಲ್ ಎಂಜಿನಿಯರ್‌ಗಳು ಬಳಸುವ ತಂತ್ರಜ್ಞಾನದ ಬಗ್ಗೆ ಗಮನವಿರಲಿ. ಆರೋಗ್ಯದ ಬಗ್ಗೆ ಎಚ್ಚರವಿರಲಿ.

ಕರ್ಕಾಟಕ: ಮಕ್ಕಳಿಗೆ ವ್ಯವಹಾರ ಒಪ್ಪಿಸಿ, ನೆಮ್ಮದಿಯಿಂದ ವಿಶ್ರಾಂತಿ ಜೀವನದಲ್ಲಿ ಇರಲು ಇಚ್ಛಿಸುವಿರಿ. ಒಪ್ಪಂದಗಳು ಉಂಟಾಗಲಿವೆ. ಹೊಸ ಉದ್ಯಮ ಆರಂಭಿಸಲು ಬಂಡವಾಳ ಹೂಡಿಕೆ ಮಾಡಬಹುದು.

ಸಿಂಹ: ಆಸ್ತಿಗೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳು ಬಹಿರಂಗಗೊಂಡು ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ. ಜಾಹೀರಾತುಗಳಂಥ ವಿಚಾರದಿಂದ ಪ್ರಚಾರ ಕಾರ್ಯಗಳು ಸಮರ್ಪಕವಾಗಿ ನಡೆಯುವುದು.

ಕನ್ಯಾ: ಎಲ್ಲರೊಂದಿಗೆ ಬೆರೆಯುವ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗಿಯಾಗುವ ಸಂದರ್ಭವೊಂದು ಬರಲಿದೆ. ಹೊಸದಾಗಿ ಹಣ ಹೂಡಿಕೆ ಮಾಡಬೇಕಾದರೆ ಪರಿಶೀಲನೆ ಅಗತ್ಯ. ಇಲ್ಲವಾದಲ್ಲಿ ತೊಂದರೆಯಾದೀತು.

ತುಲಾ: ಅನ್ಯರ ಗುಣ ನಡತೆಯನ್ನು ಅವರ ಮೊದಲ ಭೇಟಿಯಲ್ಲಿ ತೀರ್ಮಾನವನ್ನು ಮಾಡಬೇಡಿ. ನೃತ್ಯ ಕಲಿಕೆಯಂಥ ಇತರೆ ಚಟುವಟಿಕೆಯಲ್ಲಿನ ಆಸಕ್ತಿಯಿಂದ ಶೈಕ್ಷಣಿಕವಾಗಿ ಹಿಂದುಳಿಯುವ ಪರಿಸ್ಥಿತಿ ಬರಲಿದೆ.

ವೃಶ್ಚಿಕ: ಬುದ್ಧಿವಂತರಾದ, ತಿಳಿವಳಿಕೆ ಹೊಂದಿವರಾದ ನೀವು ಇಂದು ಗ್ರಹಚಾರದ ಫಲವಾಗಿ ಮನೋಬಲದಿಂದ ಕಾರ್ಯಸಾಧಿಸುವಲ್ಲಿ ವಿಫಲರಾಗುವಿರಿ. ಹೊಸ ಮನೆ ನಿರ್ಮಾಣಕ್ಕಾಗಿ ತಯಾರಿ ನಡೆಸಲು ಸುದಿನ.

ಧನು: ಕುಟುಂಬದಲ್ಲಿ ನಿಮ್ಮ ಮಾತಿಗೆ, ಶ್ರಮಕ್ಕೆ ಉತ್ತಮ ಸಹಕಾರದ ವಾತಾವರಣವಿದ್ದು ಸಂತಸ ಹಾಗೂ ಸಮಾಧಾನ ತರಲಿದೆ. ಶ್ರೀಮಂತ ಮನೆತನದ ಸಂಬಂಧ ಮಗನಿಗೆ ವಿವಾಹ ಕೂಡಿಬರಲಿದೆ.

ಮಕರ: ಕ್ಲಪ್ತ ಸಂದರ್ಭದಲ್ಲಿ ತಂದೆ-ತಾಯಿಯ ಆರೈಕೆಯಿಂದ ಪುಣ್ಯ ಸಂಪಾದನೆಯಾಗುವುದು. ವಿದ್ಯಾರ್ಥಿಗಳಿಗೆ ನಿರಂತರ ಅಧ್ಯಯನವು ಅನಿವಾರ್ಯ. ಜನರೊಂದಿಗೆ ಬೆರೆತು ಬಾಳುವ ಅಭ್ಯಾಸವನ್ನು ಮಾಡಿಕೊಳ್ಳಿರಿ

ಕುಂಭ: ಮಾನಸಿಕ ಶಕ್ತಿಗಳು ಬಲಯುತವಾಗಿ ಯೋಚನೆಗಳನ್ನು ಶೀಘ್ರವೇ ಕಾರ್ಯರೂಪಕ್ಕೆ ಇಳಿಸುತ್ತೀರಿ. ಕುಟುಂಬದ ಹಾಗೂ ಸ್ನೇಹಿತರ ನಡುವಿನ ಸಂಬಂಧಗಳು ಉತ್ತಮಗೊಳ್ಳುವುದು.


ಮೀನ: ಜೀವನದಲ್ಲಿ ಹೆಚ್ಚಿನ ಹೊಣೆಗಾರಿಕೆಯನ್ನು ಹೊರಲು ನೀವು ಸಿದ್ಧರಾಗಿರುವಿರಿ ಮತ್ತು ಶಕ್ತರಾಗಿರುವಿರಿ. ವೃತ್ತಿ ಪರವಾಗಿ ಶತ್ರುಗಳ ವಿರುದ್ಧ ಹೋರಾಟ ನಡೆಸಬೇಕಾಗಲಿದೆ. ತಂದೆಯವರು ನೆರವಿಗೆ ನಿಲ್ಲಲಿದ್ದಾರೆ.

ಪದಬಂಧ 5910

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆಶ್ರದಾತನನ್ನು ಹೊಗಳಿ ಕಾವ್ಯ ರಚಿಸುವವನು (5)
4.ಈತ ಸಂಪ್ರದಾಯ ವಿರೋಧಿ (3)
5.ಅವಸರವನ್ನು ಹೀಗೆ ಹೇಳಿ (3)
6.ಶೇಕಡಾವಾರು ಎನ್ನುತ್ತಿರುವವನ ಬೆನ್ನೆಲುಬು (3)
8.ಸಂತನಿಂದ ಆಗಿರುವ ಆನಂದ (3)
10.ಇದು ಮೊಟ್ಟೆಯಿಂದ ಹುಟ್ಟಿದುದು (3)
11.ಕುಣಿಯುತ ಹಾಕಿರುವ ಸರಗಂಟು (3)
15.ನೂರು ಸಾವಿರದಿಂದ ಆಗಿರುವ ಶುಭ ಚಿಹ್ನೆ (3)
16.ಆಯಾಳಿಗೆ ಆಗಿರುವ ಸುಸ್ತು (3)
17.ಮರಳಿ ಸಂಭವಿಸು (5)

ಮೇಲಿಂದ ಕೆಳಕ್ಕೆ
1.ನಿರೀಶ್ವರವಾದಿ ಇಲ್ಲಿದ್ದಾನೆ (3)
2.ಎರಡು ರಾಶಿಗಳು ಸಮವೆಂದು ದೃಢೀಕರಿಸುವಿಕೆ ಉಲ್ಟಾ ಆಗಿದೆ (5)
3.ವಿಧಿಯನ್ನು ಬರೆಯುವಾತ (3)
4.ಪಾಕದಲ್ಲಿರುವ ದೋಷ (3)
7.ಕೊನೆಗೆ ಕಡವಿದ್ದಾಗ,ನೂರಕ್ಕೆ ಇಷ್ಟು ಎಂಬ ದರ (3)
9.ತಾರುಣ್ಯವನ್ನು ಹೊಂದಿದವಳು (3)
10.ಈತ ಮೈಗಾವಲಿನವನು (5)
12.ಕೆಲವರು ಮಾಡುವ ಕಾರ್ಯ (3)
13.ಪ್ರಾಯಕ್ಕೆ ಬರುತ್ತಿರುವ ಎಮ್ಮೆ ಇಲ್ಲಿ ತಿರುಗಿದೆಯಲ್ಲಾ? (3)
14.ಯತಿಗೆ ಬಂದಿರುವ ಕೋಪ (3)



5909ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಾಯಮಾನ
3.ಮಾತೃಭೂಮಿ
5.ವಸ್ತಾದ 6.ದ್ರವ
8.ಕಲಹ 10.ಋವಸ
11.ದವಿಕೋ 12.ರಚಇಂ
14.ರವಿ 16.ಗಿಡಂಕೋ
17.ಆಪಾದಿತ 18.ರಸಹೀನ

ಮೇಲಿಂದ ಕೆಳಕ್ಕೆ:
1.ಜಾಲಂಧ್ರ 2.ನವರಸ
3.ಮಾದಕ 7.ವರ್ಣಸಂಕರ
9.ಹಲಾಲುಕೋರ 11.ದಗಾಕೋರ
13.ಇಂಗಿತ 15.ವಿಮಾನ

ಸುಡೊಕು 6295

		7		8			2	
	3							8
6		5		9		4		3
	2		6				3	
5		3	2		1	8		9
	1				9		4	
	6			2				4
3		8	9				5	
	5			3	4			1


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6294 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,644
ಇಂದಿನ ಅಂತ್ಯ	23,742
▲	98
ದಿನದ ಗರಿಷ್ಠ	23,822

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹565
12 ಕ್ಕೆ	₹75
ಮೈಸೂರು	
100ಕ್ಕೆ	₹568

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹416-608
ದ್ವಿತಳಿ (ಬಿ.ವಿ)	₹255-760

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹187
ಆರ್‌ಎಸ್‌ಎಸ್-5	₹181
ಗುಡ್ ಲಾಟ್	₹175

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹22900
ಎಸಿ	₹11745
ಆರ್‌ಪಿ	₹19000
ಆರ್‌ಸಿ	₹10420

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	45000-48500
ಕಾರ್ಕಳ	
ಹೊಸತು	25000-35000
ಹಳತು	30000-45000
ಕುಮಟ	
ಬೆಟ್ಟೆ	14239-40009
ಚಾಲಿ	33010-37509
ಚಿಪ್ಪು	15069-26019
ಕೋಕ	6569-24089
ಫ್ಯಾಕ್ಟರಿ	3569-20729
ಹಳೆಚಾಲಿ	36869-39499
ಹೊಸಚಾಲಿ	25089-29710
ಶಿವಮೊಗ್ಗ	
ರಾಶಿ	35500-51009
ಸರಕು	55009-82920
ಬೆಟ್ಟೆ	46599-54109
ಗೊರಬಲು	17539-29499
ಸಿದ್ದಾಪುರ	
ಬಿಳಿಗೋಟು	22709-25489
ಚಾಲಿ	32009-37299
ಕೋಕ	13109-13109
ಕೆಂಪುಗೋಟು	21389-21389
ರಾಶಿ	42099-46899
ತಟ್ಟಿಬೆಟ್ಟೆ	26909-27409
ಶಿರಸಿ	
ಬೆಟ್ಟೆ	29909-36100
ಬಿಳಿಗೋಟು	22699-30512
ಚಾಲಿ	34298-38791
ಕೆಂಪುಗೋಟು	12919-21299
ರಾಶಿ	42608-46698

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹14600-14600
ತುರುವೇಕೆರೆ	₹14000-14600

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹3000-4000
ಮಧ್ಯಮ	₹2000-3000
ಸಣ್ಣ	₹1000-2000

ವಿನಿಮಯ ದರ

$ ಡಾಲರ್	85.64
£ ಪೌಂಡ್	107.13
€ ಯುರೊ	88.70
¥ ಯೆನ್ (100ಕ್ಕೆ)	54

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1470 (1470)
ಸೋಯಾ (ರಿಫೈನ್ಡ್)	₹1275 (1270)
ಸೂರ್ಯಕಾಂತಿ (ರಿಫೈನ್ಡ್)	₹1370 (1370)
ಪಾಮೋಲಿನ್	₹1365 (1365)

ಮುಂಬೈ ಧಾರಣೆ

ಶೇಂಗಾ

01-01-2025

ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	10100-10200
ದಪ್ಪ ಮಧ್ಯಪ್ರದೇಶ(ಹೊಸ)	8800-8900
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1480 (1480)
ಒಂದು ವಾರದ ಡೆಲಿವರಿ	1475 (1475)
ಪಾಮ್ ವಾರದ ಡೆಲಿವರಿ	1363 (1363)
ಸೂರ್ಯಕಾಂತಿ ಎಣ್ಣೆ ಕಚ್ಚಾ	1275 (1275)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹76,300 (75,950)
ಬೆಳ್ಳಿ ಕೆ.ಜಿ ₹86,100 (86,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

₹3,850 ಕೋಟಿ ವಿಶೇಷ ಪ್ಯಾಕೇಜ್‌ಗೆ ಕೇಂದ್ರ ಸಂಪುಟ ಒಪ್ಪಿಗೆ

ಡಿಎಪಿಗೆ ಸಬ್ಸಿಡಿ ಮುಂದುವರಿಕೆ

ನವದೆಹಲಿ (ಪಿಟಿಐ): ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಬುಧವಾರ ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯು, ಡಿ-ಅಮೋನಿಯಂ ಫಾಸ್ಫೇಟ್ (ಡಿಎಪಿ) ಮೇಲಿನ ಹೆಚ್ಚುವರಿ ಸಬ್ಸಿಡಿ ಸೌಲಭ್ಯವನ್ನು ವಿಸ್ತರಿಸಿದೆ.

ರೈತರು ಪ್ರತಿ ಚೀಲವನ್ನು (50 ಕೆ.ಜಿ) ₹1,350 ಚಿಲ್ಲರೆ ದರದಲ್ಲಿ ಖರೀದಿಸಲು ಅನುಕೂಲವಾಗಲಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ₹3,850 ಕೋಟಿ ಹೊರೆಯಾಗಲಿದೆ. ಈ ಸಬ್ಸಿಡಿಯು ಜನವರಿ 1ರಿಂದ ಜಾರಿಗೆ ಬರಲಿದ್ದು, ಮುಂದಿನ ಆದೇಶದ ವರೆಗೆ ಜಾರಿಯಲ್ಲಿ ಇರಲಿದೆ ಎಂದು ಕೇಂದ್ರ ತಿಳಿಸಿದೆ.


ಕಳೆದ ವರ್ಷ ಸರ್ಕಾರವು ಏಪ್ರಿಲ್‌ನಿಂದ ಡಿಸೆಂಬರ್‌ಗೆ ಅನ್ವಯಿಸುವಂತೆ ಒಂದು ಟನ್‌ಗೆ ₹3,500 ವಿಶೇಷ ಸಬ್ಸಿಡಿಗೆ ಅನುಮತಿ ನೀಡಿತ್ತು. ಈ ಅವಧಿಯಲ್ಲಿ ಏರುತ್ತಿರುವ ವೆಚ್ಚ ಸರಿದೂಗಿಸಲು ₹2,625 ಕೋಟಿ ಪ್ಯಾಕೇಜ್ ಘೋಷಿಸಿತ್ತು.

ಪೋಷಕಾಂಶ ಆಧರಿತ ಸಬ್ಸಿಡಿ ಯೋಜನೆಯಡಿ ರೈತರಿಗೆ ಕೈಗೆಟಕುವ ದರದಲ್ಲಿ ಡಿಎಪಿ ರಸಗೊಬ್ಬರ ಒದಗಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ.

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್, 'ಮುಂಗಾರು ಮತ್ತು ಹಿಂಗಾರು ಅವಧಿಯಲ್ಲಿ ರೈತರಿಗೆ ಅನುಕೂಲ ಕಲ್ಪಿಸಲು ಈ ಕ್ರಮ ಕೈಗೊಳ್ಳಲಾಗಿದೆ' ಎಂದರು.

ಜಾಗತಿಕ ಬಿಕ್ಕಟ್ಟಿನಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಡಿಎಪಿ ರಸಗೊಬ್ಬರ ಬೆಲೆಯು ಏಕಾಏಕಿ ಬದಲಾವಣೆ ಕಾಣುತ್ತಿದೆ ಎಂದು ತಿಳಿಸಿದರು.

ರಸಗೊಬ್ಬರ ತಯಾರಕರು ಮತ್ತು ಆಮದುದಾರರ ಮೂಲಕ ಸರ್ಕಾರವು ಸಬ್ಸಿಡಿ ದರದಲ್ಲಿ 28 ಗ್ರೇಡ್ ಗುಣಮಟ್ಟದ ಪಿ ಆ್ಯಂಡ್ ಕೆ (ಫಾಸ್ಫೇಟಿಕ್ ಮತ್ತು ಪೊಟ್ಯಾಸಿಕ್) ರಸಗೊಬ್ಬರವನ್ನು ರೈತರಿಗೆ ಒದಗಿಸುತ್ತಿದೆ. ಪೋಷಕಾಂಶ ಆಧರಿತ ಸಬ್ಸಿಡಿ ಯೋಜನೆಯಡಿ 2010ರ ಏಪ್ರಿಲ್ 1ರಿಂದ ಈ ರಸಗೊಬ್ಬರಕ್ಕೆ ಸಬ್ಸಿಡಿ ಸೌಲಭ್ಯ ಕಲ್ಪಿಸಲಾಗಿದೆ.



ಬೆಳೆ ವಿಮೆ ವಿಸ್ತರಣೆಗೆ ಅಸ್ತು: ತಂತ್ರಜ್ಞಾನ ಅಳವಡಿಕೆಗೆ ಒತ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಮತ್ತು ಪುನರ್ ರಚಿಸಲಾದ ಹವಾಮಾನ ಆಧರಿತ ಬೆಳೆ ವಿಮಾ ಯೋಜನೆಯನ್ನು 2025-26ರವರೆಗೆ ಮುಂದುವರಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಈ ಪ್ರಮುಖ ಯೋಜನೆಗಳ ಅನುಷ್ಠಾನದ ವೇಳೆ ತಂತ್ರಜ್ಞಾನದ ಅಳವಡಿಕೆಗಾಗಿ ಪ್ರತ್ಯೇಕವಾಗಿ ₹824.77 ಕೋಟಿ ನಿಧಿಯನ್ನೂ ರಚಿಸಲಾಗಿದೆ.

'2020-21ರಿಂದ 2024-25ರವರೆಗೆ ಈ ಯೋಜನೆಗಳ ಒಟ್ಟು ವೆಚ್ಚ ₹66,550 ಕೋಟಿ ಆಗಿತ್ತು. ಈ ವಿಮೆಗಳ ಕುರಿತು ರೈತರಿಂದ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿದೆ. ಹೀಗಾಗಿ, ಈ ಯೋಜನೆಗಳನ್ನು 15ನೇ ಹಣಕಾಸು ಆಯೋಗದ ಅವಧಿ ಮುಗಿಯುವ ವರೆಗೆ ಮುಂದುವರಿಸಲಾಗುತ್ತದೆ' ಎಂದು ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗಾರರಿಗೆ ತಿಳಿಸಿದರು.

ಯೋಜನೆಗಳ ಒಟ್ಟು ಮೊತ್ತವನ್ನು ₹69,550 ಕೋಟಿಗೆ ಹೆಚ್ಚಿಸಲಾಗಿದೆ. ಈ ನಿರ್ಧಾರದಿಂದ ನೈಸರ್ಗಿಕ ವಿಕೋಪಗಳಿಂದ ತಮ್ಮ ಬೆಳೆಗಳನ್ನು ರಕ್ಷಿಸಲು ರೈತರಿಗೆ ಅನುಕೂಲವಾಗಲಿದೆ' ಎಂದರು.

ಆವಿಷ್ಕಾರ ಹಾಗೂ ತಂತ್ರಜ್ಞಾನದ ನಿಧಿಯಿಂದ ಪಾರದರ್ಶಕತೆ ಹೆಚ್ಚಲಿದೆ. ತಾಂತ್ರಿಕ ಉಪಕ್ರಮಗಳಿಗೆ, ಸಂಶೋಧನಾ ಚಟುವಟಿಕೆಗಳಿಗೆ ಈ ನಿಧಿಯನ್ನು ಬಳಸಲಾಗುತ್ತದೆ ಎಂದು ತಿಳಿಸಿದರು.

ಬೆಳೆ ಹಾನಿ, ಕ್ಲೇಮು ಇತ್ಯರ್ಥ ಮತ್ತು ವಿವಾದಗಳನ್ನು ತ್ವರಿತವಾಗಿ ಬಗೆಹರಿಸಲು ತಂತ್ರಜ್ಞಾನದ ಬಳಕೆಗೆ ಸಹಾಯವಾಗಲಿದೆ. ಕೃಷಿ ಸಚಿವಾಲಯವು ಈ ನಿಧಿಯನ್ನು ತಂತ್ರಜ್ಞಾನ ಆಧರಿತ ಇಳುವರಿ ಅಂದಾಜು ವ್ಯವಸ್ಥೆ (ಯೆಸ್-ಟೆಕ್), ಹವಾಮಾನ ಮಾಹಿತಿ ಮತ್ತು ಜಾಲ ದತ್ತಾಂಶ ವ್ಯವಸ್ಥೆ (ವಿಂಡ್ಸ್), ಸಂಶೋಧನೆ ಚಟುವಟಿಕೆಗಳಿಗೆ ಧನ ಸಹಾಯಕ್ಕಾಗಿ ಬಳಸಲಿದೆ ಎಂದರು.

ತಂತ್ರಜ್ಞಾನ ಆಧರಿತ ಆದಾಯ ಮುನ್ಸೂಚನೆ ವ್ಯವಸ್ಥೆಯಡಿ ರಿಮೋಟ್ ಸೆನ್ಸಿಂಗ್ ತಂತ್ರಜ್ಞಾನ ಬಳಸಿಕೊಂಡು ಇಳುವರಿ ಅಂದಾಜು ಮಾಡಲಾಗುತ್ತದೆ. ಕರ್ನಾಟಕ ಸೇರಿ ಒಂಬತ್ತು ಪ್ರಮುಖ ರಾಜ್ಯಗಳು ಈ ತಂತ್ರಜ್ಞಾನ ಅಳವಡಿಸಿಕೊಂಡಿವೆ. ಇತರೆ ರಾಜ್ಯಗಳಲ್ಲಿ ತಂತ್ರಜ್ಞಾನ ಅಳವಡಿಕೆ ಆರಂಭವಾಗಿದೆ ಎಂದು ತಿಳಿಸಿದರು.

ವಿಂಡ್ಸ್ ಅಡಿಯಲ್ಲಿ ಬ್ಲಾಕ್ ಮಟ್ಟದಲ್ಲಿ ಸ್ವಯಂಚಾಲಿತ ಹವಾಮಾನ ಕೇಂದ್ರಗಳನ್ನು ಮತ್ತು ಪಂಚಾಯಿತಿ ಮಟ್ಟದಲ್ಲಿ ಸ್ವಯಂಚಾಲಿತ ಮಳೆ ಮಾಪಕಗಳನ್ನು ಸ್ಥಾಪಿಸುವ ಆಲೋಚನೆ ಇದೆ ಎಂದರು.

₹2 ಸಾವಿರ ಮುಖಬೆಲೆ ನೋಟು ಶೇ 98.12 ವಾಪಸ್



ಮುಂಬೈ (ಪಿಟಿಐ): ₹2 ಸಾವಿರ ಮುಖಬೆಲೆಯ ಶೇ 98.12ರಷ್ಟು ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿದ್ದು, ಜನರ ಬಳಿ ಇನ್ನೂ ₹6,691 ಕೋಟಿ ಮೌಲ್ಯದ ನೋಟುಗಳು ಉಳಿದಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬುಧವಾರ ತಿಳಿಸಿದೆ.

₹2 ಸಾವಿರ ಮುಖಬೆಲೆಯ ಒಟ್ಟು ₹3.56 ಲಕ್ಷ ಕೋಟಿ ಮೌಲ್ಯದ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುವುದಾಗಿ 2023ರ ಮೇ 19ರಂದು ಆರ್‌ಬಿಐ ಘೋಷಿಸಿತ್ತು.

ಬ್ಯಾಂಕ್‌ಗಳಲ್ಲಿ ಠೇವಣಿ ಇಡುವ ಹಾಗೂ ಬೇರೆ ಮುಖಬೆಲೆಯ ನೋಟುಗಳೊಂದಿಗೆ ಬದಲಾಯಿಸಿಕೊಳ್ಳುವುದಕ್ಕೆ ಬೆಂಗಳೂರು ಸೇರಿ ಆರ್‌ಬಿಐನ 19 ಪ್ರಾದೇಶಿಕ ಕಚೇರಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.

ಚಿನ್ನ, ಬೆಳ್ಳಿ ದರ ಏರಿಕೆ



ನವದೆಹಲಿ (ಪಿಟಿಐ): ಹೊಸ ವರ್ಷದ ಮೊದಲ ದಿನವಾದ ಬುಧವಾರ ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ದರ ಏರಿಕೆಯಾಗಿದೆ.

ಚಿನ್ನದ ದರವು 10 ಗ್ರಾಂಗೆ (ಶೇ 99.9ರಷ್ಟು ಪರಿಶುದ್ಧತೆ) ₹440 ಏರಿಕೆಯಾಗಿದ್ದು, ₹79,390 ಆಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿದ್ದು, ₹78,840 ಆಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹800 ಹೆಚ್ಚಳವಾಗಿ, ₹90,500ರಂತೆ ಮಾರಾಟವಾಗಿದೆ.

ದಾಸ್ತಾನುಗಾರರಿಂದ ಖರೀದಿ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಹಾಗಾಗಿ, ಬೆಲೆ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

'ಕ್ರಿಸ್‌ಮಸ್ ರಜೆ ಅಂಗವಾಗಿ ಕಳೆದ ಒಂದು ವಾರದಲ್ಲಿ ಹಳದಿ ಲೋಹದ ಬೆಲೆಯು ಮಧ್ಯಮ ಪ್ರಮಾಣದಲ್ಲಿ ಏರಿಕೆ ಕಂಡಿತ್ತು. ಈ ವಾರದ ವಹಿವಾಟಿನಲ್ಲಿ ಬೆಲೆ ಏರಿಕೆಯಾಗುವುದನ್ನು ಹೂಡಿಕೆದಾರರು ಎದುರು ನೋಡುತ್ತಿದ್ದಾರೆ ಎಂದು ಹೇಳಿದ್ದಾರೆ.

ಅಧಿಕ ಇಳುವರಿ: ಬೆಳೆಗಾರರಿಗೆ ವರದಾನ

ಹೊಸ ತಳಿ ಈರುಳ್ಳಿ ಅಭಿವೃದ್ಧಿ

● ಶ್ರೀಕಾಂತ ಕಲ್ಲಮ್ಮನವರ

ಹುಬ್ಬಳ್ಳಿ: ಮಹಾರಾಷ್ಟ್ರದ ನಾಸಿಕ್‌ನಲ್ಲಿರುವ ರಾಷ್ಟ್ರೀಯ ತೋಟಗಾರಿಕಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು, ಹೊಸ ಈರುಳ್ಳಿ ತಳಿಯಾದ 'ಲೈನ್-883' ಅನ್ನು ಅಭಿವೃದ್ಧಿಪಡಿಸಿದೆ. ಈ ತಳಿಯು ಅತಿ ಕಡಿಮೆ ಅವಧಿಯಲ್ಲಿ ಕಟಾವಿಗೆ ಬರಲಿದ್ದು, ಹೆಚ್ಚು ಇಳುವರಿ ನೀಡಲಿದೆ.

'ಕಪ್ಪು ಒಣಭೂಮಿಯಲ್ಲಿ ಈ ತಳಿಯ ಈರುಳ್ಳಿ ಬೆಳೆಯಬಹುದು. ಜೂನ್‌ನಿಂದ ಆಗಸ್ಟ್‌ವರೆಗೆ ಬಿತ್ತನೆ ಮಾಡಬಹುದು. 85ರಿಂದ 90 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಜೂನ್ ಮೊದಲ ವಾರದಲ್ಲಿ ಬಿತ್ತನೆ ಮಾಡಿದರೆ ಸೆಪ್ಟೆಂಬರ್ ಮೊದಲ ವಾರದಲ್ಲಿ ಕಟಾವು ಆಗಿ ಮಾರುಕಟ್ಟೆಗೆ ಪೂರೈಸಬಹುದು' ಎಂದು ಹುಬ್ಬಳ್ಳಿಯ ರಾಷ್ಟ್ರೀಯ ತೋಟಗಾರಿಕೆ ಸಂಶೋಧನೆ ಮತ್ತು ಅಭಿವೃದ್ಧಿ ಪ್ರತಿಷ್ಠಾನ ಕೇಂದ್ರದ ತಾಂತ್ರಿಕ ಅಧಿಕಾರಿ ಧನಂಜಯ ದೇಸಾಯಿ ತಿಳಿಸಿದರು.

ಸಾಮಾನ್ಯ ತಳಿಗಳ ಈರುಳ್ಳಿ ಪ್ರತಿ ಹೆಕ್ಟೇರ್‌ಗೆ 200ರಿಂದ 250 ಕ್ವಿಂಟಲ್ ಇಳುವರಿ ನೀಡಿದರೆ, ಲೈನ್-883 ತಳಿಯು 300ರಿಂದ 325 ಕ್ವಿಂಟಲ್ ನೀಡುತ್ತದೆ. ಈ ತಳಿಯ ಈರುಳ್ಳಿ ಗೆಡ್ಡೆ ದೊಡ್ಡಾಗಿರುತ್ತವೆ. 5ರಿಂದ 5.5 ಸೆಂ.ಮೀ ಸುತ್ತಳತೆ ಹೊಂದಿರುತ್ತವೆ.



ಈರುಳ್ಳಿಯ ಹೊಸ ತಳಿ 'ಲೈನ್–883'

ಆಕರ್ಷಕ ದಟ್ಟ ಕೆಂಪು ಬಣ್ಣ ಹೊಂದಿರುತ್ತವೆ. ಗೆಡ್ಡೆಯ ಒಳಪದರ ಬಿಗಿಯಾಗಿದ್ದು, ಗೆಡ್ಡೆ ಗಟ್ಟಿ ಇರುತ್ತದೆ. ಪ್ರತಿ ಗೆಡ್ಡೆ 110ರಿಂದ 120 ಗ್ರಾಂವರೆಗೆ ತೂಕ ಹೊಂದಿರುತ್ತದೆ. ಅಡುಗೆ ಸಂದರ್ಭದಲ್ಲಿ ಇದನ್ನು ಕತ್ತರಿಸುವಾಗ ಕಣ್ಣು ಊರಿ ಕಡಿಮೆ ಇರುತ್ತದೆ. ಸಿಹಿ ಅಂಶ ಶೇ 14ರಷ್ಟಿದೆ.


ನಾಸಿಕ್‌ನಲ್ಲಿ ತಳಿ ಅಭಿವೃದ್ಧಿ: ನಾಫೆಡ್ ಅಡಿ ಕಾರ್ಯ ನಿರ್ವಹಿಸುತ್ತಿರುವ ರಾಷ್ಟ್ರೀಯ ತೋಟಗಾರಿಕಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು ಈ ತಳಿಯನ್ನು ಹಲವು ವರ್ಷಗಳ ಸಂಶೋಧನೆಯಿಂದ ಅಭಿವೃದ್ಧಿಪಡಿಸಿದೆ.

> **ಈ ಹೊಸ ತಳಿ ಈರುಳ್ಳಿ ಬೆಳೆಯಲು ಯಾವುದೇ ವಿಶೇಷ ಕ್ರಮಗಳಿಲ್ಲ. ಉತ್ತಮ ಇಳುವರಿ ಬರುವುದರಿಂದ ರೈತರಿಗೆ ಹೆಚ್ಚು ಲಾಭ ಸಿಗಲಿದೆ**
>
> **ಡಾ. ತಿಲಕ್ ಜೆ.ಸಿ.,** ಮುಖ್ಯಸ್ಥ, ರಾಷ್ಟ್ರೀಯ ತೋಟಗಾರಿಕೆ ಸಂಶೋಧನೆ ಮತ್ತು ಅಭಿವೃದ್ಧಿ ಪ್ರತಿಷ್ಠಾನ ಕೇಂದ್ರ

ರಾಜ್ಯದ ಹಲವು ಕಡೆ ಪ್ರಾಯೋಗಿಕವಾಗಿ ಬೆಳೆಯಲಾಗಿದ್ದು, ಉತ್ತಮ ಫಲಿತಾಂಶ ಬಂದಿದೆ. ಈಗ ಮುಕ್ತವಾಗಿ ಬೆಳೆಯಲು ಬಿತ್ತನೆ ಬೀಜಗಳನ್ನು ಮಾರಲಾಗುತ್ತಿದೆ. ಬಿತ್ತನೆ ಬೀಜದ ದರ ಅಂದಾಜು ಪ್ರತಿ ಕೆ.ಜಿಗೆ ₹2,000 ಇದೆ.

ಆಸಕ್ತರು ಹುಬ್ಬಳ್ಳಿಯ ಅಮರಗೋಳ ಎಪಿಎಂಸಿಯಲ್ಲಿರುವ ರಾಷ್ಟ್ರೀಯ ತೋಟಗಾರಿಕೆ ಸಂಶೋಧನೆ ಮತ್ತು ಅಭಿವೃದ್ಧಿ ಪ್ರತಿಷ್ಠಾನ ಕೇಂದ್ರವನ್ನು ಸಂಪರ್ಕಿಸಬಹುದು (ಮೊಬೈಲ್ 82966 97152 ಅಥವಾ ದೂರವಾಣಿ ಸಂಖ್ಯೆ 0836-2225813).

₹1.77 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ: ಕೇಂದ್ರ



ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ ಮೂಲಕ 2024ರ ಡಿಸೆಂಬರ್‌ನಲ್ಲಿ ₹1.77 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ. 2023ರ ಇದೇ ಅವಧಿಯಲ್ಲಿ ಸಂಗ್ರಹವಾಗಿದ್ದ ವರಮಾನಕ್ಕೆ ಹೋಲಿಸಿದರೆ ಶೇ 7.3ರಷ್ಟು ಹೆಚ್ಚಳವಾಗಿದೆ ಎಂದು ಕೇಂದ್ರ ಸರ್ಕಾರ ಬುಧವಾರ ತಿಳಿಸಿದೆ.

ಕೇಂದ್ರ ಜಿಎಸ್‌ಟಿ ₹32,836 ಕೋಟಿ, ರಾಜ್ಯ ಜಿಎಸ್‌ಟಿ ₹40,499 ಕೋಟಿ, ಸಮಗ್ರ ಜಿಎಸ್‌ಟಿ ₹47,783 ಕೋಟಿ ಹಾಗೂ ಸೆಸ್ ರೂಪದಲ್ಲಿ ₹11,471 ಕೋಟಿ ಸಂಗ್ರಹವಾಗಿದೆ.

ದೇಶೀಯ ವಹಿವಾಟು ಮೇಲಿನ ಜಿಎಸ್‌ಟಿ ₹1.32 ಲಕ್ಷ ಕೋಟಿ ಸಂಗ್ರಹವಾಗಿದೆ.

ಒಟ್ಟಾರೆ ಶೇ 8.4ರಷ್ಟು ಏರಿಕೆಯಾಗಿದೆ. ಆಮದು ಮೇಲಿನ ಸಂಗ್ರಹದಲ್ಲಿ ಶೇ 4ರಷ್ಟು ಏರಿಕೆಯಾಗಿದ್ದು, ₹44,268 ಕೋಟಿ ಸಂಗ್ರಹವಾಗಿದೆ.

ನವೆಂಬರ್‌ನಲ್ಲಿ ₹1.82 ಲಕ್ಷ ಕೋಟಿ ವರಮಾನ ಸಂಗ್ರಹವಾಗಿತ್ತು. ಏಪ್ರಿಲ್‌ನಲ್ಲಿ ₹2.10 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದ್ದು, ದಾಖಲೆಯಾಗಿದೆ.

ಡಿಸೆಂಬರ್‌ನಲ್ಲಿ ₹22,490 ಕೋಟಿ ಮರುಪಾವತಿ ಮಾಡಲಾಗಿದೆ. 2023ರ ಇದೇ ಅವಧಿಗೆ ಹೋಲಿಸಿದರೆ ಶೇ 31ರಷ್ಟು ಹೆಚ್ಚಳವಾಗಿದೆ. ಮರುಪಾವತಿ ಬಳಿಕ ನಿವ್ವಳ ವರಮಾನ ಸಂಗ್ರಹವು ₹1.54 ಲಕ್ಷ ಕೋಟಿ ಆಗಿದೆ.

ರಷ್ಯಾ, ಇರಾನ್ ಸಂಘಟನೆಗಳಿಗೆ ನಿರ್ಬಂಧ ವಿಧಿಸಿದ ಅಮೆರಿಕ

ವಾಷಿಂಗ್ಟನ್ (ಎಪಿ): ಅಮೆರಿಕದಲ್ಲಿ ಕಳೆದ ವರ್ಷ ನಡೆದ ಚುನಾವಣೆಯಲ್ಲಿ ಅಪಪ್ರಚಾರ ನಡೆಸಿದ ರಷ್ಯಾ ಮತ್ತು ಇರಾನ್‌ನ ಎರಡು ಸಂಘಟನೆಗಳ ಮೇಲೆ ಅಮೆರಿಕ ನಿರ್ಬಂಧ ವಿಧಿಸಿದೆ.

ಇರಾನ್ ಮೂಲದ 'ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್' (ಐಆರ್‌ಜಿಸಿ) ಮತ್ತು ರಷ್ಯಾ ಮೂಲದ 'ರಷ್ಯನ್ ಮೇನ್ ಇಂಟಲಿಜೆನ್ಸ್ ಡೈರೆಕ್ಟರೇಟ್'ಗಳು (ಜಿಆರ್‌ಯು) ಮತದಾರರ ದಿಕ್ಕು ತಪ್ಪಿಸುವ ನಿಟ್ಟಿನಲ್ಲಿ ಸುಳ್ಳು ಮಾಹಿತಿ ಹಬ್ಬಿಸಿ ಪ್ರಚಾರ ನಡೆಸಿವೆ ಎಂಬ ಆರೋಪದ ಮೇರೆಗೆ ಅಮೆರಿಕ ಈ ಕ್ರಮ ತೆಗೆದುಕೊಂಡಿದೆ.

ಈ ಎರಡೂ ಸಂಘಟನೆಗಳು ಅಧ್ಯಕ್ಷೀಯ ಚುನಾವಣೆ ಸಂದರ್ಭದಲ್ಲಿ ಮತದಾರರನ್ನು ವಿಭಜಿಸಲು ಯತ್ನಿಸುವ ಮೂಲಕ ಚುನಾವಣೆಯಲ್ಲಿ ಹಸ್ತಕ್ಷೇಪ ನಡೆಸಿವೆ ಎಂದು ಅಮೆರಿಕ ಆರೋಪಿಸಿದೆ.

ನಕಲಿ ವಿಡಿಯೊಗಳು, ಡೀಪ್‌ಫೇಕ್ ವಿಡಿಯೊಗಳು, ಸುಳ್ಳು ಸುದ್ದಿಗಳನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ಪ್ರಚಾರ ನಡೆಸಿ ಮತದಾರರಿಗೆ ತಪ್ಪು ಮಾಹಿತಿ ರವಾನಿಸುವ ಕಾರ್ಯವನ್ನು ಅವು ನಿರ್ವಹಿಸಿವೆ ಎಂದು ಅಮೆರಿಕದ ಗುಪ್ತಚರ ಸಂಸ್ಥೆ ತಿಳಿಸಿದೆ.

'ನಮ್ಮ ಚುನಾವಣಾ ಪ್ರಕ್ರಿಯೆಗಳು ಮತ್ತು ಸಂಸ್ಥೆಗಳನ್ನು ಇರಾನ್ ಮತ್ತು ರಷ್ಯಾದ ಸರ್ಕಾರಗಳು ಗುರಿಯಾಗಿಸಿ ಕಾರ್ಯ ನಿರ್ವಹಿಸಿವೆ' ಎಂದು ಭಯೋತ್ಪಾದನೆ ಮತ್ತು ಹಣಕಾಸು ಗುಪ್ತಚರ ವಿಭಾಗದ ಅಧೀನ ಕಾರ್ಯದರ್ಶಿ ಬ್ರಾಡ್ಲಿ ಟಿ. ಸ್ಮಿತ್ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಅಮೆರಿಕದ ಆರೋಪಗಳನ್ನು ರಷ್ಯಾ ಮತ್ತು ಇರಾನ್‌ನ ಅಧಿಕಾರಿಗಳು ಅಲ್ಲಗಳೆದಿದ್ದಾರೆ. 'ಅನ್ಯ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ರಷ್ಯಾ ಹಸ್ತಕ್ಷೇಪ ಮಾಡುವುದಿಲ್ಲ' ಎಂದು ವಾಷಿಂಗ್ಟನ್‌ನಲ್ಲಿರುವ ರಷ್ಯಾ ರಾಯಭಾರ ಕಚೇರಿಯ ವಕ್ತಾರರು ಪ್ರತಿಕ್ರಿಯಿಸಿದ್ದಾರೆ.

ಟ್ರಕ್‌ನಿಂದ ಡಿಕ್ಕಿ ಹೊಡೆಸಿ 10 ಜನರ ಹತ್ಯೆ: ಭಯೋತ್ಪಾದಕ ದಾಳಿ ಶಂಕೆ

ನ್ಯೂ ಆರ್ಲೀನ್ಸ್ (ಎಪಿ): ನ್ಯೂ ಆರ್ಲೀನ್ಸ್‌ನಲ್ಲಿ ಹೊಸ ವರ್ಷದ ದಿನ ವ್ಯಕ್ತಿಯೊಬ್ಬ ಟ್ರಕ್‌ನಿಂದ ಡಿಕ್ಕಿ ಹೊಡೆಸಿ 10 ಜನರನ್ನು ಕೊಂದು, 30 ಮಂದಿ ಗಾಯಗೊಳಿಸಿದ್ದಾನೆ. ಇದು ಭಯೋತ್ಪಾದಕ ದಾಳಿ ಎಂದು ಪರಿಗಣಿಸಿ ಎಫ್‌ಬಿಐ ತನಿಖೆ ನಡೆಸುತ್ತಿದೆ.

ಟ್ರಕ್ ಚಾಲಕ ಪೊಲೀಸರ ಜತೆ ನಡೆದ ಗುಂಡಿನ ಚಕಮಕಿಯಲ್ಲಿ ಹತನಾಗಿದ್ದಾನೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಬುಧವಾರ ನಸುಕಿನ 3.15ಕ್ಕೆ ಫ್ರೆಂಚ್ ಕ್ವಾರ್ಟರ್ ಜಿಲ್ಲೆಯ ಬೌರ್ಬನ್ ಸ್ಟ್ರೀಟ್‌ನಲ್ಲಿ ಸಂತೋಷಕೂಟಕ್ಕೆ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದಾಗ, ಪಾದಚಾರಿಗಳ ಗುಂಪಿನ ಮೇಲೆ ಈತ ಟ್ರಕ್ ನುಗ್ಗಿಸಿದ್ದಾನೆ. ನಂತರ ಆತ ಟ್ರಕ್‌ನಿಂದ ಹೊರಬಂದು ಪೊಲೀಸರತ್ತ ಗುಂಡು ಹಾರಿಸಿದ್ದಾನೆ. ಆಗ ಇಬ್ಬರು ಪೊಲೀಸ್ ಅಧಿಕಾರಿಗಳು ಗಾಯಗೊಂಡಿದ್ದು, ಅವರ ಸ್ಥಿತಿ ಸ್ಥಿರವಾಗಿದೆ.

ನ್ಯೂ ಆರ್ಲೀನ್ಸ್ ಮೇಯರ್ ಲಾಟೋಯಾ ಕ್ಯಾಂಟ್ರೆಲ್ ಅವರು ಈ ಕೃತ್ಯವನ್ನು 'ಭಯೋತ್ಪಾದಕ ದಾಳಿ' ಎಂದು ಹೇಳಿದ್ದರೆ, ನಗರದ ಪೊಲೀಸ್ ಮುಖ್ಯಸ್ಥರು 'ಈ ಕೃತ್ಯವು ಉದ್ದೇಶ ಪೂರ್ವಕವಾಗಿಯೇ ನಡೆಸಿರುವುದು ಸ್ಪಷ್ಟ' ಎಂದು ತಿಳಿಸಿದ್ದಾರೆ.

ಆರಂಭದಲ್ಲಿ ಈ ಹೇಳಿಕೆ ತಳ್ಳಿಹಾಕಿದ ಎಫ್‌ಬಿಐ ಅಧಿಕಾರಿಯೊಬ್ಬರು 'ಭಯೋತ್ಪಾದಕ ಕೃತ್ಯ' ಅಲ್ಲ ಎಂದಿದ್ದರು. ಆದರೆ, ಎಫ್‌ಬಿಐನ ಮತ್ತೊಬ್ಬ ಅಧಿಕಾರಿ ಅಲೆಥಿಯಾ ಡಂಕನ್, 'ಘಟನಾ ಸ್ಥಳದಲ್ಲಿ ಪತ್ತೆಯಾಗಿರುವ ಕಚ್ಚಾ ಬಾಂಬ್ ಬಗ್ಗೆ ತನಿಖೆ ನಡೆಯುತ್ತಿದೆ' ಎಂದು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಹೊಸ ವರ್ಷದ ಮೊದಲ ದಿನವೇ ಷೇರುಪೇಟೆ ಶುಭಾರಂಭ

ಮುಂಬೈ (ಪಿಟಿಐ): ಹೊಸ ವರ್ಷದ ಮೊದಲ ದಿನವಾದ ಬುಧವಾರದ ವಹಿವಾಟಿನಲ್ಲಿ ಷೇರುಪೇಟೆ ಏರಿಕೆ ದಾಖಲಿಸಿದ್ದು, ಹೂಡಿಕೆದಾರರ ಮೊಗದಲ್ಲಿ ಮಂದಹಾಸ ಮೂಡಿಸಿದೆ.

ಬ್ಲೂಚಿಪ್ ಕಂಪನಿಗಳ ಷೇರು ಖರೀದಿ ಹೆಚ್ಚಳವು ಸೂಚ್ಯಂಕಗಳ ಏರಿಕೆಗೆ ನೆರವಾಯಿತು. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 368 ಅಂಶ ಏರಿಕೆ ಕಂಡು 78,507 ಅಂಶಗಳಲ್ಲಿ ಸ್ಥಿರಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 617 ಅಂಶ ಏರಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 98 ಅಂಶ ಏರಿಕೆ ಕಂಡು 23,742 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.



ಸೆನ್ಸೆಕ್ಸ್ ಗುಚ್ಛದಲ್ಲಿನ ಮಾರುತಿ, ಮಹೀಂದ್ರ ಆ್ಯಂಡ್ ಮಹೀಂದ್ರ, ಎಲ್ ಆ್ಯಂಡ್ ಟಿ, ಬಜಾಜ್ ಫೈನಾನ್ಸ್, ಟಾಟಾ ಮೋಟರ್ಸ್, ಇಂಡಸ್ ಇಂಡ್ ಬ್ಯಾಂಕ್, ಏಷ್ಯನ್ ಪೇಂಟ್ಸ್, ಪವರ್ ಗ್ರಿಡ್, ಎಚ್‌ಡಿಎಫ್‌ಸಿ ಬ್ಯಾಂಕ್ ಹಾಗೂ ಎಕ್ಸಿಸ್ ಬ್ಯಾಂಕ್ ಷೇರುಗಳ ಮೌಲ್ಯ ಏರಿಕೆಯಾಗಿದೆ.

ಟಾಟಾ ಸ್ಟೀಲ್, ಅದಾನಿ ಪೋರ್ಟ್ಸ್, ಜೊಮಾಟೊ, ಎಚ್‌ಸಿಎಲ್ ಟೆಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಚ್‌ಸಿಎಲ್, ಟೆಕ್ ಮಹೀಂದ್ರ ಷೇರಿನ ಮೌಲ್ಯ ಕುಸಿತ ಕಂಡಿದೆ.

ಮಂಗಳವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹4,645 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.88ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರಲ್‌ಗೆ 74.64 ಡಾಲರ್ ಆಗಿದೆ.

ಕೃಷಿ ವಲಯ ಶೇ 4ರಷ್ಟು ಪ್ರಗತಿ ನಿರೀಕ್ಷೆ: ಚೌಹಾಣ್

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದಲ್ಲಿ ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ವಲಯಗಳು ಶೇ 3.5ರಿಂದ ಶೇ 4ರಷ್ಟು ಪ್ರಗತಿ ಕಾಣುವ ನಿರೀಕ್ಷೆಯಿದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

ಕೇಂದ್ರ ಸರ್ಕಾರವು ರೈತರ ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ನೀಡಲು ಕ್ರಮವಹಿಸಿದೆ. ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದಂತೆ ಹಲವು ಕ್ರಮಗಳನ್ನು ಕೈಗೊಂಡಿದೆ. ಬಡವರಿಗೆ ವಸತಿ ಸೌಲಭ್ಯ, ಗ್ರಾಮೀಣ ರಸ್ತೆಗಳ ಅಭಿವೃದ್ಧಿ, ಕೌಶಲ ಅಭಿವೃದ್ಧಿ ಹಾಗೂ 'ಲಖ್ಪತಿ ದೀದಿ' ಯೋಜನೆಯಡಿ ಮಹಿಳೆಯರ ಸಬಲೀಕರಣಕ್ಕೆ ಒತ್ತು ನೀಡಿದೆ ಎಂದು 'ಎಕ್ಸ್'ನಲ್ಲಿ ತಿಳಿಸಿದ್ದಾರೆ. 2023–24ನೇ ಆರ್ಥಿಕ ವರ್ಷದಲ್ಲಿ ಕೃಷಿ ವಲಯವು ಶೇ 1.4ರಷ್ಟು ಪ್ರಗತಿ ದಾಖಲಿಸಿತ್ತು.



ಹೊಸ ರಂಗು ಹೊಸ ವರ್ಷದ ಅಂಗವಾಗಿ ದುಬೈನ ಬುರ್ಜ್ ಖಲೀಫಾ ಕಟ್ಟಡವು ವಿದ್ಯುತ್ ದೀಪಗಳಿಂದ ಕಂಗೊಳಿಸಿತು –ಎಎಫ್‌ಪಿ ಚಿತ್ರ

ಕೊಲಿಜಿಯಂ ನಡೆಗೆ ಸಿಂಘ್ವಿ ಬೆಂಬಲ



ನವದೆಹಲಿ (ಪಿಟಿಐ): ಹೈಕೋರ್ಟ್ ನ್ಯಾಯಮೂರ್ತಿಗಳ ಹತ್ತಿರದ ಸಂಬಂಧಿಗಳನ್ನು ನ್ಯಾಯಮೂರ್ತಿಗಳನ್ನಾಗಿ ನೇಮಕ ಮಾಡದೆ ಇರುವ ಪ್ರಸ್ತಾವವನ್ನು ಬೆಂಬಲಿಸಿರುವ ಹಿರಿಯ ವಕೀಲ ಹಾಗೂ ಕಾಂಗ್ರೆಸ್ ಮುಖಂಡ ಅಭಿಷೇಕ್ ಮನು ಸಿಂಘ್ವಿ ಅವರು, ಈ ಪ್ರಸ್ತಾವವನ್ನು ಆದಷ್ಟು ಬೇಗ ಅನುಷ್ಠಾನಕ್ಕೆ ತರಬೇಕು ಎಂದು ಹೇಳಿದ್ದಾರೆ.

'ಮಾಡಿ ತೋರಿಸುವುದಕ್ಕಿಂತ ಹೇಳುವುದು ಸುಲಭ. ಹೈಕೋರ್ಟ್‌ಗಳಲ್ಲಿ ನ್ಯಾಯಮೂರ್ತಿ ಆಗಿರುವವರ ಸಂಬಂಧಿಕರು ಅಲ್ಲಿಯೇ ವಕೀಲರಾಗಿ ಕೆಲಸ ಮಾಡುವುದನ್ನು ಕೂಡ ನಿಷೇಧಿಸಲು ಇದುವರೆಗೆ ನಮಗೆ ಆಗಿಲ್ಲ. ವ್ಯವಸ್ಥೆಯೇ ಹೆಚ್ಚು ಬಲಿಷ್ಠ ಎಂಬುದು ಮತ್ತೆ ಮತ್ತೆ ಸಾಬೀತಾಗಿದೆ' ಎಂದು ಸಿಂಘ್ವಿ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಡ್ತಿಗೆ ಪರಿಗಣಿತವಾಗಿರುವ ನ್ಯಾಯಮೂರ್ತಿಗಳು ಇರುವ ಹಾಲ್‌ನಲ್ಲಿ ಕೊಲಿಜಿಯಂ ಸದಸ್ಯರು ಮಾರುವೇಷದಲ್ಲಿ ಕೂರಬೇಕು, ವಕೀಲರನ್ನು ನ್ಯಾಯಮೂರ್ತಿಗಳಾಗಿ ನೇಮಕ ಮಾಡುವ ಬದಲು ಅವರನ್ನು ಕೂಡ ಮಾರುವೇಷದಲ್ಲಿ ಪರಿಶೀಲಿಸಬೇಕು ಎಂಬುದಾಗಿ ತಾವು ದಶಕಗಳ ಹಿಂದೆ ಬರೆದಿದ್ದುದಾಗಿ ಸಿಂಘ್ವಿ ಹೇಳಿದ್ದಾರೆ.

ಹೈಕೋರ್ಟ್‌ಗಳಲ್ಲಿ ನ್ಯಾಯಮೂರ್ತಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವವರ ಹತ್ತಿರದ ಸಂಬಂಧಿಗಳನ್ನು ನ್ಯಾಯಮೂರ್ತಿಗಳನ್ನಾಗಿ ನೇಮಕ ಮಾಡಬಾರದು ಎಂಬ ಪ್ರಸ್ತಾವನೆಯನ್ನು ಸುಪ್ರೀಂ ಕೋರ್ಟ್‌ನ ಕೊಲಿಜಿಯಂ (ಹಿರಿಯ ನ್ಯಾಯಮೂರ್ತಿಗಳ ಸಮಿತಿ) ಪರಿಶೀಲಿಸುವ ಸಾಧ್ಯತೆ ಇದೆ ಎಂದು ಮೂಲಗಳನ್ನು ಉಲ್ಲೇಖಿಸಿ ಪಿಟಿಐ ಸುದ್ದಿಸಂಸ್ಥೆ ಈಚೆಗೆ ವರದಿ ಮಾಡಿದೆ.

ಸಂಕ್ಷಿಪ್ತ ಸುದ್ದಿ

ವಯನಾಡ್ ಸಂತ್ರಸ್ತರಿಗೆ 2 ಉಪನಗರ ನಿರ್ಮಾಣ ಚಿಂತನೆ

ತಿರುವನಂತಪುರ: ವಯನಾಡ್ ಜಿಲ್ಲೆಯ ಮುಂಡಕ್ಕೈ, ಚೂರಲ್‌ಮಲದಲ್ಲಿ ಸಂಭವಿಸಿದ್ದ ಭೂಕುಸಿತದ ಸಂತ್ರಸ್ತರಿಗೆ ಕರ್ನಾಟಕ ಸರ್ಕಾರ ಸೇರಿದಂತೆ ವಿವಿಧ ರಾಜ್ಯ ಸರ್ಕಾರಗಳ ನೆರವಿನಲ್ಲಿ ಎರಡು ಉಪ ನಗರಗಳನ್ನು ಅಭಿವೃದ್ಧಿಪಡಿಸಲು ಕೇರಳ ಸರ್ಕಾರ ಚಿಂತನೆ ನಡೆಸಿದೆ.

ಸಂತ್ರಸ್ತರಿಗೆ 100ಕ್ಕೂ ಅಧಿಕ ವಸತಿ ನಿರ್ಮಿಸುವ ಭರವಸೆ ನೀಡಿರುವ 38 ಪ್ರಾಯೋಜಕರ ಪ್ರತಿನಿಧಿಗಳ ಜೊತೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಬುಧವಾರ ಈ ಕುರಿತು ಸಭೆ ನಡೆಸಿದರು.

100 ಮನೆ ನಿರ್ಮಿಸಿಕೊಡಲಾಗುವುದು ಎಂದು ಭರವಸೆ ನೀಡಿರುವ ಕರ್ನಾಟಕ ಸರ್ಕಾರ ಮತ್ತು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರ ಪ್ರತಿನಿಧಿಗಳು ಈ ಸಭೆಯಲ್ಲಿ ಪಾಲ್ಗೊಂಡಿದ್ದರು.

ವಸತಿ ನಿರ್ಮಾಣದಲ್ಲಿ ಪಾರದರ್ಶಕತೆಗೆ ಒತ್ತು ನೀಡಲು ಮತ್ತು ಪ್ರಾಯೋಜಕರೂ ನಿರ್ಮಾಣ ಕಾರ್ಯ ಪರಿಶೀಲಿಸಲು ಆಗುವಂತೆ ಆನ್‌ಲೈನ್ ಟ್ರ್ಯಾಕಿಂಗ್ ವ್ಯವಸ್ಥೆ ರೂಪಿಸಲು ಸರ್ಕಾರ ತೀರ್ಮಾನಿಸಿದೆ.

ಕಲ್ಪೆಟ್ಟಾದ ಎಲ್‌ಸ್ಟೋನ್ ಎಸ್ಟೇಟ್‌ನ 58.50 ಹೆಕ್ಟೇರ್, ನೆಡುಂಬಲ ಎಸ್ಟೇಟ್‌ನ 48.96 ಹೆಕ್ಟೇರ್‌ನಲ್ಲಿ ಉಪನಗರಗಳು ಸ್ಥಾಪನೆ ಆಗಲಿವೆ. ಎಲ್‌ಸ್ಟೋನ್‌ನಲ್ಲಿ ತಲಾ 5 ಸೆಂಟ್ಸ್ ಭೂಮಿ ಹಾಗೂ ನೆಡುಂಬಲದಲ್ಲಿ 10 ಸೆಂಟ್ಸ್ ಭೂಮಿಯಲ್ಲಿ ಮನೆ ನಿರ್ಮಾಣ ಆಗಲಿದೆ. ಫಲಾನುಭವಿಗಳ ಪಟ್ಟಿಯನ್ನು ಜನವರಿ 25ರ ವೇಳೆಗೆ ಅಂತಿಮಗೊಳಿಸಲಾಗುವುದು ಎಂದೂ ಸರ್ಕಾರ ತಿಳಿಸಿದೆ.

ಕುಟುಂಬಕ್ಕೆ 1000 ಚದರ ಅಡಿ ಅಳತೆಯ ಮನೆ ಒದಗಿಸಲಿದ್ದು, ಉಪನಗರಗಳು ಎಲ್ಲ ಮೂಲಸೌಲಭ್ಯ ಹೊಂದಿರಲಿವೆ. ಕುಟುಂಬಗಳ ಆದ್ಯತೆ ಆಧರಿಸಿ ಜೀವನೋಪಾಯವನ್ನು ಕಲ್ಪಿಸಲಾಗುವುದು. ಬಾಧಿತ ಕುಟುಂಬಗಳ ಸಮೀಕ್ಷೆ ನಡೆಸಿ, ಸಮಗ್ರ ಯೋಜನೆ ರೂಪಿಸಲಾಗಿದೆ ಎಂದಿದೆ.

'ವಯನಾಡ್ ಭೂಕುಸಿತ ಅವಘಡವನ್ನು ಗಂಭೀರ ಪ್ರಕೃತಿ ವಿಕೋಪ ಎಂದು ಘೋಷಿಸಲು ಕೇಂದ್ರ ವಿಳಂಬ ಮಾಡುತ್ತಿರುವುದು ಮನೆ ನಿರ್ಮಾಣ ವಿಳಂಬವಾಗಲು ಕಾರಣವಾಗಿದೆ. ಅವಘಡದ ಎರಡು ತಿಂಗಳಲ್ಲಿ ಈ ಘೋಷಣೆ ಆಗಿದ್ದರೆ ವಿಶ್ವಸಂಸ್ಥೆ ಸೇರಿ ಇನ್ನು ಹಲವು ಸಂಸ್ಥೆಗಳಿಂದ ನೆರವು ಸಿಗುತ್ತಿತ್ತು. ಬಾಧಿತ ಕುಟುಂಬಗಳ ಸಾಲಮನ್ನಾ ಮಾಡಲೂ ಕೇಂದ್ರ ಸಿದ್ಧವಿಲ್ಲ' ಎಂದು ಮುಖ್ಯಮಂತ್ರಿ ಹೇಳಿದರು.

ಚೀನಾ ಯೋಜನೆ: ಅಸ್ಸಾಂಗೆ ಆಪತ್ತು-ಸಿ.ಎಂ ಶರ್ಮಾ

ಗುವಾಹಟಿ (ಪಿಟಿಐ): ಬ್ರಹ್ಮಪುತ್ರ ನದಿಗೆ ಅಡ್ಡಲಾಗಿ ವಿಶ್ವದ ಬೃಹತ್ ಅಣೆಕಟ್ಟು ನಿರ್ಮಾಣಕ್ಕೆ ಚೀನಾವು ಮುಂದಾಗಿದ್ದು, ಇದರಿಂದ ನದಿಯ ಜೀವ ಪರಿಸರಕ್ಕೆ ಆಪತ್ತುಂಟಾಗಲಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಕಳವಳ ವ್ಯಕ್ತಪಡಿಸಿದ್ದಾರೆ.



ಹಿಮಂತ ಬಿಸ್ವ ಶರ್ಮಾ

'ಅಣೆಕಟ್ಟು ನಿರ್ಮಾಣದಿಂದ ನಮಗೆ ದೊಡ್ಡ ಸಮಸ್ಯೆ ಉಂಟಾಗಲಿದೆ. ನದಿ ಪಾತ್ರದಲ್ಲಿನ ಕೆಳಭಾಗದಲ್ಲಿ ಹರಿವು ಬತ್ತಲಿದೆ. ಇಡೀ ವ್ಯವಸ್ಥೆಯು ದುರ್ಬಲಗೊಳ್ಳಲಿದೆ. ಆತಂಕದ ಈ ವಿಷಯವನ್ನು ಈಗಾಗಲೇ ಕೇಂದ್ರದೊಂದಿಗೆ ಪ್ರಸ್ತಾಪಿಸಿದ್ದೇವೆ' ಎಂದು ಅವರು ಪತ್ರಕರ್ತರಿಗೆ ತಿಳಿಸಿದರು.

ಅರುಣಾಚಲ ಮುಖ್ಯಮಂತ್ರಿ ಪೆಮಾ ಖಂಡು ಸಹ ಈ ಕುರಿತಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.



ಜನವರಿ 15ಕ್ಕೆ ನೌಕಾಪಡೆಯ ಸೇವೆಗೆ ಅರ್ಪಣೆ: ಅಧಿಕಾರಿಗಳಿಂದ ಮಾಹಿತಿ

ದೇಶಿ ನಿರ್ಮಾಣದ ಯುದ್ಧನೌಕೆ ಸಿದ್ಧ

ಪ್ರಜಾವಾಣಿ ವಾರ್ತೆ



ನವದೆಹಲಿ: ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿರುವ ಎರಡು ಮುಂಚೂಣಿ ಯುದ್ಧನೌಕೆಗಳು ಮತ್ತು ಡೀಸೆಲ್–ವಿದ್ಯುತ್ ಶಕ್ತಿ ಚಾಲಿತ ಜಲಾಂತರ್ಗಾಮಿ ನೌಕೆಯನ್ನು ನೌಕಾಪಡೆಯಲ್ಲಿ ಜನವರಿ 15ರಂದು ಬಳಕೆಗೆ ನಿಯೋಜಿಸಲಾಗುವುದು.

ಕ್ಷಿಪಣಿ ಧ್ವಂಸಕವಾಗಿರುವ ‘ಸೂರತ್’, ಯುದ್ಧನೌಕೆ ‘ನೀಲಗಿರಿ’, ಜಲಾಂತರ್ಗಾಮಿ ‘ವಾಗ್ಶೀರ್’ –ಈ ಮೂರೂ ವ್ಯವಸ್ಥೆಗಳಲ್ಲಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳು, ಸಂವೇದಕಗಳನ್ನು ಅಳವಡಿಸಲಾಗಿದೆ ಎಂದೂ ಅಧಿಕಾರಿಗಳು ವಿವರಿಸಿದ್ದಾರೆ.

ಇದೇ ಮೊದಲ ಬಾರಿಗೆ ಏಕಕಾಲದಲ್ಲಿ ಎರಡು ಯುದ್ಧನೌಕೆ, ಒಂದು ಜಲಾಂತರ್ಗಾಮಿ ನೌಕೆಯನ್ನು ಸೇವೆಗೆ ಸಮರ್ಪಿಸಲಾಗುತ್ತಿದೆ. ಇವುಗಳ ಸೇರ್ಪಡೆಯಿಂದ ನೌಕಾಪಡೆ ರಕ್ಷಣಾ ಸಾಮರ್ಥ್ಯಕ್ಕೆ ಹೆಚ್ಚಿನ ಬಲ ಸಿಗಲಿದೆ ಎಂದು ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

‘ನೀಲಗಿರಿ’ ನೌಕೆಯನ್ನು ಪ್ರಾಜೆಕ್ಟ್ ‘17ಎ’ ಅಡಿ ಅಭಿವೃದ್ಧಿಪಡಿಸಲಾಗಿದೆ. ‘ಸೂರತ್’ ಎಂಬುದು ಪ್ರಾಜೆಕ್ಟ್ ‘15ಬಿ’ಯ 4ನೇ ಮತ್ತು ಅಂತಿಮ ನೌಕೆಯಾಗಿದೆ. ‘ವಾಗ್ಶೀರ್’ ನೌಕೆಯು ಸ್ಕಾರ್ಪೀನ್ ಕ್ಲಾಸ್ ಯೋಜನೆಯ 6ನೇ ಮತ್ತು ಅಂತಿಮ ನೌಕೆಯಾಗಿದೆ ಎಂದು ತಿಳಿಸಿದೆ.

ಪ್ರಧಾನಿ ನರೇಂದ್ರ ಮೋದಿಯವರ ‘ಆತ್ಮನಿರ್ಭರ ಭಾರತ’ ಚಿಂತನೆ ಮತ್ತು ‘ಮೇಕ್ ಇನ್ ಇಂಡಿಯಾ’ ಕಾರ್ಯಕ್ರಮದ ಭಾಗವಾಗಿ ಇವುಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇವುಗಳ ಯಶಸ್ವಿ ಕಾರ್ಯಾಚರಣೆಯು ಯುದ್ಧನೌಕೆಗಳ ವಿನ್ಯಾಸ ಮತ್ತು ನಿರ್ಮಾಣ ಕ್ಷೇತ್ರದಲ್ಲಿನ ಕ್ಷಿಪ್ರಗತಿಯ ಪ್ರಗತಿಗೆ ಕನ್ನಡಿ ಹಿಡಿಯಲಿವೆ ಎಂದು ಹೇಳಿದೆ.

ಮುಂಚೂಣಿ ಹೋರಾಟದ ಮುಂಬೈನಲ್ಲಿರುವ ನೌಕಾನೆಲೆಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ, ನೂತನಯುದ್ಧನೌಕೆಗಳಕಾರ್ಯಾರಂಭಕ್ಕೆ ಚಾಲನೆ ನೀಡಲಾಗುತ್ತದೆ ಎಂದು ಹೇಳಿಕೆ ತಿಳಿಸಿದೆ.

ನೆಲೆಯಲ್ಲಿಯೂ ಲಿಂಗಸಮಾನತೆ ಹೊಂದುವ ಭಾರತೀಯ ಸೇನೆಯ ಕ್ರಮದ ಭಾಗವಾಗಿ, ನೂತನ ಎರಡೂ ಯುದ್ಧನೌಕೆಗಳಲ್ಲಿ ಮಹಿಳಾ ಅಧಿಕಾರಿಗಳು, ಸಿಬ್ಬಂದಿಗೆ ಪ್ರತ್ಯೇಕ ವಸತಿ ಸೌಲಭ್ಯವಿದೆ ಎಂದು ವಿವರಿಸಿದೆ.

2025 ‘ಸುಧಾರಣೆಗಳ ವರ್ಷ’: ರಕ್ಷಣಾ ಸಚಿವಾಲಯ ಘೋಷಣೆ

ನವದೆಹಲಿ (ಪಿಟಿಐ): ರಕ್ಷಣಾ ಸಚಿವಾಲಯವು 2025 ಅನ್ನು ‘ಸುಧಾರಣೆಗಳ ವರ್ಷ’ ಎಂದು ಘೋಷಿಸಿದೆ. ಭಾರತೀಯ ಸೇನೆಯ ಮೂರೂ ಪಡೆಗಳನ್ನು ಪರಸ್ಪರ ಒಗ್ಗೂಡಿಸಿ, ಸಮಗ್ರವಾಗಿ ಸದೃಢಗೊಳಿಸುವ ವ್ಯವಸ್ಥೆ ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿದಿದೆ.

ಅತ್ಯಾಧುನಿಕ ತಾಂತ್ರಿಕ ಸೌಲಭ್ಯಗಳ ಜೊತೆಗೆ, ಬಹುಹಂತದ ಕಾರ್ಯಾಚರಣೆಯನ್ನು ನಡೆಸಲು ಈ ಮೂರೂ ಪಡೆಗಳನ್ನು ಸಜ್ಜುಗೊಳಿಸಲು ಅಗತ್ಯವಿರುವ ಸುಧಾರಣಾ ಕ್ರಮಗಳನ್ನು ಈ ವರ್ಷ ಜಾರಿಗೊಳಿಸ ಲಾಗುತ್ತದೆ ಎಂದು ತಿಳಿಸಿದೆ. ಸೈಬರ್, ಬಾಹ್ಯಾಕಾಶ ಕ್ಷೇತ್ರ, ಕೃತಕ ಬುದ್ಧಿಮತ್ತೆ, ಹೈಪರ್‌ಸಾನಿಕ್ ಮತ್ತು ರೊಬೊಟಿಕ್ಸ್ ಕ್ಷೇತ್ರಗಳನ್ನು ಒಳಗೊಂಡು ಹೊಸ ಕ್ಷೇತ್ರಗಳತ್ತ ಹೆಚ್ಚಿನ ಗಮನವನ್ನು ಕೇಂದ್ರೀಕರಿಸಲಾಗುವುದು ಎಂದೂ ವಿವರಿಸಿದೆ.

ಸೇನೆಯ ಆಧುನೀಕರಣ ಪ್ರಕ್ರಿಯೆ ನಿಟ್ಟಿನಲ್ಲಿ ‘ಸುಧಾರಣೆಗಳ ವರ್ಷ’ವು ಮಹತ್ವದ್ದಾಗಿದೆ. ದೇಶದ ಸಾರ್ವಭೌಮತೆ ಮತ್ತು ಭದ್ರತೆ ಹಾಗೂ 21ನೇ ಶತಮಾನದ ಸವಾಲುಗಳನ್ನು ಎದುರಿಸಲು ಸಜ್ಜುಗೊಳಿಸುವುದು ಒಟ್ಟು ಆದ್ಯತೆಯಾಗಿದೆ ಎಂದು ತಿಳಿಸಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ನಡೆದ ಉನ್ನತಾಧಿಕಾರ ಸಭೆಯಲ್ಲಿ 2025 ಅನ್ನು ‘ಸುಧಾರಣೆಗಳ ವರ್ಷ’ವಾಗಿ ಘೋಷಿಸುವ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

ದೇವಸ್ಥಾನಗಳಲ್ಲಿ ಪುರುಷ ಭಕ್ತರು ಪಾಲಿಸುವ ಪರಿಪಾಟ

ಮೇಲಂಗಿ ತೆಗೆವ ಪದ್ಧತಿಗೆ ವಿದಾಯ?

ತಿರುವನಂತಪುರ (ಪಿಟಿಐ): ದೇವಸ್ಥಾನ ಪ್ರವೇಶಿಸುವ ಮುನ್ನ ಪುರುಷ ಭಕ್ತರು ತಮ್ಮ ಮೇಲಂಗಿಯನ್ನು ತೆಗೆಯಬೇಕು ಎಂಬ ನಿಯಮವನ್ನು ಕೈಬಿಡಲು ಕೇರಳದ ದೇಗುಲ ಆಡಳಿತ ಮಂಡಳಿಯೊಂದು ಯೋಜನೆ ರೂಪಿಸಿದೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಬುಧವಾರ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಪಿಣರಾಯಿ ಅವರು, ‘ದೇವಾಲಯ ಆಡಳಿತ ಮಂಡಳಿಯ ಪ್ರತಿನಿಧಿಯೊಬ್ಬರನ್ನೂ ಇಂದು ಭೇಟಿಯಾದೆ. ಈ ನಿರ್ಧಾರ ಕೈಗೊಳ್ಳುವುದಾಗಿ ಅವರು ತಿಳಿಸಿದರು. ಇದು ಒಳ್ಳೆಯ ನಿರ್ಧಾರ, ಒಳ್ಳೆಯ ಸಲಹೆ’ ಎಂದು ಹೇಳಿದರು. ಆದರೆ, ಯಾವ ದೇಗುಲ ಆಡಳಿತ ಮಂಡಳಿಯ ಯೋಜನೆ ಇದು ಎಂದು ಅವರು ಸ್ಪಷ್ಟಪಡಿಸಿಲ್ಲ.


ಸಮಾಜ ಸುಧಾರಕ ಶ್ರೀ ನಾರಾಯಣ ಗುರು ಅವರು ಸ್ಥಾಪಿಸಿರುವ ಶಿವಗಿರಿ ಮಠದ ಸ್ವಾಮಿ ಸಚ್ಚಿದಾನಂದ ಅವರ ಹೇಳಿಕೆ ಬೆನ್ನಲ್ಲೇ ಮಂಡಳಿಯು ಈ ನಿರ್ಧಾರಕ್ಕೆ ಮುಂದಾಗಿದೆ. ಸ್ವಾಮೀಜಿ ಅವರು ‘ಈ ಪದ್ಧತಿಯು ಸಾಮಾಜಿಕ ಪಿಡುಗು. ಇದನ್ನು ಕೊನೆಗೊಳಿಸಬೇಕು’ ಎಂದು ಮಂಗಳವಾರ ಕರೆ ನೀಡಿದ್ದರು.

ಬಿಜೆಪಿ ವಿರುದ್ಧ ಕಿಡಿಕಾರಿದ ಪಿಣರಾಯಿ

ತಿರುವನಂತಪುರ: ಸಮಾಜ ಸುಧಾರಕ ಶ್ರೀ ನಾರಾಯಣ ಗುರು ಅವರನ್ನು ಸನಾತನ ಧರ್ಮದ ಪ್ರತಿಪಾದಕರಂತೆ ಬಿಂಬಿಸುವ ಪ್ರಯತ್ನಗಳ ವಿರುದ್ಧ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಕಿಡಿಕಾರಿದ್ದಾರೆ.

ಕೇರಳದಲ್ಲಿ ಬಿಜೆಪಿ ಪರವಾಗಿ ಹಿಂದೂ– ಈಳವ ಮತ ಬ್ಯಾಂಕ್ ಧ್ರುವೀಕರಣಕ್ಕೆ ಮಾಡುತ್ತಿರುವ ಪ್ರಯತ್ನ ಇದಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಶ್ರೀ ನಾರಾಯಣ ಗುರುಗಳು ಸ್ಥಾಪಿಸಿದ ತಿರುವನಂತಪುರದ ಶಿವಗಿರಿ ಮಠದ ವಾರ್ಷಿಕ ಯಾತ್ರೆಯನ್ನು ಮಂಗಳವಾರ ಉದ್ಘಾಟಿಸಿ ವಿಜಯನ್ ಮಾತನಾಡಿದರು. ವಿಜಯನ್ ಹೇಳಿಕೆಗೆ ಪ್ರತಿಕ್ರಿಯಿಸಿದ ಬಿಜೆಪಿ ನಾಯಕ ವಿ. ಮುರಳೀಧರನ್, ‘ಸಿಪಿಎಂ ನಾಯಕ ಸನಾತನ ಧರ್ಮವನ್ನು ಅವಮಾನಿಸುತ್ತಿದ್ದಾರೆ. ಬೇರೆ ಧರ್ಮಗಳ ಬಗ್ಗೆ ಅವಹೇಳನಕಾರಿ ಹೇಳಿಕೆಗಳನ್ನು ನೀಡುತ್ತಿಲ್ಲ. ಇದು ‘ಇಂಡಿಯಾ’ ಮೈತ್ರಿಯ ತಂತ್ರ. ಕಾಂಗ್ರೆಸ್ ಕೂಡ ಸನಾತನ ಧರ್ಮದ ವಿರುದ್ಧ ಮಾತನಾಡುತ್ತಿದೆ’ ಎಂದು ವಾಗ್ದಾಳಿ ನಡೆಸಿದ್ದಾರೆ.



ಕಾಂಗ್ರೆಸ್ ಟೀಕೆಗೆ ಬಿರೇನ್ ಪ್ರತ್ಯುತ್ತರ

ಗುವಾಹಟಿ: ಕಾಂಗ್ರೆಸ್ ಟೀಕೆಗಳಿಗೆ ತಿರುಗೇಟು ನೀಡಿರುವ ಮಣಿಪುರ ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್, ಕಾಂಗ್ರೆಸ್ ನೇತೃತ್ವದ ಸರ್ಕಾರಗಳ ಈ ಹಿಂದಿನ ಪಾಪಗಳಿಂದಾಗಿ ಮಣಿಪುರ ಇಂದು ಪ್ರಕ್ಷುಬ್ಧ ಸ್ಥಿತಿಯಲ್ಲಿದೆ ಎಂದು ಬುಧವಾರ ವಾಗ್ದಾಳಿ ಮಾಡಿದ್ದಾರೆ. ಮೈತೇಯಿ-ಕುಕಿ ಸಂಘರ್ಷಕ್ಕೆ ಕ್ಷಮೆ ಯಾಚಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಇನ್ನೂ ಮಣಿಪುರಕ್ಕೆ ಏಕೆ ಭೇಟಿ ನೀಡಲಿಲ್ಲ ಎಂಬ ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಅವರ ಪ್ರಶ್ನೆಗೆ ಬಿರೇನ್ ಸಿಂಗ್ ಅವರು ಪಿ.ವಿ. ನರಸಿಂಹರಾವ್ ಮತ್ತು ಐ.ಕೆ. ಗುಜರಾಲ್ ಏಕೆ ಭೇಟಿ ನೀಡಿರಲಿಲ್ಲ ಎಂದು ಪ್ರಶ್ನಿಸಿದ್ದಾರೆ.

1992 ಮತ್ತು 1997ರ ನಡುವೆ ನಾಗಾ-ಕುಕಿ ಸಂಘರ್ಷ, 1997 ಮತ್ತು 1998ರ ನಡುವೆ ಪೈಟೆ-ಕುಕಿ ನಡುವೆ ಸಂಘರ್ಷ ಉದ್ಭವಿಸಿತ್ತು. 1650 ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದರು. ಆಗ ಕಾಂಗ್ರೆಸ್ ಸರ್ಕಾರದಲ್ಲಿನ ಈ ಇಬ್ಬರು ಪ್ರಧಾನಿಗಳು ಸಂಘರ್ಷಪೀಡಿತ ರಾಜ್ಯಕ್ಕೆ ಏಕೆ ಭೇಟಿ ನೀಡಲಿಲ್ಲ ಎಂದು ಸಿಂಗ್ ಪ್ರಶ್ನಿಸಿದ್ದಾರೆ.

ಜ.16ಕ್ಕೆ ‘ಲೋಕಪಾಲ ದಿನ’ ಆಚರಣೆ

ನವದೆಹಲಿ (ಪಿಟಿಐ): ‘ಇದೇ ಮೊದಲ ಬಾರಿಗೆ ಜನವರಿ 16 ಅನ್ನು ‘ಲೋಕಪಾಲ ದಿನ’ವನ್ನಾಗಿ ಆಚರಿಸಲಾಗುತ್ತಿದ್ದು, ದೆಹಲಿಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ’ ಎಂದು ಕೇಂದ್ರವು ಹೇಳಿದೆ.

‘ಇದೇ ವೇಳೆ ಅಟಾರ್ನಿ ಜನರಲ್ ಆರ್. ವೆಂಕಟರಮಣಿ, ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಹಾಗೂ ಅಣ್ಣಾ ಹಜಾರೆ ಅವರನ್ನು ಗೌರವಿಸಲಾಗುವುದು’ ಎಂದು ಕೇಂದ್ರ ಸರ್ಕಾರವು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಮಾತುಕತೆಗೆ ಬರಲು ಎಸ್‌ಕೆಎಂ ನಕಾರ

ಚಂಡೀಗಢ (ಪಿಟಿಐ): ರೈತರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸುಪ್ರೀಂ ಕೋರ್ಟ್ ರಚಿಸಿರುವ ಉನ್ನತಾಧಿ ಕಾರ ಸಮಿತಿಯು ಗುರುವಾರ ಆಯೋಜಿಸಿರುವ ಸಭೆಗೆ ಹಾಜರಾಗಲು ತನ್ನಿಂದ ಆಗುತ್ತಿಲ್ಲ ಎಂದು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಬುಧವಾರ ಹೇಳಿದೆ. ಸಮಿತಿಯು ತನಗೆ ಮಾತುಕತೆಗೆ ಬರುವಂತೆ ಆಹ್ವಾನ ನೀಡಿದೆ ಎಂದು ಎಸ್‌ಕೆಎಂ ಹೇಳಿದೆ.

ಆಮ್ ಆದ್ಮಿ ಪಕ್ಷದ ನಾಯಕ ಅರವಿಂದ ಕೇಜ್ರಿವಾಲ್ ಪ್ರಶ್ನೆ

ಬಿಜೆಪಿ ತಪ್ಪಿಗೆ ಸಂಘದ ಬೆಂಬಲವೆ?

ನವದೆಹಲಿ (ಪಿಟಿಐ): ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರಿಗೆ ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಬುಧವಾರ ಪತ್ರ ಬರೆದು, ಬಿಜೆಪಿಯು ಹಣ ಹಂಚಿ ಮತಗಳನ್ನು ಕೊಂಡುಕೊಳ್ಳುತ್ತಿದೆ ಎಂದು ಆರೋಪಿಸಿದ್ದಾರೆ.



ಅರವಿಂದ ಕೇಜ್ರಿವಾಲ್

ದೆಹಲಿ ವಿಧಾನಸಭೆ ಚುನಾವಣೆ ವಿಷಯವಾಗಿ ಹಲವು ಪ್ರಶ್ನೆಗಳನ್ನು ಕೇಳಿದ್ದಾರೆ.

‘ಬಿಜೆಪಿಯ ಎಲ್ಲ ತಪ್ಪುಗಳನ್ನು ಆರ್‌ಎಸ್‌ಎಸ್ ಸಮರ್ಥಿಸುತ್ತದೆಯೇ? ಬಿಜೆಪಿ ನಾಯಕರು ದೆಹಲಿಯಲ್ಲಿ ಹಣ ಹಂಚಿ ಮತಗಳನ್ನು ಖರೀದಿಸುವುದನ್ನು ಮತ್ತು ಪೂರ್ವಾಂಚಲಿ ದಲಿತರ ಮತಗಳನ್ನು ಮತದಾರರ ಪಟ್ಟಿಯಿಂದ ಅಳಿಸಿಹಾಕುತ್ತಿರುವುದನ್ನು ಸಂಘವು ಬೆಂಬಲಿಸುತ್ತದೆಯೇ?’ ಎಂದು ಕೇಳಿದ್ದಾರೆ.

ಬಿಜೆಪಿ ತಿರುಗೇಟು: ‘ಕೇಜ್ರಿವಾಲ್ ಅವರೇ, ಆರ್‌ಎಸ್‌ಎಸ್‌ನ ಮುಖಸ್ಥರಿಗೆ ಪತ್ರ ಬರೆದು ಮಾಧ್ಯಮಗಳ ಗಮನಸೆಳೆಯುವ ಬದಲಾಗಿ ಸಂಘದ ಸೇವಾ ಮನೋಭಾವನೆಯನ್ನು ಕಲಿಯಿರಿ’ ಎಂದು ಬಿಜೆಪಿ ತಿರುಗೇಟು ನೀಡಿದೆ.

‘ಇದು ಮಾಧ್ಯಮಗಳ ಗಮನ ಸೆಳೆಯುವ ತಂತ್ರವಲ್ಲದೆ ಬೇರೇನೂ ಅಲ್ಲ’ ಎಂದು ಬಿಜೆಪಿಯ ರಾಷ್ಟ್ರೀಯ ವಕ್ತಾರ ಸುಧಾಂಶು ತ್ರಿವೇದಿ ಹೇಳಿದ್ದಾರೆ.

‘ಮೋಸದ ರಾಜಕಾರಣ ತ್ಯಜಿಸುವ ಸಂಕಲ್ಪ ಮಾಡಿ’

ದೆಹಲಿ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು, ಹೊಸ ವರ್ಷದ ಸಂಕಲ್ಪವಾಗಿ ವಂಚನೆ ಮತ್ತು ಅಪ್ರಾಮಾಣಿಕ ರಾಜಕೀಯ ಅಭ್ಯಾಸಗಳನ್ನು ಬಿಡಬೇಕು ಎಂದು ದೆಹಲಿ ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚ್‌ದೇವ ಪತ್ರ ಬರೆದಿದ್ದಾರೆ.

‘ನಾವೆಲ್ಲ ಹೊಸ ವರ್ಷದಲ್ಲಿ ಕೆಟ್ಟ ಅಭ್ಯಾಸಗಳನ್ನು ತ್ಯಜಿಸಲು ಮತ್ತು ಹೊಸದನ್ನು ಪ್ರಾರಂಭಿಸಲು ನಿರ್ಧರಿಸುತ್ತೇವೆ. 2025ರ ಮೊದಲ ದಿನದಲ್ಲಿ ನೀವು ಅಪ್ರಾಮಾಣಿಕ ಮತ್ತು ಮೋಸದ ರಾಜಕೀಯ ಅಭ್ಯಾಸಗಳನ್ನು ಕೈಬಿಡುವ ಮೂಲಕ ಅರ್ಥಪೂರ್ಣ ಬದಲಾವಣೆಗೆ ಶ್ರಮಿಸುವಿರಿ ಎಂದು ಭಾವಿಸುತ್ತೇನೆ’ ಎಂದು ಹೇಳಿದ್ದಾರೆ.

‘ಹಿಂದೂ ದೇಗುಲ, ಬೌದ್ಧ ಕಟ್ಟಡ ಒಡೆಯಲಿರುವ ಬಿಜೆಪಿ’



ಆತಿಶಿ

ನವದೆಹಲಿ (ಪಿಟಿಐ): ಹಿಂದೂ ದೇವಸ್ಥಾನಗಳು ಹಾಗೂ ಬೌದ್ಧ ಧಾರ್ಮಿಕ ಸ್ಥಳವೊಂದನ್ನು ಧ್ವಂಸ ಮಾಡಲು ಬಿಜೆಪಿ ಯೋಜಿಸುತ್ತಿದೆ ಎಂದು ದೆಹಲಿ ಮುಖ್ಯಮಂತ್ರಿ ಆತಿಶಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದ್ದಾರೆ.

ಅವರ ಆರೋಪದ ಕುರಿತು ಬಿಜೆಪಿಯವರಾಗಲೀ ಅಥವಾ ದೆಹಲಿ ಲೆಫ್ಟಿನೆಂಟ್ ಗವರ್ನರ್ ಅವರಾಗಲೀ ತಕ್ಷಣಕ್ಕೆ ನೇರವಾಗಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ತಾಯಿ ಸೇರಿ ಕುಟುಂಬದ ಐವರನ್ನು ಹತ್ಯೆಗೈದ ಯುವಕ

ಪ್ರಜಾವಾಣಿ ವಾರ್ತೆ/ಪಿಟಿಐ

ಲಖನೌ: ಯುವಕನೊಬ್ಬ ತಾಯಿ ಮತ್ತು ನಾಲ್ವರು ಸಹೋದರಿಯರನ್ನು ಉತ್ತರ ಪ್ರದೇಶದ ಲಖನೌನಲ್ಲಿರುವ ಹೋಟೆಲ್‌ನಲ್ಲಿ ಬುಧವಾರ ಹತ್ಯೆಗೈದು ಪೊಲೀಸರಿಗೆ ಶರಣಾಗಿದ್ದಾನೆ.

ಆರೋಪಿಯನ್ನು ಅರ್ಷದ್ (24) ಎಂದು ಗುರುತಿಸಲಾಗಿದೆ. ಕೊಲೆಯ ನಂತರ ಆರೋಪಿಯು ವಿಡಿಯೊ ಮಾಡಿದ್ದು, ಅದರಲ್ಲಿ ‘ನೆರೆಯವರು ನಮ್ಮ ಆಸ್ತಿಯನ್ನು ಕಬಳಿಸಿದರು. ನನ್ನ ಮತ್ತು ತಂದೆಯನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಿ ಸಹೋದರಿಯರನ್ನು ಮಾರಾಟ ಮಾಡಲು ಯೋಜನೆ ರೂಪಿಸಿದ್ದರು. ಹೀಗಾಗಿ ಈ ಕೃತ್ಯ ಎಸಗಿದೆ. ನೆರೆಯವರು ನಿರಂತರವಾಗಿ ಕಿರುಕುಳ ನೀಡುತ್ತಿದ್ದ ಕಾರಣ ಹಿಂದೂ ಧರ್ಮಕ್ಕೆ ಮತಾಂತರವಾಗಿ, ಜಮೀನನ್ನು ದೇಗುಲಕ್ಕೆ ದೇಣಿಗೆಯಾಗಿ ನೀಡಲೂ ಬಯಸಿದ್ದೆವು’ ಎಂದು ಹೇಳಿದ್ದಾನೆ.

‘ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರೇ, ಇಂಥ ಮುಸ್ಲಿಮರನ್ನು ಸುಮ್ಮನೆ ಬಿಡಬೇಡಿ’ ಎಂದು ಮನವಿ ಮಾಡಿದ್ದಾನೆ. ಆರೋಪಿಯು ತಂದೆಯ ಸಮ್ಮುಖದಲ್ಲಿಯೇ ಕೃತ್ಯ ಎಸಗಿದ್ದಾನೆ. ಸಹೋದರಿಯೊಬ್ಬರ ಮಣಿಕಟ್ಟನ್ನು ಬ್ಲೇಡ್‌ನಿಂದ ಕತ್ತರಿಸಿದ್ದಾನೆ, ಇತರರನ್ನು ದುಪಟ್ಟಾದಿಂದ ಕತ್ತುಹಿಸುಕಿ ಕೊಲೆಗೈದಿದ್ದಾನೆ ಎಂದು ಮೂಲಗಳು ತಿಳಿಸಿವೆ. ಸದ್ಯ ಅರ್ಷದ್ ತಂದೆ ಪರಾರಿಯಾಗಿದ್ದು, ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

ಮೃತರನ್ನು ಆಸ್ಮಾ, ಆಲಿಯಾ (9), ಅಲ್‌ಶಿಯಾ (19), ಅಕ್ಸಾ (16) ಮತ್ತು ರಹಮೀನಾ (18) ಎಂದು ಗುರುತಿಸಲಾಗಿದೆ. ಆಸ್ಮಾ ಅವರು ಆರೋಪಿಯ ತಾಯಿ ಎಂದು ಉಪ ಪೊಲೀಸ್ ಆಯುಕ್ತೆ (ಡಿಸಿಪಿ) ರವೀನಾ ತ್ಯಾಗಿ ತಿಳಿಸಿದ್ದಾರೆ.

ಪುತ್ರನಿಂದಲೇ ತಂದೆ ತಾಯಿಯ ಕೊಲೆ

ನಾಗ್ಪುರ (ಪಿಟಿಐ): ಶಿಕ್ಷಣ ಹಾಗೂ ವೃತ್ತಿ ಜೀವನದ ಕುರಿತು ಭಿನ್ನಾಭಿಪ್ರಾಯ ಉಂಟಾಯಿತು ಎಂಬ ಕಾರಣಕ್ಕೆ ಎಂಜಿನಿಯರಿಂಗ್ ವಿದ್ಯಾರ್ಥಿಯೊಬ್ಬ ತನ್ನ ತಂದೆ-ತಾಯಿಯನ್ನು ಕೊಲೆ ಮಾಡಿರುವ ಘಟನೆ ನಾಗ್ಪುರದಲ್ಲಿ ನಡೆದಿದೆ.

ಆರೋಪಿ ಉತ್ಕರ್ಷ್ ಧಾಖೋಲೆ ತನ್ನ ಪೋಷಕರನ್ನು ಡಿ.26ರಂದು ಹತ್ಯೆ ಮಾಡಿದ್ದಾನೆ. ಮನೆಯಿಂದ ದುರ್ವಾಸನೆ ಬರುವ ಬಗ್ಗೆ ನೆರೆಯವರು ತಿಳಿಸಿದ ಬಳಿಕ ಜೋಡಿ ಕೊಲೆ ನಡೆದಿರುವುದು ಬುಧವಾರ ತಿಳಿದುಬಂದಿದೆ.

ಮೃತರನ್ನು ಲೀಲಾಧಾರ್ ಧಾಖೋಲೆ (55) ಹಾಗೂ ಪತ್ನಿ ಅರುಣಾ (50) ಎಂದು ಗುರುತಿಸಲಾಗಿದೆ. ಕೊಳೆತ ಸ್ಥಿತಿಯಲ್ಲಿದ್ದ ಶವಗಳನ್ನು ವಶಪಡಿಸಿಕೊಳ್ಳಲಾಗಿದೆ. ತಾನೇ ಹತ್ಯೆ ಮಾಡಿರುವುದಾಗಿ ಉತ್ಕರ್ಷ್ ಒಪ್ಪಿಕೊಂಡಿದ್ದು, ಆತನನ್ನು ಬಂಧಿಸಲಾಗಿದೆ. ಉತ್ಕರ್ಷ್ ಎಂಜಿನಿಯರಿಂಗ್‌ನಲ್ಲಿ ಹಲವು ವಿಷಯಗಳಲ್ಲಿ ಉತ್ತೀರ್ಣನಾಗಿರಲಿಲ್ಲ. ಆದ್ದರಿಂದ ಎಂಜಿನಿಯರಿಂಗ್ ಬಿಟ್ಟು ಬೇರೇನಾದರೂ ಮಾಡುವಂತೆ ಪೋಷಕರು ಹೇಳುತ್ತಿದ್ದರು. ಇದೇ ವಿಚಾರವಾಗಿ ಗಲಾಟೆ ನಡೆದ ಬಳಿಕ, ಆತ ಪೋಷಕರನ್ನು ಹತ್ಯೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

‘125 ವರ್ಷದಲ್ಲೇ 2024 ಅತ್ಯಂತ ಬೆಚ್ಚಗಿನದು’

ನವದೆಹಲಿ (ಪಿಟಿಐ): 2024ನೇ ವರ್ಷವು 1901ರಿಂದ ಇದುವರೆಗೆ ಭಾರತದಲ್ಲಿ ದಾಖಲಾದ ಅತ್ಯಂತ ಬೆಚ್ಚಗಿನ ವರ್ಷವಾಗಿದೆ. ಸರಾಸರಿ ಕನಿಷ್ಠ ತಾಪಮಾನವು ದೀರ್ಘಾವಧಿಯ ಸರಾಸರಿಗಿಂತ 0.90 ಡಿಗ್ರಿ ಸೆಲ್ಸಿಯಸ್ ನಷ್ಟು ಹೆಚ್ಚಾಗಿತ್ತು ಎಂದು ಐಎಂಡಿ ಬುಧವಾರ ತಿಳಿಸಿದೆ.



2024ರ ವಾರ್ಷಿಕ ಸರಾಸರಿ ತಾಪಮಾನವು 25.75 ಡಿಗ್ರಿ ಸೆಲ್ಸಿಯಸ್ ನಷ್ಟಿದ್ದು, ಇದು ದೀರ್ಘಾವಧಿ ಸರಾಸರಿ ತಾಪಮಾನಕ್ಕಿಂತ 0.65 ಹೆಚ್ಚು. ಸರಾಸರಿ ಗರಿಷ್ಠ ತಾಪಮಾನವು 31.25 ಡಿಗ್ರಿ ಸೆಲ್ಸಿಯಸ್‌ನಷ್ಟಿದ್ದು, ಸಾಮಾನ್ಯಕ್ಕಿಂತ 0.20 ಡಿಗ್ರಿ ಹೆಚ್ಚು ಎಂದು ಹವಾಮಾನ ಇಲಾಖೆ (ಐಎಂಡಿ) ಮಹಾನಿರ್ದೇಶಕ ಮೃತ್ಯುಂಜಯ್ ಮೊಹಾಪಾತ್ರ ಹೇಳಿದ್ದಾರೆ.

ಜನವರಿ; ಹಲವೆಡೆ ಸಾಮಾನ್ಯಕ್ಕಿಂತ ಕನಿಷ್ಠ ತಾಪಮಾನ: ಜನವರಿಯಲ್ಲಿ ಭಾರತದ ಬಹುತೇಕ ಭಾಗಗಳಲ್ಲಿ ಕನಿಷ್ಠ ತಾಪಮಾನ ಸಾಮಾನ್ಯಕ್ಕಿಂತ ಕಡಿಮೆಯಾಗುವ ಸಾಧ್ಯತೆಗಳಿವೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ. ಜನವರಿಯಲ್ಲಿ ಮಧ್ಯ ಭಾರತದ ಪಶ್ಚಿಮ ಮತ್ತು ಉತ್ತರ ಭಾಗಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚು ಶೀತದ ವಾತವರಣವಿರುವ ಸಾಧ್ಯತೆಗಳಿವೆ ಎಂದು ತಿಳಿಸಿದೆ.

ಉದ್ಯಮಿ ಆತ್ಮಹತ್ಯೆ ಪತ್ನಿ, ಬಾಮ್ಮೈದುನರ ಕಿರುಕುಳ ಆರೋಪ

ನವದೆಹಲಿ (ಪಿಟಿಐ): ಉದ್ಯಮಿ, 40 ವರ್ಷ ವಯಸ್ಸಿನ ಪುನೀತ್ ಖುರಾನಾ ಅವರು ಇಲ್ಲಿನ ಕಲ್ಯಾಣ ವಿಹಾರ್‌ನ ನಿವಾಸದಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ಉದ್ಯಮಿಯ ಪತ್ನಿ ಮತ್ತು ಆಕೆಯ ಸೋದರರು ನೀಡುತ್ತಿದ್ದ ಕಿರುಕುಳವೇ ಆತ್ಮಹತ್ಯೆಗೆ ಕಾರಣ’ ಎಂದು ಉದ್ಯಮಿಯ ತಂದೆ ಹಾಗೂ ಸಹೋದರಿ ಆರೋಪಿಸಿದ್ದಾರೆ.

‘ಖುರಾನಾ ಅವರ ತಂದೆ ತ್ರಿಲೋಕ್ ಅವರು ಉದ್ಯಮಿಯ ಮೊಬೈಲ್ ಫೋನ್ ಮತ್ತು ಇತರೆ ಪರಿಕರಗಳನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ. ಮರಣೋತ್ತರ ಪರೀಕ್ಷೆ ಬಳಿಕ ಶವವನ್ನು ಕುಟುಂಬ ಸದಸ್ಯರಿಗೆ ಒಪ್ಪಿಸಲಾಗುತ್ತದೆ’ ಎಂದು ಡಿಸಿಪಿ ಬ್ರಿಶಂ ಸಿಂಗ್ ತಿಳಿಸಿದ್ದಾರೆ.

ಮೃತನ ತಂದೆ ಸುದ್ದಿಗಾರರ ಜೊತೆಗೆ ಮಾತನಾಡಿದ್ದು, ‘ಮಗನಿಗೆ ಆತನ ಪತ್ನಿ ಮತ್ತು ಆಕೆಯ ಸೋದರರು ಕಿರುಕುಳ ನೀಡುತ್ತಿದ್ದರು. ಹಣಕಾಸು ಮತ್ತು ಆಸ್ತಿಯ ವಿಚಾರವಾಗಿ ಪ್ರತಿನಿತ್ಯವೂ ಜಗಳವಾಡುತ್ತಿದ್ದರು’ ಎಂದು ಆರೋಪಿಸಿದ್ದಾರೆ.

‘ಪತ್ನಿ ಮತ್ತು ಆಕೆಯ ತಂದೆ–ತಾಯಿ ನೀಡುತ್ತಿದ್ದ ಕಿರುಕುಳದಿಂದಲೇ ನನ್ನ ಸಹೋದರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಖುರಾನಾ ಅವರ ಸಹೋದರಿ ಆರೋಪಿಸಿದ್ದಾರೆ.

ಸಿಂಗ್ ಸ್ಮಾರಕ: ಜಾಗ ಗುರುತಿಸುವ ಕಾರ್ಯ ಶುರು

ನವದೆಹಲಿ (ಪಿಟಿಐ): ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ಸ್ಮಾರಕ ನಿರ್ಮಿಸಲು ಭೂಮಿ ಗುರುತಿಸುವ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ ಆರಂಭಿಸಿದೆ. ಸ್ಥಳ ಅಂತಿಮಗೊಳಿಸಲು ಸಿಂಗ್ ಅವರ ಕುಟುಂಬ ಸದಸ್ಯರ ಜೊತೆಗೂ ಸರ್ಕಾರ ಸಂಪರ್ಕದಲ್ಲಿದೆ.

ಕೇಂದ್ರ ಲೋಕೋಪಯೋಗಿ ಇಲಾಖೆಯ ಮೂಲಗಳ ಪ್ರಕಾರ, ಸ್ಮಾರಕ ನಿರ್ಮಿಸಲು ರಾಷ್ಟ್ರೀಯ ಸ್ಮೃತಿ ಸ್ಥಳದಲ್ಲಿ ಸಂಜಯಗಾಂಧಿ ಸ್ಮಾರಕದ ಆಸುಪಾಸು ಇರುವ ಜಮೀನನ್ನು ಅಧಿಕಾರಿಗಳು ಪರಿಶೀಲಿಸಿದ್ದು, ಕೆಲ ಸ್ಥಳಗಳನ್ನು ಗುರುತಿಸಿದ್ದಾರೆ. ಸ್ಥಳವನ್ನು ಅಂತಿಮಗೊಳಿಸಲು 3–4 ಆಯ್ಕೆ ಇದ್ದು, ಕುಟುಂಬದವರ ಜೊತೆ ಚರ್ಚೆ ನಡೆದಿದೆ. ನಿಗದಿತ ಭೂಮಿ ಹಂಚಿಕೆಗೂ ಮೊದಲು ಸ್ಮಾರಕ ನಿರ್ಮಾಣ ಸಂಬಂಧ ಸರ್ಕಾರ ಟ್ರಸ್ಟ್ ರಚಿಸಲಿದೆ ಎಂದು ಮೂಲಗಳು ತಿಳಿಸಿವೆ.

ಒವೈಸಿ ಅರ್ಜಿ ಇಂದು ವಿಚಾರಣೆ ಸಾಧ್ಯತೆ



ಅಸಾದುದ್ದೀನ್ ಒವೈಸಿ

ನವದೆಹಲಿ (ಪಿಟಿಐ): ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ–1991ನ್ನು ಅನುಷ್ಠಾನಕ್ಕೆ ತರಬೇಕು ಎಂಬ ಕೋರಿಕೆಯೊಂದಿಗೆ ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಗುರುವಾರ ನಡೆಸುವ ಸಾಧ್ಯತೆ ಇದೆ.

ಪೂಜಾ ಸ್ಥಳಗಳ ಧಾರ್ಮಿಕ ಸ್ವರೂಪವು 1947ರ ಆಗಸ್ಟ್ 15ರಂದು ಯಾವ ರೀತಿಯಲ್ಲಿ ಇತ್ತೋ, ಅದನ್ನು ಆ ರೀತಿಯಲ್ಲೇ ಉಳಿಸಿಕೊಳ್ಳಬೇಕು ಎಂದು ಈ ಕಾಯ್ದೆ ಹೇಳುತ್ತದೆ. ಒವೈಸಿ ಅವರು ಈ ಅರ್ಜಿಯನ್ನು ಡಿಸೆಂಬರ್ 17ರಂದು ಸಲ್ಲಿಸಿದ್ದಾರೆ. ಆದರೆ, ಡಿಸೆಂಬರ್ 12ರಂದು ನೀಡಿರುವ ಮಧ್ಯಂತರ ಆದೇಶದಲ್ಲಿ ಸುಪ್ರೀಂ ಕೋರ್ಟ್‌ನ ಸಿಜೆಐ ನೇತೃತ್ವದ ಪೀಠವು, ಧಾರ್ಮಿಕ ಸ್ಥಳಗಳನ್ನು, ಅದರಲ್ಲೂ ಮುಖ್ಯವಾಗಿ ದರ್ಗಾ ಮತ್ತು ಮಸೀದಿಗಳನ್ನು ತಮ್ಮದೆಂದು ಪ್ರತಿಪಾದಿಸುವ ಯಾವುದೇ ಅರ್ಜಿಗಳನ್ನು ಪುರಸ್ಕರಿಸಬಾರದು, ವಿಚಾರಣೆಯ ಹಂತದಲ್ಲಿ ಇರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶ ಹೊರಡಿಸಬಾರದು ಎಂದು ಕೆಳ ಹಂತದ ನ್ಯಾಯಾಲಯಗಳಿಗೆ ಸೂಚಿಸಿದೆ. ಸರಿಸುಮಾರು ಆರು ಅರ್ಜಿಗಳ ವಿಚಾರಣೆ ನಡೆಸಿದ ಪೀಠವು, ಈ ಸೂಚನೆ ನೀಡಿದೆ.

ಅರಣ್ಯ ಒತ್ತುವರಿ: ಸರ್ವೆ ಕಾರ್ಯಕ್ಕೆ ಕೋರ್ಟ್ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕಿನ ಜಿನಗಲಕುಂಟೆ ಹೊಸ ಹುಡ್ಯ ವ್ಯಾಪ್ತಿ ಯಲ್ಲಿನ ಅರಣ್ಯ ಪ್ರದೇಶದ ಸರ್ವೆ ನಂಬರ್ 1 ಮತ್ತು 2ರಲ್ಲಿ 61.39 ಎಕರೆ ಒತ್ತುವರಿ ಆಗಿದೆ ಎಂಬ ವಿಚಾರಕ್ಕೆ ಸಂಬಂಧಿಸಿದ ನಿಗದಿತ ಜಂಟಿ ಸರ್ವೆ ಕಾರ್ಯವನ್ನು ಇದೇ 15ರಂದು ನಡೆಸಲೇಬೇಕು’ ಎಂದು ಹೈಕೋರ್ಟ್, ಅರಣ್ಯ ಇಲಾಖೆಗೆ ತಾಕೀತು ಮಾಡಿದೆ.

ಈ ಸಂಬಂಧ ಶ್ರೀನಿವಾಸಪುರ ತಾಲ್ಲೂಕಿನ ಕುಂದಿಟವಾರಪಲ್ಲಿ ನಿವಾಸಿಯೂ ಆದ ಹೈಕೋರ್ಟ್ ವಕೀಲ ಕೆ.ವಿ.ಶಿವಾರೆಡ್ಡಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ಪದಾಂಕಿತ ಹಿರಿಯ ವಕೀಲ ವೈ.ಆರ್. ಸದಾಶಿವ ರೆಡ್ಡಿ ಅವರ ವಾದ ಮಾನ್ಯ ಮಾಡಿದ ನ್ಯಾಯಪೀಠ, ‘ಹೈಕೋರ್ಟ್, ಈ ಮೊದಲು ನೀಡಿರುವ ಆದೇಶದ ಅನುಸಾರ; ಜಿಲ್ಲಾಧಿಕಾರಿ, ಭೂ ದಾಖಲೆಗಳ ಉಪ ನಿರ್ದೇಶಕ (ಡಿಡಿಎಲ್‌ಆರ್) ಮತ್ತು ಅರಣ್ಯ ಒತ್ತುವರಿ ಆರೋಪ ಎದುರಿಸುತ್ತಿರುವ ಮಾಜಿ ವಿಧಾನಸಭಾಧ್ಯಕ್ಷ ಕೆ.ಆರ್.ರಮೇಶ್ ಕುಮಾರ್ ಆಗಲೀ ಅಥವಾ ಅವರ ಅಧಿಕೃತ ಪ್ರತಿನಿಧಿಯಾಗಲೀ ಜಂಟಿ ಸರ್ವೆ ಕಾರ್ಯದಲ್ಲಿ ಭಾಗವಹಿಸಬೇಕು. ಈ ಸಂಬಂಧ ರಮೇಶ್ ಕುಮಾರ್ ಅವರಿಗೆ ಜಿಲ್ಲಾಧಿಕಾರಿ ನೋಟಿಸ್ ಕೊಡಬೇಕು’ ಎಂದು ನ್ಯಾಯಪೀಠ ಸೂಚಿಸಿದೆ.



‘ಒಂದು ವೇಳೆ ರಮೇಶ್ ಕುಮಾರ್ ಆಗಲೀ ಅಥವಾ ಅವರ ಅಧಿಕೃತ ಪ್ರತಿನಿಧಿಯಾಗಲೀ ಸರ್ವೆ ಕಾರ್ಯದಲ್ಲಿ ಭಾಗವಹಿಸದೇ ಹೋದಲ್ಲಿ ಸರ್ವೆ ಕಾರ್ಯವನ್ನು ಮುಂದುವರಿಸಬೇಕು. ಅಂತೆಯೇ, ಸರ್ವೆ ನಡೆಸಿದ ನಂತರ ನೀಡಲಾಗುವ ವರದಿಯನ್ನು ಆಕ್ಷೇಪಿಸಲಾಗಲೀ ಅಥವಾ ಸ್ಥಿರಾಸ್ತಿ ಬಾಧ್ಯತೆಯ ಕ್ಲೇಮು ಮಾಡಲು ರಮೇಶ್ ಕುಮಾರ್ ಅವರಿಗೆ ಯಾವುದೇ ಅಧಿಕಾರ ಇರುವುದಿಲ್ಲ’ ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ಸ್ಪಷ್ಟಪಡಿಸಿದೆ.

‘ಒತ್ತುವರಿ ಕುರಿತಂತೆ 14 ವರ್ಷದ ಹಿಂದೆಯೇಸರ್ವೆಕಾರ್ಯಕೈಗೊಳ್ಳಲುಆದೇಶಿಸಲಾಗಿದ್ದರೂ ಅದನ್ನು ಕಾರ್ಯಗತಗೊಳಿಸದೇ ಇರುವುದು ಆಘಾತಕಾರಿ ವಿಚಾರ’ ಎಂದು ಕಳವಳ ವ್ಯಕ್ತಪಡಿಸಿರುವ ನ್ಯಾಯಪೀಠ, ‘ಸರ್ವೆ ಕಾರ್ಯದ ವರದಿಯನ್ನು ಇದೇ 30 ಅಥವಾ ಅಷ್ಟರೊಳಗೆ ಪೂರ್ಣಗೊಳಿಸಿ ಕೋರ್ಟ್‌ಗೆ ಸಲ್ಲಿಸಬೇಕು’ ಎಂದು ಅರಣ್ಯ ಉಪಸಂರಕ್ಷಣಾಧಿಕಾರಿಗೆ (ಡಿಸಿಎಫ್) ನಿರ್ದೇಶಿಸಿದೆ.


ಪುಸ್ತಕ ಪ್ರಾಧಿಕಾರ ಶೇ 50 ರಷ್ಟು ರಿಯಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣರಾಜ್ಯೋತ್ಸವದ ಪ್ರಯುಕ್ತ ಕನ್ನಡ ಪುಸ್ತಕ ಪ್ರಾಧಿಕಾರವು ತನ್ನ ಪ್ರಕಟಣೆಗಳ ಮೇಲೆ ಜನವರಿ ತಿಂಗಳು ಪೂರ್ತಿ ಶೇ 50ರಷ್ಟು ರಿಯಾಯಿತಿ ಘೋಷಿಸಿದೆ.

ಪ್ರಾಧಿಕಾರವು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ 706 ಶೀರ್ಷಿಕೆಗಳಡಿ ಕೃತಿಗಳನ್ನು ಪ್ರಕಟಿಸಿದೆ. ಈ ಕೃತಿಗಳನ್ನು ಜನರಿಗೆ ಕೈಗೆಟುಕುವ ಬೆಲೆಯಲ್ಲಿ ತಲುಪಿಸಬೇಕೆಂಬ ಉದ್ದೇಶ ಪ್ರಾಧಿಕಾರದ್ದಾಗಿದ್ದು, ಎಲ್ಲ ಪುಸ್ತಕಗಳ ಮೇಲೆ ಶೇ 50ರಷ್ಟು ರಿಯಾಯಿತಿ ಇರಲಿದೆ.

ಬೆಂಗಳೂರಿನ ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆ, ಎಲ್ಲ ಜಿಲ್ಲೆಗಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಹಾಗೂ ಪ್ರಾಧಿಕಾರದಿಂದ ತೆರೆಯಲಾದ ಎಲ್ಲ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಈ ರಿಯಾಯಿತಿ ಇರಲಿದೆ. ಪ್ರಾಧಿಕಾರದ ಜಾಲತಾಣ https://kpp.karnataka.gov.in ಮೂಲಕವೂ ಖರೀದಿಸಬಹುದು ಎಂದು ಪ್ರಕಟಣೆ ತಿಳಿಸಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ

ಜನರ ಆರ್ಥಿಕ ಶಕ್ತಿಗೆ ಅಧಿಕಾರಿಗಳ ‘ಹಸ್ತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಜನರ ಆರ್ಥಿಕ ಶಕ್ತಿ ಹೆಚ್ಚಿಸಲು ಭಾರತೀಯ ಆಡಳಿತ ಸೇವೆಯ ಅಧಿಕಾರಿಗಳು ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕು. ಪ್ರಾದೇಶಿಕ ಅಸಮತೋಲನ, ಅಸಮಾನತೆ ನಿವಾರಣೆಗೆ ಶ್ರಮಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದರು.

ಐಎಎಸ್, ಐಪಿಎಸ್ ಅಧಿಕಾರಿಗಳ ಜತೆ ವಿಧಾನಸೌಧದಲ್ಲಿ ಬುಧವಾರ ನಡೆಸಿದ ಹೊಸವರ್ಷದ ಮೊದಲ ಸಭೆಯಲ್ಲಿ ಅವರು ಮಾತನಾಡಿದರು.

ಆಡಳಿತದಲ್ಲಿ ಐಎಎಸ್, ಐಪಿಎಸ್, ಐಎಫ್‌ಎಸ್ ಅಧಿಕಾರಿಗಳ ಜವಾಬ್ದಾರಿ ಹೆಚ್ಚು ಇರುತ್ತದೆ. ಸರ್ಕಾರ ಕಾನೂನು ರಚಿಸಿ, ಯೋಜನೆಗಳನ್ನು ರೂಪಿಸುತ್ತದೆ. ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಹೊಣೆ ಅಧಿಕಾರಿಗಳ ಮೇಲಿರುತ್ತದೆ. ಸಮಾಜಕ್ಕೆ ಪೂರಕವಾಗಿ ಯೋಜನೆಗಳನ್ನು ತಲುಪಿಸುವುದು ಇಂದಿನ ತುರ್ತು ಎಂದು ಹೇಳಿದರು.



ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗಾಂಧೀಜಿಯವರ ಆತ್ಮಕಥೆ ‘ನನ್ನ ಸತ್ಯಾನ್ವೇಷಣೆ’ ಪುಸ್ತಕ ನೀಡುವ ಮೂಲಕ ಹೊಸ ವರ್ಷದ ಶುಭಾಶಯ ಕೋರಿದರು

ಭಾರತದ ಆರ್ಥಿಕತೆ ಕುಸಿತ ಕಂಡಿದ್ದಾಗ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ್ದ ಮನಮೋಹನ ಸಿಂಗ್ ಅವರು ದೇಶದ ಆರ್ಥಿಕತೆಗೆ ಹೊಸ ಚೈತನ್ಯ ನೀಡಿದ್ದರು. ಮಾಹಿತಿ ಹಕ್ಕು, ಆಹಾರದ ಹಕ್ಕು, ಶಿಕ್ಷಣದ ಹಕ್ಕುಗಳನ್ನು ಕಡ್ಡಾಯ ಮಾಡಿದರು. ಆ ಮೂಲಕ ಸಮಾನತೆಯತ್ತ ದೇಶವನ್ನು ಮುನ್ನಡೆಸಿದರು. ಅವರ ಆಶಯಗಳಿಗೆ ಪೂರಕವಾಗಿ ರಾಜ್ಯ ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನು ರೂಪಿಸಿದೆ. ಮಧ್ಯವರ್ತಿಗಳ ಹಾವಳಿಗೆ ಅವಕಾಶ ಇಲ್ಲದಂತೆ ಫಲಾನುಭವಿಗಳಿಗೆ ತಲುಪಿಸಲಾಗುತ್ತಿದೆ ಎಂದರು.

ಉತ್ತರ ಕರ್ನಾಟಕದ ಅಭಿವೃದ್ಧಿಯಲ್ಲಿನ ಅಸಮಾನತೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಅಧ್ಯಯನ ನಡೆಸಲು ಗೋವಿಂದರಾವ್ ಸಮಿತಿ ರಚಿಸಲಾಗಿದೆ. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ₹35 ಸಾವಿರ ಕೋಟಿ ಖರ್ಚು ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಯುವ ಜನರು ಸಮಾಜದ ಆಸ್ತಿ. ಅವರ ಭವಿಷ್ಯ ಹಾಳಾಗದಂತೆ ಐಪಿಎಸ್ ಅಧಿಕಾರಿಗಳು ಎಚ್ಚರ ವಹಿಸಬೇಕು. ಡ್ರಗ್ಸ್ ಹಾವಳಿ, ಅಪರಾಧ ಜಗತ್ತಿನ ಕಡೆಗೆ ಆಕರ್ಷಿತರಾಗುವುದನ್ನು ತಡೆಯಬೇಕು. ಆತ್ಮಸಾಕ್ಷಿಗೆ ತಕ್ಕಂತೆ ಎಲ್ಲ ಅಧಿಕಾರಿಗಳು ನಡೆದುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

‘ಹಣದ ಕೊರತೆಯ ಅಪಪ್ರಚಾರ’

ಅಭಿವೃದ್ಧಿಗೆ ಹಣದ ಕೊರತೆ ಇದೆ ಎನ್ನುವ ಅಪಪ್ರಚಾರ ನಡೆಯುತ್ತಿದೆ. ಹಿಂದಿನ ಸರ್ಕಾರ ಬಜೆಟ್ ಒಪ್ಪಿಗೆ ಪಡೆಯದೆ ಮನಸ್ಸಿಗೆ ಬಂದಂತೆ ಟೆಂಡರ್ ಕರೆದು ಸುಮಾರು ₹39 ಸಾವಿರ ಕೋಟಿ ಬಿಲ್ ಬಾಕಿ ಉಳಿಸಿದ್ದರು ಎಂದು ಸಿದ್ದರಾಮಯ್ಯ ಹೇಳಿದರು.

‘ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಅನ್ಯಾಯ ಮುಂದುವರಿದಿದೆ. ಎಲ್ಲವನ್ನೂ ಸರಿದೂಗಿಸಿಕೊಂಡು ಅಭಿವೃದ್ಧಿಗೆ ಹಣ ಒದಗಿಸುತ್ತಿದ್ದೇವೆ. ಇಲಾಖೆಗಳ ಹಣ ಸೋರಿಕೆ ಆಗದಂತೆ ಅಧಿಕಾರಿಗಳು ನಿಗಾವಹಿಸಬೇಕು. ಹಣ ಸಂಗ್ರಹಿಸುವ ಇಲಾಖೆಗಳು ಮತ್ತು ಖರ್ಚು ಮಾಡುವ ಇಲಾಖೆಗಳೆರಡೂ ಸಮತೋಲನದಿಂದ ಕರ್ತವ್ಯ ನಿರ್ವಹಿಸಬೇಕು’ ಎಂದರು.

ಪುರುಷರ ವಿಭಾಗದಲ್ಲಿ ಪ್ರಶಸ್ತಿ ಹಂಚಿಕೊಂಡ ಕಾರ್ಲ್‌ಸನ್–ನಿಪೊಮ್‌ನಿಷಿ

ವಿಶ್ವ ಬ್ಲಿಟ್ಜ್: ವೈಶಾಲಿಗೆ ಕಂಚಿನ ಪದಕ

ನ್ಯೂಯಾರ್ಕ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ವೈಶಾಲಿ ಅವರು ವಿಶ್ವ ಚೆಸ್ ಬ್ಲಿಟ್ಸ್ ಚಾಂಪಿಯನ್‌ಷಿಪ್ ಮಹಿಳಾ ವಿಭಾಗ ದಲ್ಲಿ ಬುಧವಾರ ಕಂಚಿನ ಪದಕ ಗೆದ್ದುಕೊಂಡರು. ಮೂರು ದಿನಗಳ ಹಿಂದೆ ಕೋನೇರು ಹಂಪಿ ರ್‍ಯಾಪಿಡ್ ವಿಭಾಗದ ಕಿರೀಟ ಧರಿಸಿದ್ದರು.

ವೈಶಾಲಿ ಕ್ವಾರ್ಟರ್‌ಫೈನಲ್ ಪಂದ್ಯ ದಲ್ಲಿ 2.5–1.5 ರಿಂದ ಚೀನಾದ ಝು ಜಿನರ್ ಅವರನ್ನು ಸೋಲಿಸಿದ್ದರು. ಆದರೆ ಸೆಮಿಫೈನಲ್‌ನಲ್ಲಿ ಚೀನಾದ ಇನ್ನೊಬ್ಬ ಆಟಗಾರ್ತಿ ಜು ವೆನ್‌ಜುನ್ ಎದುರು 0.5–1.5 ರಿಂದ ಸೋಲನುಭವಿಸಿದರು.

ಅತಿ ವೇಗದ ಈ ಚೆಸ್ ಆಟದಲ್ಲಿ ಚೀನಾ ಆಟಗಾರ್ತಿಯರು ಪಾರಮ್ಯ ಸಾಧಿಸಿದರು. ಚೀನಾದ ಜು ವೆನ್‌ಜುನ್ ಫೈನಲ್‌ನಲ್ಲಿ ಸ್ವದೇಶದ ಲೀ ಟಿಂಗ್ಜೀ ಅವರನ್ನು 3.5–2.5 ರಿಂದ ಮಣಿಸಿದರು.

ಐದು ಬಾರಿಯ ವಿಶ್ವ ಚಾಂಪಿಯನ್ ಹಾಗೂ ಫಿಡೆ ಉಪಾಧ್ಯಕ್ಷ ವಿಶ್ವನಾಥನ್ ಆನಂದ್ ಅವರು ವೈಶಾಲಿ ಅವರನ್ನು ಅಭಿನಂದಿಸಿದರು. 'ವರ್ಷವನ್ನು ಶ್ರೇಷ್ಠ ರೀತಿಯಲ್ಲಿ ಮುಗಿಸಿದ ಪರಿಯಿದು' ಎಂದು ಶ್ಲಾಘಿಸಿದರು.

ಓಪನ್ ವಿಭಾಗ: ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಮತ್ತು ರಷ್ಯಾದ ಇಯಾನ್ ನಿಪೊಮ್‌ನಿಷಿ ಅವರು ಬ್ಲಿಟ್ಜ್ ಚಾಂಪಿಯನ್‌ಷಿಪ್ ಓಪನ್ ವಿಭಾಗದ ಪ್ರಶಸ್ತಿ ಹಂಚಿಕೊಂಡರು. ಇವರಿಬ್ಬರ ನಡುವಣ ಪೈಪೋಟಿ ಮೂರು ಸಡನ್ ಡೆತ್ ಪಂದ್ಯಗಳವರೆಗೆ ಬೆಳೆದರೂ ನಿರ್ಣಾಯಕ ಫಲಿತಾಂಶ ಬರಲಿಲ್ಲ. ಈ ಚಾಂಪಿಯನ್‌ಷಿಪ್‌ನಲ್ಲಿ ಇದೇ ಮೊದಲ ಬಾರಿ ಪ್ರಶಸ್ತಿ ಹಂಚಿಕೊಳ್ಳಲಾಗುತ್ತಿದೆ.

ನಿರ್ಣಾಯಕ ಫಲಿತಾಂಶ ಬರದ ಕಾರಣ ಪ್ರಶಸ್ತಿಯನ್ನು ಹಂಚಿಕೊಳ್ಳಬಹುದೇ ಎಂದು ಕಾರ್ಲ್‌ಸನ್ ಕೇಳಿದ ನಂತರ ಆಯೋಜಕರು ಈ ನಿರ್ಧಾರಕ್ಕೆ ಬಂದರು.


'ಇಬ್ಬರೂ ದಣಿದಿದ್ದೆವು. ಕೆಲವರಿಗೆ ಈ ನಿರ್ಧಾರ ಇಷ್ಟವಾಗಬಹುದು. ಕೆಲವರು ಇಷ್ಟಪಡದಿರಬಹುದು' ಎಂದು ನಾರ್ವೆಯ ಆಟಗಾರ ಮಾಧ್ಯಮ ಸಂವಾದದ ವೇಳೆ ಹೇಳಿದರು.

ಕಾರ್ಲ್‌ಸನ್‌ಗೆ ಇದು ಎರಡನೇ ಯಶಸ್ಸಿನಂತೆ ಆಗಿದೆ. ಕಳೆದ ವಾರ ರ್‍ಯಾಪಿಡ್ ಚಾಂಪಿಯನ್‌ಷಿಪ್ ವೇಳೆ ಉಡುಪು ಸಂಹಿತೆ ಉಲ್ಲಂಘಿಸಿದ್ದಕ್ಕೆ ಅವರನ್ನು ಅನರ್ಹಗೊಳಿಸಲಾಗಿತ್ತು. ಆದರೆ ಎರಡೇ ದಿನಗಳಲ್ಲಿ ನಿಯಮದಲ್ಲಿ ಮಾರ್ಪಾಡು ಮಾಡಿ ಅವರನ್ನು ಬ್ಲಿಟ್ಜ್ ಚಾಂಪಿಯನ್‌ಷಿಪ್‌ಗೆ ಸೇರ್ಪಡೆ ಮಾಡಲಾಯಿತು.

ಜೀನ್ಸ್ ಧರಿಸಿ ಆಡಲು ಬಂದಿದ್ದ ಅವರಿಗೆ ಫಾರ್ಮಲ್ ಪ್ಯಾಂಟ್ ಧರಿಸಿ ಬರುವಂತೆ ಸೂಚಿಸಲಾಗಿತ್ತು. ಅವರು ಬ್ಲಿಟ್ಜ್‌ಗೆ ಜೀನ್ಸ್ ಧರಿಸಿ ಬಂದರು.



ಪ್ರಶಸ್ತಿ ಹಂಚಿಕೊಂಡ ಕಾರ್ಲ್‌ಸನ್–ನಿಪೊಮ್‌ನಿಷಿ


ಆರ್.ವೈಶಾಲಿ

ರ್‍ಯಾಂಕಿಂಗ್: ಅಶ್ವಿನ್ ದಾಖಲೆ ಮುರಿದ ಬೂಮ್ರಾ

ದುಬೈ (ಪಿಟಿಐ): ಭಾರತದ ಅಗ್ರಗಣ್ಯ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಬುಧವಾರ ಪ್ರಕಟವಾದ ಐಸಿಸಿ ರ್‍ಯಾಂಕಿಂಗ್‌ನ ಟೆಸ್ಟ್ ಬೌಲರ್‌ಗಳ ಪಟ್ಟಿಯಲ್ಲಿ 907 ರೇಟಿಂಗ್ ಪಾಯಿಂಟ್ ತಲುಪುವ ಮೂಲಕ ರವಿಚಂದ್ರನ್ ಅಶ್ವಿನ್ ದಾಖಲೆ ಮುರಿದರು.

ಇತ್ತೀಚೆಗೆ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ್ದ ಅಶ್ವಿನ್ 2016ರ ಡಿಸೆಂಬರ್‌ನಲ್ಲಿ 904 ರೇಟಿಂಗ್ ಪಾಯಿಂಟ್ಸ್ ಗಳಿಸಿದ್ದು ಇದುವರೆಗಿನ ಅತ್ಯಧಿಕ ಎನಿಸಿತ್ತು. ಸಾರ್ವಕಾಲಿಕ ಶ್ರೇಷ್ಠರ ಪಟ್ಟಿಯಲ್ಲಿ ಅವರು ಇಂಗ್ಲೆಂಡ್‌ನ ಡೆರೆಕ್ ಅಂಡರ್‌ವುಡ್ ಜೊತೆ 17ನೇ ಸ್ಥಾನ ಹಂಚಿಕೊಂಡಿದ್ದಾರೆ.

ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯಕ್ಕೆ ಮೊದಲು ಬೂಮ್ರಾ ಅವರು ಅಶ್ವಿನ್ ದಾಖಲೆಯನ್ನು (904) ಸರಿಗಟ್ಟಿದ್ದರು.


ಜಸ್‌ಪ್ರೀತ್ ಬುಮ್ರಾ

ಮೆಲ್ಬರ್ನ್‌ನಲ್ಲಿ ಇನ್ನೊಮ್ಮೆ ಉತ್ತಮ ಪ್ರದರ್ಶನ ನೀಡಿದ್ದರಿಂದ ಅವರು ಅಗ್ರಮಾನ್ಯ ಟೆಸ್ಟ್ ಬೌಲರ್ ಸ್ಥಾನವನ್ನು ಇನ್ನಷ್ಟು ಭದ್ರಗೊಳಿಸಿದರು.

ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ 15 ರೇಟಿಂಗ್ ಪಾಯಿಂಟ್ಸ್ ಸಂಪಾದಿಸಿ ಮೂರನೇ ಸ್ಥಾನಕ್ಕೆ ಜಿಗಿದರು. ಅವರು ನಾಲ್ಕನೇ ಟೆಸ್ಟ್‌ನಲ್ಲಿ ಆರು ವಿಕೆಟ್ ಪಡೆದು ಆಸ್ಟ್ರೇಲಿಯಾ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಟೆಸ್ಟ್ ಆಲ್‌ರೌಂಡರ್‌ಗಳ ಪಟ್ಟಿಯಲ್ಲೂ ಅವರು ಮೂರನೇ ಸ್ಥಾನ ಪಡೆದಿದ್ದಾರೆ.

ಮೆಲ್ಬರ್ನ್ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 82 ರನ್ ಆಟದಿಂದ ಆರಂಭ ಆಟಗಾರ ಯಶಸ್ವಿ ಜೈಸ್ವಾಲ್ ಬ್ಯಾಟರ್‌ಗಳ ಪಟ್ಟಿಯಲ್ಲಿ ಬಡ್ತಿ ಪಡೆದಿದ್ದು ಜೀವನಶ್ರೇಷ್ಠ 854 ರೇಟಿಂಗ್ ಪಾಯಿಂಟ್ಸ್ ಗಳಿಸಿ ನಾಲ್ಕನೇ ಸ್ಥಾನಕ್ಕೇರಿದ್ದಾರೆ. ಆ ಟೆಸ್ಟ್‌ನಲ್ಲಿ ಚೊಚ್ಚಲ ಶತಕ ಬಾರಿಸಿದ ನಿತೀಶ್ ಕುಮಾರ್ ರೆಡ್ಡಿ ಅವರು 30 ಸ್ಥಾನ ಬಡ್ತಿ ಪಡೆದು 53ನೇ ಸ್ಥಾನದಲ್ಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮನೆಗೆ ಮರಳಿದ ಕಾಂಬ್ಳಿ

ಠಾಣೆ ಮಹಾರಾಷ್ಟ್ರ, (ಪಿಟಿಐ) : ಅನಾರೋಗ್ಯದಿಂದ ಭಿವಂಡಿಯ ಆಕೃತಿ ಆಸ್ಪತ್ರೆಗೆ ದಾಖಲಾಗಿದ್ದ ಭಾರತ ಕ್ರಿಕೆಟ್ ತಂಡದ ಮಾಜಿ ಬ್ಯಾಟರ್ ವಿನೋದ್ ಕಾಂಬ್ಳಿ ಅವರು ಸುಮಾರು ಎರಡು ವಾರಗಳ ಚಿಕಿತ್ಸೆಯ ನಂತರ ಬುಧವಾರ ಸಂಜೆ ಮನೆಗೆ ಮರಳಿದರು.

ಮೂತ್ರನಾಳದ ಸೋಂಕಿನಿಂದ ಬಳಲುತ್ತಿದ್ದ 52 ವರ್ಷ ವಯಸ್ಸಿನ ಬ್ಯಾಟರ್ ಆಸ್ಪತ್ರೆಗೆ ದಾಖಲಾಗಿದ್ದರು. ಚಿಕಿತ್ಸೆಯ ವೇಳೆ ಅವರ ಮೆದುಳಿನಲ್ಲಿ ರಕ್ತ ಹೆಪ್ಪುಗಟ್ಟಿರುವುದು ನಂತರ ಪತ್ತೆಯಾಗಿತ್ತು.

ಹೊರಗೆ ಕಾಯುತ್ತಿದ್ದ ಮಾಧ್ಯಮದವರ ಜೊತೆ ಮಾತನಾಡಿದ ಕಾಂಬ್ಳಿ, 'ಮದ್ಯಪಾನ ಮತ್ತು ಮಾದಕವಸ್ತು ಸೇವನೆ ತ್ಯಜಿಸುವಂತೆ' ಹೊಸ ವರ್ಷದ ಸಂದೇಶವಾಗಿ ಜನರಿಗೆ ಮನವಿ ಮಾಡಿದರು.

'ಕಾಂಬ್ಳಿ ಪೂರ್ಣವಾಗಿ ಚೇತರಿಸಿಕೊಂಡಿದ್ದಾರೆ. ಅವರು ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕಷ್ಟೇ' ಎಂದು ಅವರಿಗೆ ಚಿಕಿತ್ಸೆ ನೀಡಿದ ವೈದ್ಯ ಡಾ.ವಿವೇಕ್ ತ್ರಿವೇದಿ ಹೇಳಿದರು.

ಬೆಳಗಾವಿಯಲ್ಲಿ 4ರಿಂದ ಫಿಡೆ ಚೆಸ್

ಬೆಳಗಾವಿ: ಇಲ್ಲಿನ ಧರ್ಮನಾಥ ಭವನದಲ್ಲಿ ಲಯನ್ಸ್ ಕ್ಲಬ್ ಆಫ್ ಬೆಳಗಾಂ ಮಿಡಟೌನ್ ಹಾಗೂ ಜಿಲ್ಲಾ ಚೆಸ್ ಅಸೋಸಿಯೇಷನ್ ವತಿಯಿಂದ ಜ.4ರಿಂದ 8ರವರೆಗೆ ಆಲ್ ಇಂಡಿಯಾ ಫಿಡೆ ರೇಟೆಡ್ ಓಪನ್ ಚೆಸ್ ಟೂರ್ನಿ ನಡೆಯಲಿದೆ.

'ಈ ಭಾಗದ ಚೆಸ್‌ಪಟುಗಳಿಗೆ ಪ್ರೋತ್ಸಾಹಿಸಲು ಮೂರು ವರ್ಷಗಳಿಂದ ಟೂರ್ನಿ ಆಯೋಜಿಸುತ್ತಿದ್ದೇವೆ. ಇದು ನಾಲ್ಕನೇ ಆವೃತ್ತಿಯ ಟೂರ್ನಿ. ಕಳೆದ ವರ್ಷ 150 ಆಟಗಾರರು ಭಾಗವಹಿಸಿದ್ದರು. ಈ ಬಾರಿ ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ, ತಮಿಳುನಾಡು, ಗೋವಾ ರಾಜ್ಯಗಳ 150ಕ್ಕೂ ಅಧಿಕ ಆಟಗಾರರು ಭಾಗವಹಿಸುವ ನಿರೀಕ್ಷೆ ಇದೆ' ಎಂದು ಕ್ಲಬ್ ಅಧ್ಯಕ್ಷ ವಿಶ್ವಜೀತ್ ದೇಶಪಾಂಡೆ ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

'ಈ ಟೂರ್ನಿಯ ವಿವಿಧ ವಿಭಾಗಗಳಲ್ಲಿ ವಿಜೇತರಾದ 51 ಆಟಗಾರರಿಗೆ ಒಟ್ಟು ₹3.25 ಲಕ್ಷ ನಗದು ಬಹುಮಾನ ನೀಡಲಾಗುವುದು. 23 ಆಟಗಾರರಿಗೆ ಟ್ರೋಫಿ ಮತ್ತು 20 ಆಟಗಾರರಿಗೆ ಪದಕಗಳನ್ನು ನೀಡಲಾಗುವುದು' ಎಂದರು.

ಯುಟಿಟಿ ಯೂತ್ ಟೂರ್ನಿಗೆ ರಾಜ್ಯ ತಂಡಗಳು

ಬೆಂಗಳೂರು: ಸಹನಾ ಎಚ್ ಮೂರ್ತಿ ಮತ್ತು ರೋಹಿತ್ ಶಂಕರ್ ಅವರು ಕ್ರಮವಾಗಿ ಯುಟಿಟಿ ಅಂತರರಾಜ್ಯ ಯೂತ್ ರಾಷ್ಟ್ರೀಯ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಸ್ಪರ್ಧಿಸುವ 19 ವರ್ಷದೊಳಗಿನವರ ಬಾಲಕಿ ಮತ್ತು ಬಾಲಕರ ತಂಡಗಳಲ್ಲಿ ಸ್ಥಾನ ಪಡೆದಿದ್ದಾರೆ. 17 ವರ್ಷದೊಳಗಿನವರ ತಂಡಗಳನ್ನು ಪ್ರಕಟಿಸಲಾಗಿದೆ.

ಕರ್ನಾಟಕ ರಾಜ್ಯ ಟೇಬಲ್ ಟೆನಿಸ್ ಸಂಸ್ಥೆ (ಕೆಟಿಟಿಎ) ಕಾರ್ಯದರ್ಶಿ ಕೆ.ಆರ್. ಮಂಜುನಾಥ್ ಬುಧವಾರ ಪ್ರಕಟಿಸಿರುವ ತಂಡ ಇಂತಿದೆ: ಜೂನಿಯರ್ ಬಾಲಕಿಯರು (17 ವರ್ಷದೊಳಗಿನವರು): ಹಿಮಾಂಶಿ ಚೌಧರಿ, ನೀತಿ ಅಗರವಾಲ್, ಪ್ರೇಕ್ಷಾ ತಿಲಾವತ್, ಶಿವಾನಿ ಮಹೇಂದ್ರನ್. ಜೂನಿಯರ್ ಬಾಲಕರು (17 ವರ್ಷದೊಳಗಿನವರು): ಸಿದ್ಧಾಂತ್ ಧರಿವಾಲ್, ಎನ್. ಆರ್ಣವ್, ಅಥರ್ವ ನವರಂಗೆ, ವಿ.ಜಿ. ವಿಭಾಸ್. ಯೂತ್ ಬಾಲಕಿಯರು (19 ವರ್ಷ): ಸಹನಾ ಎಚ್. ಮೂರ್ತಿ, ಹಿಮಾಂಶಿ ಚೌಧರಿ, ನೀತಿ ಅಗರವಾಲ್, ದೇಶ್ನಾ ಎಂ. ವಂಶಿಕಾ. ಯೂತ್ ಬಾಲಕರು: (19 ವರ್ಷ): ರೋಹಿತ್ ಶಂಕರ್, ವಿ.ಜಿ. ವಿಭಾಸ್, ಅಭಿನವ್ ಕೆ. ಮೂರ್ತಿ, ಅಥರ್ವ ನವರಂಗೆಮ್ಯಾನೇಜರ್–ಕೋಚ್ (ಬಾಲಕಿಯರ ತಂಡ); ಪ್ರವೀಣ ಜೋಶಿ, ಬಾಲಕರ ತಂಡ: ಶಿವಕುಮಾರ್ ಕೊತನೂರ್.

ಚಾಂಪಿಯನ್ಸ್ ಟ್ರೋಫಿ ಹಾಕಿ: ಮರುಜೀವ ನೀಡಲು ಆಸಕ್ತಿ

ರೂರ್ಕೆಲಾ (ಪಿಟಿಐ): ಕೆಲವು ವರ್ಷಗಳಿಂದ ಸ್ಥಗಿತಗೊಂಡಿರುವ ಪ್ರತಿಷ್ಠಿತ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಗೆ ಮರುಜೀವ ನೀಡಲು ಉತ್ಸುಕರಾಗಿರುವುದಾಗಿ ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ಅಧ್ಯಕ್ಷ ದಾತೊ ತಯ್ಯಬ್ ಇಕ್ರಂ ಬುಧವಾರ ಇಂಗಿತ ವ್ಯಕ್ತಪಡಿಸಿದ್ದಾರೆ. ಆದರೆ ಬಿಡುವಿಲ್ಲದ ಕಾರ್ಯಕ್ರಮಪಟ್ಟಿಯ ಮಧ್ಯೆ ಇದಕ್ಕೆ ಸಮಯ ನೀಡಲು ಕಷ್ಟವಾಗಬಹುದೆಂಬ ಅಂಶದ ಕಡೆಯೂ ಅವರು ಗಮನ ಸೆಳೆದಿದ್ದಾರೆ.

1978ರಲ್ಲಿ ಆರಂಭವಾದ ಚಾಂಪಿಯನ್ಸ್ ಟ್ರೋಫಿ ಟೂರ್ನಿ ವರ್ಷಂಪ್ರತಿ ನಡೆಯುತ್ತಿತ್ತು. 2014ರ ನಂತರ ಇದು ಎರಡು ವರ್ಷಗಳಿಗೊಮ್ಮೆ ನಿಗದಿಯಾಯಿತು. 2018ರ ನಂತರ ಈ ಟೂರ್ನಿಯನ್ನು ಎಫ್‌ಐಎಚ್ ನಡೆಸಿಲ್ಲ. ಒಂದು ಕಾಲದಲ್ಲಿ ಈ ಟೂರ್ನಿಯು ವಿಶ್ವಕಪ್, ಒಲಿಂಪಿಕ್ಸ್ ನಂತರದ ಸ್ಥಾನ ಪಡೆದಿತ್ತು.

'ಚಾಂಪಿಯನ್ಸ್ ಟ್ರೋಫಿ ಅಥವಾ ಅದೇ ರೀತಿಯ ದೊಡ್ಡ ಮಟ್ಟದ ಟೂರ್ನಿಯನ್ನು ನಡೆಸುವ ಸಾಧ್ಯತೆಯನ್ನು ನಾವು ತಳ್ಳಿಹಾಕುವುದಿಲ್ಲ. ಆದರೆ ನಾವು ಅದಕ್ಕೆ ಸಮಯ ಹೊಂದಿಸುವ (ವರ್ಷದ ವೇಳಾಪಟ್ಟಿಯಲ್ಲಿ) ಕಡೆ ಗಮನಹರಿಸಬೇಕಿದೆ' ಎಂದು ಇಕ್ರಂ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಜಾಗತಿಕವಾಗಿ ಹಾಕಿ ಆಟ ಇನ್ನಷ್ಟು ದೇಶಗಳನ್ನು ತಲುಪಬೇಕಾಗಿದೆ. ಈಗ 9 ಅಗ್ರ ದೇಶಗಳನ್ನು ಬಿಟ್ಟರೆ ನೆಲೆಕಾಣುತ್ತಿರುವ ಎರಡನೇ ಹಂತದ ದೇಶಗಳಲ್ಲಿ ಈ ಆಟ ಬೆಳೆಯಬೇಕಾದರೆ ಹೆಚ್ಚು ಅವಕಾಶಗಳನ್ನು ಕಲ್ಪಿಸಬೇಕಾಗಿದೆ' ಎಂದು ಅಭಿಪ್ರಾಯಪಟ್ಟರು.

'ಪ್ರೊ ಲೀಗ್ ಕನೆಕ್ಟ್': 2019ರಿಂದ ನಡೆಯುತ್ತಿರುವ ಎಫ್‌ಐಎಚ್‌ನ ಪ್ರಮುಖ ಟೂರ್ನಿಯಾದ ಪ್ರೊ ಲೀಗ್ ಬಗ್ಗೆ ಪ್ರಸ್ತಾಪಿಸಿದ ಅವರು, ಹಾಕಿ ಆಡುತ್ತಿರುವ ಅಗ್ರ ರಾಷ್ಟ್ರಗಳನ್ನು ಬಿಟ್ಟು ಉಳಿದ ದೇಶದ ತಂಡಗಳನ್ನು ಒಳಗೊಳ್ಳುವ 'ಪ್ರೊ ಲೀಗ್ ಕನೆಕ್ಟ್' ಆರಂಭಿಸುವ ಯೋಜನೆ ಘೋಷಿಸಿದರು. ಹಾಕಿ ಆಡುವ ಅಗ್ರ ರಾಷ್ಟ್ರಗಳ ಜೊತೆ ವಿಶ್ವದ ಇತರ ರಾಷ್ಟ್ರಗಳೂ ಹಾಕಿ ಕುಟುಂಬದಲ್ಲಿರಬೇಕು. ಆಗ ಪ್ರೊ ಲೀಗ್ ಹೆಚ್ಚು ಮೌಲಿಕವಾಗುತ್ತದೆ ಎಂದು ಇಕ್ರಂ ಹೇಳಿದರು. ಹಾಕಿ ಇಂಡಿಯಾ ಲೀಗ್ ಮತ್ತೆ ಆರಂಭಿಸಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು.

ಇಂಡಿಯನ್ ಗಾಲ್ಫ್ ಯೂನಿಯನ್‌ಗೆ ಐಒಎ ಮಾನ್ಯತೆ

ನವದೆಹಲಿ (ಪಿಟಿಐ): ಹರೀಶ್ ಕುಮಾರ್ ರೆಡ್ಡಿ ನೇತೃತ್ವದ ಇಂಡಿಯನ್ ಗಾಲ್ಫ್ ಯೂನಿಯನ್‌ಗೆ (ಐಜಿಯು) ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಮಾನ್ಯತೆ ನೀಡಿದೆ. ಆದರೆ, ಬ್ರಿಜಿಂದರ್ ಸಿಂಗ್ ನೇತೃತ್ವದ ಸಮಿತಿಯನ್ನು ಅನೂರ್ಜಿತ ಎಂದು ಘೋಷಿಸಿದೆ.

ಇಂಡಿಯನ್ ಗಾಲ್ಫ್ ಯೂನಿಯನ್‌ಗೆ ಮಾನ್ಯತೆ ನೀಡುವ ಮೊದಲು ಒಲಿಂಪಿಕ್ ಸಂಸ್ಥೆಯು ಅದರ ಕಾರ್ಯವಿಧಾನವನ್ನು ಪರಿಶೀಲಿಸಿದೆ ಎಂದು ಐಒಎ ಅಧ್ಯಕ್ಷೆ ಪಿ.ಟಿ. ಉಷಾ ಸಹಿ ಮಾಡಿದ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಎರಡೂ ಸಂಸ್ಥೆಗಳ ಮಹಾಸಭೆ ಡಿ.15ರಂದು ನಡೆದು, ಹೊಸ ಪದಾಧಿಕಾರಿಗಳ ಆಯ್ಕೆ ನಡೆದಿತ್ತು. ಇಂಡಿಯಾ ಹಾಬಿಟಾಟ್ ಸೆಂಟರ್‌ನಲ್ಲಿ ನಡೆದ ಸಭೆಯಲ್ಲಿ ಬ್ರಿಜೇಂದರ್ ಸಿಂಗ್ ಪುನರಾಯ್ಕೆಯಾಗಿದ್ದರು. ಒಲಿಂಪಿಕ್ ಭವನದಲ್ಲಿ ನಡೆದ ಸಭೆಯಲ್ಲಿ ಹರೀಶ್ ಕುಮಾರ್ ಆಯ್ಕೆಯಾಗಿದ್ದರು.

ಸಿಡ್ನಿ ಟೆಸ್ಟ್ ಪಂದ್ಯದಲ್ಲಿ ಕ್ರೀಡಾಂಗಣಕ್ಕೆ 'ಗುಲಾಬಿ ರಂಗು'

ಬೂಮ್ರಾ ಬೌಲಿಂಗ್‌ಗೆ ಮೆಕ್‌ಗ್ರಾ ಅಭಿಮಾನಿ

• ಮಧು ಜವಳಿ

ಮೆಲ್ಬರ್ನ್: ಬಾರ್ಡರ್–ಗಾವಸ್ಕರ್ ಟ್ರೋಫಿ ಕ್ರಿಕೆಟ್ ಟೆಸ್ಟ್ ಸರಣಿಯಲ್ಲಿ ಭಾರತದ ವೇಗಿ ಜಸ್‌ಪ್ರೀತ್ ಬೂಮ್ರಾ ಇದುವರೆಗೆ ಅಮೋಘವಾಗಿ ಬೌಲಿಂಗ್ ಮಾಡಿದ್ದಾರೆ.

ಸರಣಿಯಲ್ಲಿ ಆಸ್ಟ್ರೇಲಿಯಾ ತಂಡವು 2–1ರಿಂದ ಮುನ್ನಡೆ ಸಾಧಿಸಿದೆ. ಕೊನೆಯ ಮತ್ತು ಐದನೇ ಪಂದ್ಯವು ಸಿಡ್ನಿಯಲ್ಲಿ ಶುಕ್ರವಾರ ಆರಂಭವಾಗಲಿದ್ದು, 2–2ರ ಸಮಬಲ ಸಾಧಿಸುವತ್ತ ಭಾರತ ಚಿತ್ತ ನೆಟ್ಟಿದೆ. ಫಲಿತಾಂಶ ಏನೇ ಬರಲಿ; ಆದರೆ ಬೂಮ್ರಾ ಮಾತ್ರ ಮನ ಗೆದ್ದಿದ್ದಾರೆ. ಮನಸೋತವರಲ್ಲಿ ಆಸ್ಟ್ರೇಲಿಯಾದ ಮಾಜಿ ವೇಗಿ ಗ್ಲೆನ್ ಮೆಕ್‌ಗ್ರಾ ಕೂಡ ಇದ್ದಾರೆ. 'ನಾನು ಬೂಮ್ರಾ ಅವರ ಅಭಿಮಾನಿಯಾಗಿಬಿಟ್ಟಿದ್ದೇನೆ' ಎಂದು ಗ್ಲೆನ್ ಹೇಳಿದ್ದಾರೆ.

'ಬೂಮ್ರಾ ಅವರು ಇರದೇ ಹೋಗಿದ್ದರೆ, ಈ ಸರಣಿಯು(ಆಸ್ಟ್ರೇಲಿಯಾ ಪಾರಮ್ಯ) ಏಕ ಪಕ್ಷೀಯವಾಗಿರುತ್ತಿತ್ತು' ಎಂದು ಮೆಕ್‌ಗ್ರಾ ಅಭಿಪ್ರಾಯಪಟ್ಟಿದ್ದಾರೆ.

ಅವರು ಇಲ್ಲಿ ತಮ್ಮ ಪ್ರತಿಷ್ಠಾನದ ಆಶ್ರಯದಲ್ಲಿ ಆಯೋಜಿಸಿದ್ದ ಕ್ಯಾನ್ಸರ್ ತಡೆ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು. 2008ರಲ್ಲಿ ಗ್ಲೆನ್ ಪತ್ನಿ ಜೇನ್ ಅವರು ಕ್ಯಾನ್ಸರ್ ಕಾಯಿಲೆಗೆ ಬಲಿಯಾಗಿದ್ದರು. ಆಗ ಗ್ಲೆನ್ ಫೌಂಡೇಷನ್ ಆರಂಭಿಸಿ ಜಾಗೃತಿ ಮೂಡಿ ಸುತ್ತಿದ್ದಾರೆ. ಐದನೇ ಟೆಸ್ಟ್ ಸಂದರ್ಭದಲ್ಲಿ ಮೆಕ್‌ಗ್ರಾ ಫೌಂಡೇಷನ್ ಕಾರ್ಯವನ್ನು ಬೆಂಬಲಿಸಿ ಆಟಗಾರರು ಪಿಂಕ್ ಕ್ಯಾಪ್ ಧರಿಸಿ ಆಡುವರು. ಗ್ಯಾಲರಿಯಲ್ಲಿರುವವರೂ ಗುಲಾಬಿ ವರ್ಣದ ಪೋಷಾಕುಗಳು ಧರಿಸಲಿದ್ದಾರೆ. 'ಗೋ ಆಸ್ಟ್ರೇಲಿಯಾ ಅಭಿಯಾನ ಇಲ್ಲಿ ನಡೆ

ಈ ಸಂದರ್ಭದಲ್ಲಿ ಮಾತನಾಡಿದ ಅವರು, 'ಬೂಮ್ರಾ ವಿಶಿಷ್ಟ ಶೈಲಿಯ ಬೌಲರ್. ಅವರ ಶೈಲಿಯನ್ನು ಯುವ ಆಟಗಾರರಿಗೆ ಹೇಳಿಕೊಡುವುದು ಕಷ್ಟ. ಆದರೆ ಅಂತಹ ಶೈಲಿಯನ್ನುಅವರು (ಬೂಮ್ರಾ)ಸರಾಗವಾಗಿ ಪ್ರಯೋಗಿಸುತ್ತಾರೆ. ವಿಸ್ಮಯಕಾರಿ ಬೌಲರ್ ಅವರು ' ಎಂದರು.

'ತಮ್ಮ ರನ್ ಅಪ್‌ನ ಕೊನೆಯ ಕೆಲವೇ ಹೆಜ್ಜೆಗಳಲ್ಲಿ ಅವರು ಅಪಾರ ಪ್ರಮಾಣದಲ್ಲಿ ಶಕ್ತಿಯನ್ನು ಸಂಚಯ ಮಾಡಿಕೊಂಡು ಚೆಂಡು ಬಿಡುಗಡೆಗೊಳಿಸುವ ರೀತಿ ಅಮೋಘವಾಗಿದೆ. ಅವರು ವಿಕೆಟ್‌ನ ಎರಡೂ ಕಡೆಯಿಂದ ಚೆಂಡು ಪ್ರಯೋಗಿಸುವುದರ ಮೇಲೆ ಉತ್ತಮ ನಿಯಂತ್ರಣ ಸಾಧಿಸಿದ್ದಾರೆ. ಅವರ ಅಂಕಿಸಂಖ್ಯೆಗಳು ಅದ್ಭುತವಾಗಿವೆಅದಕ್ಕಾಗಿಯೇ ನಾನು ಅವರ ಅಭಿಮಾನಿಯಾಗಿರುವೆ' ಎಂದರು.

ಭಾರತ ತಂಡದಲ್ಲಿರುವ ಕನ್ನಡಿಗ ಪ್ರಸಿದ್ಧ ಕೃಷ್ಣ ಅವರ ಕುರಿತು ಮಾತನಾಡಿದ ಅವರು, 'ಭಾರತವೆಂದರೆ 140 ಕೋಟಿ ಜನಸಂಖ್ಯೆಯಿರುವ ಮತ್ತು ಅಪ್ಪಟ ಕ್ರಿಕೆಟ್ ಪ್ರೇಮಿಗಳ ದೇಶ. ಈ ಆಟವು ಅವರ ಸಂಸ್ಕೃತಿಯ ಭಾಗವೇ ಆಗಿಬಿಟ್ಟಿದೆ. ಒಂದು ತುಂಡು ಜಾಗ ಸಿಕ್ಕಿದರೂ ಕ್ರಿಕೆಟ್ ಆಡಲು ಆರಂಭಿಸುತ್ತಾರೆ. ಅವರ ಆಸಕ್ತಿಯನ್ನು ಕಣ್ಣಾರೆ ಕಂಡಿದ್ದೇನೆ. ಪೇಸ್ ಫೌಂಡೇಷನ್‌ನಲ್ಲಿ ಕೆಲಸ ಮಾಡುವಾಗ ನೋಡಿರುವೆ. ಪ್ರಸಿದ್ಧಕೃಷ್ಣ ಪ್ರತಿಭಾನ್ವಿತ ಬೌಲರ್. ಭವಿಷ್ಯದಲ್ಲಿ ಉತ್ತಮವಾಗಿ ಬೆಳೆಯಬಲ್ಲರು' ಎಂದರು.

'ಈಗಿನ ಯುವಪೀಳಿಗೆಯ ಮನೋಭಾವ ವಿಭಿನ್ನವಾಗಿದೆ. ಅವರು ಯಾವುದಕ್ಕೂ ಹೆದರುವುದಿಲ್ಲ. ಎಂತಹದೇ ಸ್ಥಿತಿಯಲ್ಲಿಯೂ ಅವರು ದಿಟ್ಟವಾಗಿ ಆಡುತ್ತಾರೆ. ಅವರ ಆ ಗುಣವೇ ನನಗೆ ಅಪಾರ ಇಷ್ಟ. ಆಸ್ಟ್ರೇಲಿಯಾ ತಂಡದಲ್ಲಿರುವ ಸ್ಯಾಮ್ ಕೊನ್‌ಸ್ಟಸ್ ಕೂಡ ಅದೇ ರೀತಿಯ ಹುಡುಗ. ಭಾರತ ತಂಡದಲ್ಲಿ ಯುವ ಆಟಗಾರರಿಗೆ ಕೊರತೆ ಇಲ್ಲ' ಎಂದು ಹೇಳಿದರು.


ಆಸ್ಟ್ರೇಲಿಯಾ ಪ್ರಧಾನಿ ಅಂತೋನಿ ಅಲ್ಬನೀಸ್ ಜೊತೆ ಭಾರತೀಯ ಆಟಗಾರರು.

ಆಸ್ಟ್ರೇಲಿಯಾ ಪ್ರಧಾನಿ ಮೇಲೂ ಜಸ್‌ಪ್ರೀತ್ ಮೋಡಿ

ಸಿಡ್ನಿ (ಪಿಟಿಐ): ಭಾರತ ತಂಡದ ವೇಗಿ ಜಸ್‌ಪ್ರೀತ್ ಬೂಮ್ರಾ ಅವರ ಬೌಲಿಂಗ್ ಪ್ರಭಾವ ಆಸ್ಟ್ರೇಲಿಯಾದ ಪ್ರಧಾನಿ ಅಂತೋನಿ ಅಲ್ಬನೀಸ್ ಅವರನ್ನು ಬಿಟ್ಟಿಲ್ಲ. ಬೂಮ್ರಾ ಬೌಲಿಂಗ್ ಅನ್ನು ಅಪಾರವಾಗಿ ಮೆಚ್ಚಿಕೊಂಡಿದ್ದಾರೆ.

'ನಾವು ಇಲ್ಲಿ (ಆಸ್ಟ್ರೇಲಿಯಾದಲ್ಲಿ) ಒಂದು ಕಾನೂನು ಜಾರಿ ಮಾಡಬೇಕು. ಅವರು (ಬೂಮ್ರಾ) ಇಲ್ಲಿ ಎಡಗೈನಲ್ಲಿ ಬೌಲಿಂಗ್ ಮಾಡಬೇಕು ಅಥವಾ ಒಂದೇ ಸ್ಟೆಪ್ ರನ್‌ಅಪ್ ನಿಂದ ಬೌಲಿಂಗ್ ಮಾಡಬೇಕು ಎಂಬ ನಿಯಮ ಮಾಡಬೇಕು' ಎಂದು ಅಂತೋನಿ ಅವರು ಬುಧವಾರ ಹಾಸ್ಯ ಚಟಾಕಿ ಹಾರಿಸಿದರು. ಈ ಕುರಿತು ಸಿಡ್ನಿ ಮಾರ್ನಿಂಗ್ ಹೆರಾಲ್ಡ್ ಪತ್ರಿಕೆ ವರದಿ ಮಾಡಿದೆ.

ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಆಡುತ್ತಿರುವ ಭಾರತ ಮತ್ತು ಆಸ್ಟ್ರೇಲಿಯಾ ತಂಡದ ಆಟಗಾರರೊಂದಿಗೆ ಬುಧವಾರ ಆಸ್ಟ್ರೇಲಿಯಾ ಪ್ರಧಾನಿ ಅಂತೋನಿ ಅಲ್ಬನೀಸ್ ಅವರು ಸಂವಾದ ನಡೆಸಿದರು.

'ಶುಕ್ರವಾರ ಇಲ್ಲಿ ಆರಂಭವಾಗುವ ಐದನೇ ಟೆಸ್ಟ್‌ನಲ್ಲಿ ಮೆಕ್‌ಗ್ರಾ ಫೌಂಡೇಷನ್ ಬೆಂಬಲಿಸಲಾಗುವುದು. ಅವರು ಮಾಡುತ್ತಿರುವ ಮಹತ್ಕಾರ್ಯ ಮಾದರಿಯಾಗಿದೆ. ಆ ದಿನ ಇಡೀ ಎಸ್‌ಸಿಜಿ ಗುಲಾಬಿ ವರ್ಣಮಯವಾಗಲಿದೆ' ಎಂದರು.

ತಂಡ ನಿರ್ವಹಣೆಯಲ್ಲಿ ಗಂಭೀರ್ ವೈಫಲ್ಯ?

ಸಿಡ್ನಿ (ಪಿಟಿಐ): ಭಾರತ ಕ್ರಿಕೆಟ್ ತಂಡದಲ್ಲಿ ಇಬ್ಬರು ತಾರಾ ವರ್ಚಸ್ಸಿನ ಆಟಗಾರರಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರ ವೈಫಲ್ಯದ ಸುತ್ತ ಬಹಳಷ್ಟು ಮಾತುಗಳು ಕೇಳಿಬರುತ್ತಿವೆ. ಅದರೊಂದಿಗೆ ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ಅವರ ಸಿಬ್ಬಂದಿಯು ತಂಡವನ್ನು ನಿರ್ವಹಿಸುವ ರೀತಿಯ ಬಗ್ಗೆ ಹಲವು ಪ್ರಶ್ನೆಗಳು ಮೂಡಿವೆ.

ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಭಾರತವು ತಂಡದ ಆಟಗಾರರ ಉತ್ತಮ ಸಂಯೋಜನೆ ಮಾಡಲು ಪರದಾಡುತ್ತಿದೆ. ಬಲಿಷ್ಠವಾಗಿರುವ ಆಸ್ಟ್ರೇಲಿಯಾ ತಂಡವನ್ನು ಎದುರಿಸಲು ತಕ್ಕ ಆಟಗಾರರು ಇರುವ ಬಳಗವನ್ನು ಆಯ್ಕೆ ಮಾಡುವಲ್ಲಿ ಹಿನ್ನಡೆಯಾಗಿದೆ.

ಪಂದ್ಯದಲ್ಲಿ ಘಟಿಸುತ್ತಿರುವ ಏರಿಳಿತಗಳು ಕ್ರೀಡಾಂಗಣದ ಹೊರಗೂ ತಂಡದ ಮೇಲೆ ಪರಿಣಾಮ ಬೀರುತ್ತಿವೆ. ಡ್ರೆಸ್ಸಿಂಗ್ ಕೋಣೆಯಲ್ಲಿ ಎಲ್ಲವೂ ಸರಿಯಿಲ್ಲ ಎಂಬ ಪಿಸುಮಾತುಗಳಿವೆ.

ಆಟಗಾರರು ಈ ಹಿಂದೆ ರವಿಶಾಸ್ತ್ರಿ ಮತ್ತು ರಾಹುಲ್ ದ್ರಾವಿಡ್ ಅವರೊಂದಿಗೆ ಇದ್ದ ಬಾಂಧವ್ಯದ ರೀತಿಯು ಗೌತಮ್ ಗಂಭೀರ್ ಅವರೊಂದಿಗೆ ಇಲ್ಲ ಎಂದು ಹೇಳಲಾಗುತ್ತಿದೆ. ನಾಯಕ ರೋಹಿತ್ ಶರ್ಮಾ ಅವರು ಆಟಗಾರರೊಂದಿಗೆ ವೈಯಕ್ತಿಕವಾಗಿ ಆಯ್ಕೆಯ ಕುರಿತು ಮಾತನಾಡುತ್ತಿದ್ದಾರೆನ್ನಲಾಗಿದೆ. ಆದರೆ ರೋಹಿತ್ ಅವರ ಸತತ ಬ್ಯಾಟಿಂಗ್ ವೈಫಲ್ಯ ಅನುಭವಿಸುತ್ತಿದ್ದಾರೆ.

'ಭಾರತ ತಂಡವು ಇನ್ನೊಂದು ಟೆಸ್ಟ್ ಪಂದ್ಯ ಮತ್ತು ಚಾಂಪಿಯನ್ಸ್ ಟ್ರೋಫಿ ಟೂರ್ನಿ ಆಡಬೇಕಿದೆ. ಆದರೆ ಆಟಗಾರರ ಸಾಮರ್ಥ್ಯದಲ್ಲಿ ವೃದ್ಧಿಯಾಗದಿದ್ದರೆ, ಗೌತಮ್ ಗಂಭೀರ್ ಅವರ ಸ್ಥಾನವೂ ಸುರಕ್ಷಿತವಲ್ಲ' ಎಂದು ಬಿಸಿಸಿಐ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಗಂಭೀರ್ ಹಾಗೂ ಆಯ್ಕೆ ಸಮಿತಿಯ ಸಂಬಂಧ ಯಾವ ರೀತಿಯಿದೆ ಎಂಬ ಬಗ್ಗೆಯೂ ಸ್ಪಷ್ಟತೆ ಇಲ್ಲ. ಬಾರ್ಡರ್–ಗಾವಸ್ಕರ್ ಟ್ರೋಫಿ ಸರಣಿಯಲ್ಲಿ ಹನ್ನೊಂದರ ಬಳಗದ ಆಯ್ಕೆಯಲ್ಲಿ ಬಹಳಷ್ಟು ಪ್ರಯೋಗಗಳು ನಡೆಯುತ್ತಿವೆ. ಇದರಿಂದಾಗಿ ತಂಡದಲ್ಲಿರುವ ಕೆಲವು ಆಟಗಾರರಿಗೆ ಅಭದ್ರತೆಯ ಭಾವವೂ ಕಾಡುತ್ತಿರಬಹುದು. ಈ ಪ್ರಯೋಗಗಳಲ್ಲಿ ಕೆಲವು ಸಫಲವಾಗಿವೆ. ನಿತೀಶ್ ಕುಮಾರ್ ರೆಡ್ಡಿಯ ಆಯ್ಕೆ ಇದಕ್ಕೆ ಉದಾಹರಣೆ. ಆದರೆ ಶುಭಮನ್ ಗಿಲ್ ಅವರ ವಿಷಯದಲ್ಲಿ ಇದನ್ನೇ ಹೇಳಲಾಗದು.

ಜಯ್ ಶಾ ಬಿಸಿಸಿಐ ಕಾರ್ಯದರ್ಶಿಯಾಗಿದ್ದ ಸಂದರ್ಭದಲ್ಲಿ ತಂಡದ ಸಂಗತಿಗಳ ಕುರಿತು ನಿರ್ಣಯಗಳನ್ನು ಕೈಗೊಳ್ಳುತ್ತಿದ್ದರು. ಇದೀಗ ಅವರು ಐಸಿಸಿ ಅಧ್ಯಕ್ಷರಾಗಿ ತೆರಳಿದ್ದಾರೆ. ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಅವರು ಕಾರ್ಯನೀತಿಯ ಕುರಿತು ಯಾವುದೇ ನಿರ್ಣಯ ಕೈಗೊಳ್ಳುತ್ತಿಲ್ಲವೆನ್ನಲಾಗಿದೆ.

ಫೆಬ್ರುವರಿ–ಮಾರ್ಚ್‌ನಲ್ಲಿ ಚಾಂಪಿಯನ್ಸ್ ಟ್ರೋಫಿ ಟೂರ್ನಿ ನಡೆಯಲಿದೆ. ಅದರಲ್ಲಿ ಭಾರತವು ಉತ್ತಮವಾಗಿ ಆಡದಿದ್ದರೆ ಗಂಭೀರ್ ಸ್ಥಾನಕ್ಕೆ ಕಂಟಕ ಬರುವುದು ಬಹುತೇಕ ಖಚಿತ.

'ಅವರು ಯಾವತ್ತೂ ಬಿಸಿಸಿಐಗೆ ಮೊದಲ ಆಯ್ಕೆ ಆಗಿರಲಿಲ್ಲ. ವಿದೇಶಗಳ ಖ್ಯಾತನಾಮ ಕೋಚ್‌ಗಳು ಮೂರು ಮಾದರಿಗಳಲ್ಲಿಯೂ ಕಾರ್ಯನಿರ್ವಹಿಸಲು ಸಿದ್ಧವಾಗಿರಲಿಲ್ಲ' ಎಂದು ಅಧಿಕಾರಿಗಳು ಹೇಳಿದರು.

ಈಚೆಗೆ ಭಾರತ ತಂಡವು ತವರಿನಲ್ಲಿ 0–3ರಿಂದ ನ್ಯೂಜಿಲೆಂಡ್ ವಿರುದ್ಧ ಸೋತಿತ್ತು. ಆಗಲೂ ಗಂಭೀರ್ ಅವರು ಬಹಳಷ್ಟು ಪ್ರಶ್ನೆಗಳನ್ನು ಎದುರಿಸಿದ್ದಾರೆ. ಈಗ ಬಾರ್ಡರ್–ಗಾವಸ್ಕರ್ ಟ್ರೋಫಿ ಸರಣಿ ಸೋತರೂ ದೆಹಲಿಯ ಗಂಭೀರ್ ಮತ್ತಷ್ಟು ಟೀಕೆಗಳನ್ನು ಎದುರಿಸಬೇಕಾಗಬಹುದು.



ವಿರಾಟ್ ಕೊಹ್ಲಿ ಮತ್ತು ಗೌತಮ್ ಗಂಭೀರ್ –ಪಿಟಿಐ ಚಿತ್ರ

ಅಥ್ಲೆಟಿಕ್ಸ್: ಅರ್ಪಿತಾಗೆ ಎರಡನೇ ಸ್ಥಾನ


ಇ.ಬಿ.ಅರ್ಪಿತಾ

ಬೆಂಗಳೂರು: ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯದ ಅಥ್ಲೆಟಿಕ್ಸ್‌ನಲ್ಲಿ ಇ.ಬಿ.ಅರ್ಪಿತಾ ಎರಡನೇ ಸ್ಥಾನ ಪಡೆದಿದ್ದಾರೆ.

ಭುವನೇಶ್ವರದ ಕಳಿಂಗಾ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸಸ್ ಮತ್ತು ಕೆಐಐಟಿ ಆಫ್ ಇನ್‌ಸ್ಟಿಟ್ಯೂಷನ್‌ನಲ್ಲಿ ಕ್ರೀಡಾಕೂಟ ನಡೆಯಿತು. ಬೆಂಗಳೂರಿನ ಸಿಮ್ಸ್ ಇನ್‌ಸ್ಟಿಟ್ಯೂಟ್‌ನ ವಿದ್ಯಾರ್ಥಿನಿ ಅರ್ಪಿತಾ ಮಹಿಳೆಯರ 800 ಮೀಟರ್ ಓಟದಲ್ಲಿ ಇ.ಬಿ. ಅರ್ಪಿತಾ(02:06:25 ಸೆಕೆಂಡು) ಗುರಿ ಮುಟ್ಟಿ 2ನೇ ಸ್ಥಾನ ಪಡೆದರು.

ಫುಟ್‌ಬಾಲ್: ಭಾರತ–ಮಾಲ್ಡೀವ್ಸ್ ಪಂದ್ಯ ಇಂದು

ಬೆಂಗಳೂರು: ಭಾರತ ಮತ್ತು ಮಾಲ್ಡೀವ್ಸ್ ಮಹಿಳಾ ತಂಡಗಳ ನಡುವಣ ಗುರುವಾರ ಎರಡನೇ ಸ್ನೇಹಪರ ಫುಟ್‌ಬಾಲ್ ಪಂದ್ಯ ನಡೆಯಲಿದೆ. ಮೊದಲ ಪಂದ್ಯದಲ್ಲಿ ಆತಿಥೇಯ ಭಾರತ ತಂಡವು ಜಯಿಸಿತ್ತು.

ಭಾರತ ತಂಡವು ಆರು ಆಟಗಾರರ ಬದಲಾವಣೆಯೊಂದಿಗೆ ಕಣಕ್ಕಿಳಿಯಲಿದೆ. ಪ್ಯಾರಿ ಸಾಸಾ, ಲಿಂಡಾ ಕೋಮ್ ಸರ್ಟೊ, ಗ್ರೇಸ್ ದಾಂಗ್ಮಿ, ಜೂಲಿ ಕಿಶನ್ ಮತ್ತು ಸಂಜು ಅವರು ಮೊದಲ ಪಂದ್ಯದಲ್ಲಿ ಆಡಿದ್ದರು. ಈ ಪಂದ್ಯದಿಂದ ವಿಶ್ರಾಂತಿ ನೀಡಲಾಗಿದೆ.

ಅವರ ಬದಲಿಗೆ ಮೋನಿಶಾ ಸಿಂಗ್ (ಸ್ಟ್ರೈಕರ್), ಅನೂಷಾ ಮಂದಾಲಾ (ಮಿಡ್‌ಫೀಲ್ಡರ್), ತಿಂಗಬೂಜಾಮ್ ಸಂಜಿತಾ ದೇವಿ (ಡಿಫೆಂಡರ್), ಖುಮುಕಚಾಮ್ ಭೂಮಿಕಾ ಚಾನು (ಮಿಡ್‌ಫೀಲ್ಡರ್) ಮತ್ತು ತಮನ್ನಾ (ಡಿಫೆಂಡರ್) ಸ್ಥಾನ ಪಡೆದಿದ್ದಾರೆ.

ಹೊಸ ಮಾದರಿಗಳಿಂದ ಯುವ ಆಟಗಾರರು ದಾರಿತಪ್ಪುತ್ತಿರುವ ಆತಂಕ

ರಾಜ್ಯದ ಕಬಡ್ಡಿಯಲ್ಲಿ ಉದ್ದೀಪನ ಮದ್ದು ಸದ್ದು

• ವಿಕ್ರಂ ಕಾಂತಿಕೆರೆ

ಮಂಗಳೂರು: ರಾಜ್ಯದ ಕಬಡ್ಡಿ ವಲಯದಲ್ಲಿ ಈಚೆಗೆ ಉತ್ತೇಜಕ ಮದ್ದು ಸದ್ದುಮಾಡತೊಡಗಿದೆ. ಹೆಚ್ಚು ಟೂರ್ನಿಗಳು ನಡೆಯುವ ದಕ್ಷಿಣ ಕನ್ನಡ, ಉಡುಪಿ, ನೆರೆರಾಜ್ಯದ ಕಾಸರಗೋಡಿನ ಜೊತೆ ಮಲೆನಾಡಿನ ಕೆಲವು ಪ್ರದೇಶಗಳಲ್ಲಿ ಯುವ ಆಟಗಾರರು ಶಕ್ತಿವರ್ಧಕ ಹಾಗೂ ತೂಕ ಕಡಿಮೆ ಮಾಡುವ ಔಷಧಗಳನ್ನು ಬಳಸುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ದೇಶದ ಕಬಡ್ಡಿ ಕ್ಷೇತ್ರದಲ್ಲಿ ಒಂದು ದಶಕದಲ್ಲಿ ಆಗಿರುವ ಕ್ರಾಂತಿಯಿಂದಾಗಿ ಕೆಲವು ಪ್ರದೇಶಗಳು ಹೊಸ ಮಾದರಿಯ ಲೀಗ್‌ಗಳಿಗೆ ನಾಂದಿ ಹಾಡಿವೆ. ದಕ್ಷಿಣ ಕರ್ನಾಟಕ ಇಂಥ ಒಂದು ಪ್ರದೇಶ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು–ಮೂರು ವರ್ಷಗಳಿಂದ ತಡರಾತ್ರಿ ಅಥವಾ ಮುಂಜಾನೆಯ ವರೆಗೂ ಲೀಗ್ ಪಂದ್ಯಗಳನ್ನು ಆಯೋಜಿಸಲಾಗುತ್ತಿದೆ. ಮುಕ್ತ ಲೀಗ್‌ಗಳಲ್ಲಿ ದೊಡ್ಡ ಮೊತ್ತ ಸಿಗುವುದರಿಂದ ಪ್ರದರ್ಶನ ಉತ್ತಮಪಡಿಸಲು ಆಟಗಾರರು ಹಾತೊರೆಯುತ್ತಾರೆ. ಆಟಗಾರರನ್ನು ಹರಾಜಿನಲ್ಲಿ ಪಡೆಯುವವರಿಗೆ ತಂಡದ ಗೆಲುವು ಪ್ರತಿಷ್ಠೆಯಾಗಿರುತ್ತದೆ. ಆದ್ದರಿಂದ ಕೆಲವೊಮ್ಮೆ ಅವರೇ ಉತ್ತೇಜಕ ಮದ್ದಿಗೆ ದಾರಿಮಾಡಿಕೊಡುವುದೂ ಉಂಟು ಎಂಬ ಮಾತುಗಳೂ ಕೇಳಿಬಂದಿವೆ.

ದೇಹತೂಕದ ಆಧಾರದಲ್ಲಿ ನಡೆಯುವ ಟೂರ್ನಿಗಳ ಸಂಖ್ಯೆಯೂ ಕರಾವಳಿ ಮತ್ತು ಮಲೆನಾಡಿನಲ್ಲಿ ಇತ್ತೀಚೆಗೆ ಹೆಚ್ಚಾಗಿದ್ದು ಅಲ್ಲಿ ತೂಕ ಇಳಿಸುವ ಡೈಯುರೆಟಿಕ್‌ಗಳ ಬಳಕೆಯೂ ನಡೆಯುತ್ತಿದೆ ಎಂದು ಕೆಲವು ಆಟಗಾರರೇ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಶಕ್ತಿವರ್ಧಕ ಸ್ಟಿರಾಯ್ಡ್‌ಗಳು ಮತ್ತು ನೋವು ನಿವಾರಕ, ವೇಗವಾಗಿ ಗುಣಪಡಿಸುವ ಗುಣವುಳ್ಳ, ಹೆಚ್ಚು ಅವಧಿಯವರೆಗೆ ಅಭ್ಯಾಸ ಮಾಡಲು ಅನುಕೂಲವಾಗುವ ನಾರ್ಕೊಟಿಕ್ ಅನಲಾಗ್ಸ್‌ಗಳಿಗೂ ಬೇಡಿಕೆ ಇದೆ. ಇತ್ತೀಚೆಗೆ ಮಂಗಳೂರು ನಗರದಲ್ಲಿ ನಡೆದ ಲೀಗ್ ಒಂದರ ಸಂದರ್ಭದಲ್ಲಿ ಅಂಗಣದ ಹಿಂಭಾಗದಲ್ಲಿ ಅನೇಕ ಸಿರಿಂಜ್‌ಗಳು ಪತ್ತೆಯಾಗಿದ್ದವು.

'ಆಟಗಾರರ ಆರೋಗ್ಯ ಮತ್ತು ಭವಿಷ್ಯಕ್ಕೆ ದೋಷ ಉಂಟುಮಾಡುವ ಉತ್ತೇಜಕ ಮದ್ದಿನ 'ಆಟ' ನಿಲ್ಲಬೇಕು' ಎಂದು ಕಬಡ್ಡಿ ಸಂಘಟಕ ಗೋಪಿನಾಥ್ ಕುಮಾರ್ ಹೇಳಿದರು.

'ಹೊರಜಿಲ್ಲೆಗಳಲ್ಲಿ ಮಾತ್ರ ಇದ್ದ ಈ ಚಾಳಿ ಈಗ ಮಲೆನಾಡಿಗೂ ವಿಸ್ತರಿಸಿದೆ. ಅಜ್ಜಂಪುರದಲ್ಲಿ ಈಚೆಗೆ ನಡೆದ ರಾಜ್ಯಮಟ್ಟದ ಲೀಗ್‌ನಲ್ಲಿ ಆಟಗಾರರು ಉತ್ತೇಜಕ ಮದ್ದು ಸೇವಿಸಿದ್ದು ಕಂಡುಬಂದಿದೆ' ಎಂದು ಕೊಪ್ಪದ ಆಟಗಾರರೊಬ್ಬರು ತಿಳಿಸಿದರು.

'ಅತಿಯಾದ ಒತ್ತಡವೇ ಹೀಗೆ ಅಡ್ಡ ದಾರಿ ಹಿಡಿಯಲು ಕಾರಣ. ಕೆಲವೊಮ್ಮೆ ನಿರಂತರವಾಗಿ ರಾತ್ರಿ ವೇಳೆ ಪಂದ್ಯಗಳನ್ನು ಆಡಬೇಕಾಗುವುದರಿಂದ ಶಕ್ತಿ ವರ್ಧಿಸಲು ಮದ್ದು ತೆಗೆದುಕೊಳ್ಳುತ್ತಾರೆ' ಎಂದು ದಕ್ಷಿಣ ಕನ್ನಡದ ವಿಟ್ಲದ ಆಟಗಾರರೊಬ್ಬರು ಹೇಳಿದರೆ, 'ಹೊರ ಜಿಲ್ಲೆಗಳಿಗೆ ಹೋಗಿ ಬಂದವರಿಂದಾಗಿ ಮಲೆನಾಡಿಗೂ ಈ ದಂಧೆ ಹಬ್ಬಿದೆ. ಇದನ್ನು ತಡೆಯದೇ ಇದ್ದರೆ ದೊಡ್ಡ ಸಮಸ್ಯೆ ಆಗಲಿದೆ' ಎಂದು ಚಿಕ್ಕಮಗಳೂರಿನವರೊಬ್ಬರ ಮಾತು.


ಕಬಡ್ಡಿ ಲೀಗ್ ಒಂದರ ಅಂಗಣದಾಚೆ ಲಭಿಸಿದ ಸಿರಿಂಜ್‌ಗಳು

ಸಾವಿಗೆ ನೇರ ಕಾರಣವಾಗುವುದಿಲ್ಲ


ಡಾ.ಕಿರಣ್ ಕುಲಕರ್ಣಿ

ಈಚೆಗೆ ಬೇರೆ ಬೇರೆ ಟೂರ್ನಿಗಳಲ್ಲಿ ಆಡುತ್ತಿರುವಾಗಲೇ ಆಟಗಾರರು ಸಾವಿಗೀಡಾದಾಗ ಉತ್ತೇಜಕ ಮದ್ದು ಸೇವನೆಯ ವಿಷಯ ಮುನ್ನೆಲೆಗೆ ಬಂದಿತ್ತು. ಆದರೆ ಆಗೊಮ್ಮೆ ಈಗೊಮ್ಮೆ ಪಂದ್ಯಗಳಿಗಾಗಿ ಮದ್ದು ಸೇವಿಸುವುದರಿಂದ ಸಾವು ಸಂಭವಿಸುವ ಸಾಧ್ಯತೆ ಕಡಿಮೆ ಎಂದು ಕ್ರೀಡಾ ವೈದ್ಯ, ಧಾರವಾಡದ ಡಾ.ಕಿರಣ್ ಕುಲಕರ್ಣಿ ತಿಳಿಸಿದರು. ಉತ್ತೇಜಕ ಮದ್ದು ಕೂಡ ಸಾವಿಗೆ ಒಂದು ಕಾರಣ ಆಗುವ ಸಾಧ್ಯತೆ ಇದೆ. ದೀರ್ಘಕಾಲ ನಿರಂತರವಾಗಿ ಇಂಥ ಔಷಧಿ ಸೇವಿಸಿದರೆ ಹೃದಯಸ್ತಂಭನ ಆಗುವ ಸಂಭವ ಇದೆ ಎಂದು ಅವರು ಹೇಳಿದರು.

ಪೊಲೀಸರು ಅಸಹಾಯಕರು

ರಾಷ್ಟ್ರೀಯ ಮಟ್ಟದ ಟೂರ್ನಿಗಳಲ್ಲಿ ಡೋಪಿಂಗ್ ತಡೆಯಲು ರಾಷ್ಟ್ರೀಯ ಉತ್ತೇಜಕ ಮದ್ದು ತಡೆ ಘಟಕ (ನಾಡಾ) ಇದೆ. ಆದರೆ ಖಾಸಗಿಯಾಗಿ ನಡೆಯುವ, ಸಣ್ಣ ಟೂರ್ನಿಗಳಲ್ಲಿ ಇಂಥ ಮದ್ದು ಬಳಕೆ ತಡೆಗೆ ಯಾವ ಮಾರ್ಗವೂ ಇಲ್ಲ. ಪೊಲೀಸರು ಕೂಡ ನೇರವಾಗಿ ಕ್ರಮ ಕೈಗೊಳ್ಳಲು ಸಾಧ್ಯವಾಗುವುದಿಲ್ಲ. 'ಪೊಲೀಸರು ಮಧ್ಯಪ್ರವೇಶ ಮಾಡಿದರೂ ಆಟಗಾರ ಸೇವಿಸಿದ ಔಷಧಿ ನಾರ್ಕೋಟಿಕ್ ಡ್ರಗ್ಸ್ ಆ್ಯಂಡ್ ಸೈಕೊಟ್ರಾಪಿಕ್ ಸಬ್‌ಸ್ಟಾನ್ಸಸ್ ಆ್ಯಕ್ಟ್‌ನ ವ್ಯಾಖ್ಯೆಗೆ ಒಳಪಟ್ಟಿರಬೇಕು. ಇಲ್ಲವಾದರೆ ಏನೂ ಮಾಡಲಾಗುವುದಿಲ್ಲ' ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಎನ್ ತಿಳಿಸಿದರು.

ಉದ್ದೀಪನಾ ಮದ್ದು ಬಳಸುತ್ತಿರುವುದು ನಿಜವಾಗಿದ್ದಲ್ಲಿ ತಡೆಯಲು ಕ್ರಮ ಕೈಗೊಳ್ಳಲಾಗುವುದು. ಸಭೆಯಲ್ಲಿ ಈ ಕುರಿತು ಚರ್ಚಿಸಲಾಗುವುದು

ಬಿ.ಸಿ.ಸುರೇಶ್
ರಾಜ್ಯ ಅಮೆಚೂರ್ ಕಬಡ್ಡಿ ಸಂಸ್ಥೆಯ ಅಧ್ಯಕ್ಷ

ಯಾವುದೇ ಕ್ರೀಡೆ ಇರಲಿ, ಅದರಲ್ಲಿ ಸಾಧನೆಗೆ ಕಳ್ಳದಾರಿ ಸರಿಯಲ್ಲ. ಯುವಪೀಳಿಗೆ ಉತ್ತೇಜಕ ಮದ್ದಿಗೆ ಮರುಳಾಗಿ ಅವರು ಜೀವನ ಹಾಳುಮಾಡಿಕೊಳ್ಳಬಾರದು.

ಸಿ.ಹೊನ್ನಪ್ಪಗೌಡ
ಅಂತರರಾಷ್ಟ್ರೀಯ ಮಾಜಿ ಆಟಗಾರ

ಚೆಸ್: ಬದಲಾಗದ ಭಾರತದ ಅಗ್ರ ಆಟಗಾರರ ಕ್ರಮಾಂಕ

ನವದೆಹಲಿ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್‌ಗಳಾದ ಅರ್ಜುನ್ ಇರಿಗೇಶಿ ಮತ್ತು ಡಿ.ಗುಕೇಶ್ ಅವರು ಬುಧವಾರ ಪ್ರಕಟವಾದ ಫಿಡೆ ಕ್ರಮಾಂಕಪಟ್ಟಿಯಲ್ಲಿ ನಾಲ್ಕು ಮತ್ತು ಐದನೇ ಸ್ಥಾನ ಉಳಿಸಿಕೊಂಡಿದ್ದಾರೆ.

ವಿಶ್ವನಾಥನ್ ಆನಂದ್ ನಂತರ 2800 ರೇಟಿಂಗ್ ಮೈಲಿಗಲ್ಲು ದಾಟಿದ ಭಾರತದ ಎರಡನೇ ಆಟಗಾರನಾಗಿರುವ ಇರಿಗೇಶಿ 2801 ರೇಟಿಂಗ್ ಹೊಂದಿದ್ದಾರೆ. ಕಳೆದ ತಿಂಗಳ ಮಧ್ಯದಲ್ಲಿ ಡಿಂಗ್ ಲಿರೆನ್ ಅವರನ್ನು ಸೋಲಿಸಿ ನೂತನ ವಿಶ್ವ ಚಾಂಪಿಯನ್ ಆಗಿರುವ 18 ವರ್ಷ ವಯಸ್ಸಿನ ಗುಕೇಶ್ 2783 ರೇಟಿಂಗ್ ಹೊಂದಿದ್ದಾರೆ.

ವಿಶ್ವನಾಥನ್ ಆನಂದ್ (2750) ಅವರೂ ಹತ್ತನೇ ಸ್ಥಾನ ಕಾಪಾಡಿಕೊಂಡಿದ್ದಾರೆ.

ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ (2831), ಅಮೆರಿಕದ ಫ್ಯಾಬಿಯಾನೊ ಕರುವಾನ (2803) ಮತ್ತು ಹಿಕಾರು ನಕಾಮುರಾ (2802) ಕ್ರಮವಾಗಿ ಮೊದಲ ಮೂರು ಸ್ಥಾನ ಉಳಿಸಿಕೊಂಡಿದ್ದಾರೆ.

ಆರ್.ಪ್ರಜ್ಞಾನಂದ (13ನೇ ಸ್ಥಾನ), ಅರವಿಂದ ಚಿದಂಬರಂ (23), ವಿದಿತ್ ಗುಜರಾತಿ (24), ಪೆಂಟಾಲ ಹರಿಕೃಷ್ಣ (36), ನಿಹಾಲ್ ಸರಿನ್ (41) ಮತ್ತು ರೌನಕ್ ಸಾಧ್ವಾನಿ (48) ಅವರು ಅಗ್ರ 50ರಲ್ಲಿ ಸ್ಥಾನ ಪಡೆದಿದ್ದಾರೆ.

ನಾಲ್ಕು ದಿನ ಹಿಂದೆ ಮಹಿಳಾ ವಿಶ್ವ ರ್‍ಯಾಪಿಡ್ ಚಾಂಪಿಯನ್ ಆಗಿರುವ ಕೋನೇರು ಹಂಪಿ ಅವರು ಮಹಿಳಾ ವಿಭಾಗದಲ್ಲಿ ಆರನೇ ಸ್ಥಾನದಲ್ಲಿದ್ದಾರೆ. ಅವರ ರೇಟಿಂಗ್ 2523. ಮೊದಲ ನಾಲ್ಕು ಸ್ಥಾನಗಳಲ್ಲಿ ಚೀನಾ ಆಟಗಾರ್ತಿಯರೇ ಇದ್ದಾರೆ. ಅವರೆಂದರೆ ಹೌ ಇಫಾನ್ (2633), ಜು ವೆನ್‌ಜುನ್ (2561), ತಾನ್ ಝೊಂಗ್ವಿ (2561) ಮತ್ತು ಲೀ ಟಿಂಗ್ಜೀ (2552).

ಭಾರತದ ದಿವ್ಯಾ ದೇಶಮುಖ್ 14ನೇ, ದ್ರೋಣವಲ್ಲಿ ಹಾರಿಕಾ 16ನೇ ಮತ್ತು ಆರ್. ವೈಶಾಲಿ 19ನೇ ಸ್ಥಾನದಲ್ಲಿದ್ದಾರೆ.

ಜೂನಿಯರ್ ಪುರುಷರ ವಿಭಾಗದಲ್ಲಿ ಗುಕೇಶ್ ಮತ್ತು ಪ್ರಜ್ಞಾನಂದ ಮೊದಲೆರಡು ಸ್ಥಾನಗಳಲ್ಲಿ ಇದ್ದಾರೆ.

ಮುನ್ನಡೆಯಲ್ಲಿ ಅರಿತ್, ಕಿಯಾನಾ

ಪುಣೆ (ಪಿಟಿಐ): ದೆಹಲಿಯ ಅರಿತ್ ಕಪಿಲ್, 37ನೇ ರಾಷ್ಟ್ರೀಯ 9 ವರ್ಷದೊಳಗಿನವರ ಬಾಲಕರ ವಿಭಾಗ ವಿಭಾಗದ ಹತ್ತನೇ ಸುತ್ತಿನ ನಂತರ 9 ಪಾಯಿಂಟ್‌ಗಳೊಮದಿಗೆ ಮುನ್ನಡೆ ಉಳಿಸಿಕೊಂಡಿದ್ದಾರೆ.

ಬುಧವಾರ ನಡೆದ 10ನೇ ಸುತ್ತಿನಲ್ಲಿ ಮಣಿ ಸುರ್ಬರ್ತೊ (7.5) ಅವರನ್ನು ಸೋಲಿಸಿದರು.

ಬಾಲಕಿಯರ ವಿಭಾಗದಲ್ಲಿ ರಾಜಸ್ಥಾನದ ಕಿಯಾನಾ ಪರಿಹಾರ್ (9 ಪಾಯಿಂಟ್ಸ್) ಅಗ್ರಸ್ಥಾನದಲ್ಲಿದ್ದಾರೆ. ಅವರು ಸಾಯಿ ಅನ್ವಿತಾ ಪುವ್ವಲ (7) ಅವರನ್ನು ಮಣಿಸಿದರು.